ಬೆಳ್ಳಿಹಬ್ಬ

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ



ಸಂಚಿಕೆ ೯೭

ಸಂಚಯ ಗ್ಯಾಲರಿ



ಜಾನ್ ಸ್ಟೀವನ್ ಫರ್ನಾಂಡಿಸ್ ಛಾಯಾಚಿತ್ರಗಳು

ಬೆಳ್ಳಿಹಬ್ಬ
(೧೯೮೭-೨೦೧೨)

- ದ್ವೈಮಾಸಿಕ
- ಸಂಚಿಕೆ : ೯೬
- ಜನವರಿ-ಫೆಬ್ರವರಿ ೨೦೧೨

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೪೦ ೬೩೫೧೪

ಮಂದಿ ನನ್ನ ಶಾಯಿ-ಲೇಖನಿ ಕಿತ್ತುಕೊಂಡರೆ ಚಿಂತೆ ಇಲ್ಲ
ಬೆರಳನ್ನೇ ಅದ್ದಿದ್ದೇನೆ ಗುಂಡಿಗೆಯ ಬಿಸಿ ರಕ್ತದಲ್ಲಿ
ನಾಲಗೆಗೆ ಸಂಕೋಲೆ ಹಾಕಿದರೆ ಚಿಂತೆ ಏನೇನೂ ಇಲ್ಲ
ಸರಪಳಿಯ ಪ್ರತಿ ಉಂಗುರಕ್ಕೂ ಕಲಿಸಿದ್ದೇನೆ ನನ್ನ ಮಾತು.


ಫೈಜ್ ಅಹಮದ್ ಫೈಜ್

ಮುಖಪುಟ ಚಿತ್ರ:
ಸ್ಟೀವನ್ ಫರ್ನಾಂಡಿಸ್

ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೨೫೦/- ● ಎರಡು ವರ್ಷಕ್ಕೆ : ರೂ. ೫೦೦/-

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ **ಕೆನರಾಬ್ಯಾಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: ೧೮೨೧೧೦೧೦೦೪೬೮೨ಗೆ** ನಿಮ್ಮೂರಿನಿಂದ ಜಮಾ ಮಾಡಬಹುದು. ಜಮಾ ಮಾಡಿದ ವಿವರ ತಿಳಿಸಿ.



ಹೊಳೆದದ್ದು ತಾರೆ
ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ತಡವಾಗಿ ಹೊಸ ವರ್ಷದ ಶುಭಾಶಯಗಳು. ಇದು ನಮ್ಮ ಪುಟ್ಟ ಪತ್ರಿಕೆಯ ಬೆಳ್ಳಿ ಹಬ್ಬದ ವರ್ಷ. ಹುಡುಗಾಟದ ಕೆಲಸವೊಂದು ಇಪ್ಪತ್ತೈದು ವರ್ಷ ಬಾಳುವಂಥದ್ದು ಅಂತ ಅವತ್ತು ಇದನ್ನು ಆರಂಭಿಸಿದ ನಮ್ಮಲ್ಲಿ ಯಾರಿಗೂ ಊಹೆಯಿರಲಿಲ್ಲ. ಕೆಲವರು ಕೇಳಿದರು, ಈಗಷ್ಟೇ ಇಪ್ಪತ್ತು ಸಂಪುಟ ಮುಗಿದಿದೆ ಇಪ್ಪತ್ತೈದನೇ ವರ್ಷ ಹೇಗೆ ಅಂತ. ೧೯೮೭ರ ಜೂನ್ ೭ಕ್ಕೆ ಈ ಪುಟ್ಟ ಪತ್ರಿಕೆ ಮೊದಲಿಟ್ಟಿದ್ದು. ಕೆಲವು ವರ್ಷಗಳು– ಅದರಲ್ಲೂ ೯೨, ೯೬. ೯೭ರಲ್ಲಿ ವರ್ಷವೊಂದಕ್ಕೆ ಹೊರಬಂದಿದ್ದು ಒಂದೋ, ಎರಡೋ ಸಂಚಿಕೆಗಳು. ಈ ನಡುವೆ ಜಾರುವ ಕಾಲಕ್ಕೆ ಜೊತೆಯಾಗಿ ಪತ್ರಿಕೆಯ ನಡಿಗೆ ಸಾಗಿ ಬರಲಿಲ್ಲ. ೨೦೦೦ ದಿಂದ ೨೦೦೮ರ ತನಕ ಸಂಚಯ ತ್ರೈಮಾಸಿಕವಾಗಿ ಮೂರು ತಿಂಗಳಿಗೊಂದರಂತೆ ಪ್ರಕಟಗೊಂಡಿತು. ಈ ಎಲ್ಲಾ ಏಳುಬೀಳುಗಳ ನಡುವೆಯೂ ಈ ಪತ್ರಿಕೆ ತನ್ನ ಸಾತತ್ಯ ಉಳಿಸಿಕೊಂಡಿದೆ. ಸರಾಸರಿ ವರ್ಷಕ್ಕೆ ನಾಲ್ಕು ಸಂಚಿಕೆ ಪ್ರಕಟಗೊಂಡಿದೆ. ವೈವಿಧ್ಯತೆ, ಪ್ರಯೋಗಶೀಲತೆಯ ಮೂಲಕ ಸಂಚಯ ತನ್ನ ವಿಶಾಲವಾದ ಓದುಗ ಬಳಗವನ್ನು ರೂಪಿಸಿಕೊಂಡಿದೆ. ಜೊತೆಗೂಡಿದವರು, ಪ್ರೀತಿಯಿಂದ ಓದಿದವರು, ಓದದೆಯೂ ಟೀಕಿಸಿದವರು, ಬರೀ ಮಾತಾಡಿದವರು, ಮಾತಾಡಬೇಕಾದಾಗಲೂ ಮೌನವಾಗಿದ್ದವರು ಎಲ್ಲರೂ ಬೆಳೆಸಿದ್ದಾರೆ, ಮಾಗಿಸಿದ್ದಾರೆ, ಆಗಾಗ ಮುಗಿಸಿಯೂ ಇದ್ದಾರೆ. ಆದರೂ ಪತ್ರಿಕೆ ಮಾತ್ರ ತನ್ನ ಪಾಡಿಗೆ ತಾನು ಸದ್ದಿಲ್ಲದೆ ಜುಳುಜುಳು ಹರಿಯುವ ನಿಶ್ಶಬ್ದ ಹೊಳೆಯ ಹಾಗೆ ವರ್ತಮಾನದ ಸಾಕ್ಷಿಯಾಗಿ ಹರಿದಿದೆ. ಕಾಲಕಾಲಕ್ಕೆ ಬದಲಾಗಿದೆ, ಜೀವಂತಿಕೆಯಿಂದ ಯಾವ ಪಕ್ಷ, ಪಂಥಗಳ ಹಂಗಿಗೆ ಬೀಳದೆ ಸಾಗಿಬರುತ್ತಿದೆ.

ಕನ್ನಡದಲ್ಲಿ ಇಪ್ಪತ್ತೈದು ವಸಂತಗಳನ್ನು ದಾಟಿದ ಸಾಹಿತ್ಯ ಪತ್ರಿಕೆಗಳು ನಾಲ್ಕು ಅಥವಾ ಐದು ಮಾತ್ರ . ಮೊದಲ ಸಾಹಿತ್ಯ ಪತ್ರಿಕೆಯಾಗಿ ರೂಪುಗೊಂಡ ವಾಗ್ಭೂಷಣ (೧೮೯೬) ನಿಂತು ನಿಂತು ನಡೆದು ಕೊನೆಗೊಂಡಿತು. ಸಾಹಿತ್ಯ ಪರಿಷತ್ತಿನ 'ಪರಿಷತ್ ಪತ್ರಿಕೆ'ಯೂ (೧೯೧೬) ಇಪ್ಪತ್ತೈದು ದಾಟಿದೆ. ಆಧುನಿಕ ಕನ್ನಡದ ಸಾಹಿತ್ಯ ಪತ್ರಿಕೆಗಳಿಗೊಂದು ಮಾದರಿಯಾದ ಪ್ರಬುದ್ಧ ಕರ್ಣಾಟಕ(೧೯೧೯) ಮೊದಲ ಹದಿಮೂರು ವರ್ಷ ಸ್ವತಂತ್ರವಾಗಿದ್ದು, ಆಮೇಲೆ ಅದು ಮೈಸೂರು ವಿಶ್ವವಿದ್ಯಾಲಯದ ಭಾಗವಾಯ್ತು. ಬಿ.ಎಂ.ಶ್ರೀ. ಈ ಪತ್ರಿಕೆಯನ್ನು ಉಳಿಸುವ ಪ್ರಯತ್ನ ಮಾಡಿ ವಿಶ್ವವಿದ್ಯಾಲಯದ ಬೆಂಬಲ ಒದಗಿಬರುವಂತೆ ಮಾಡಿದರು. ಜೀವನ(೧೯೪೦) ಬೇಂದ್ರೆ, ಗೋಕಾಕ್, ಮುಗಳಿ ಇವರುಗಳ 'ಗೆಳೆಯರ ಗುಂಪಿನ' ನೇತೃತ್ವದಲ್ಲಿ ಆರಂಭಗೊಂಡರೂ ೪೪ರಲ್ಲಿ ಮಾಸ್ತಿ ಅದನ್ನು ಕೈಗೆತ್ತಿಕೊಂಡರು. ಎರಡನೇ ಮಹಾಯುದ್ಧ ಕಾಲದಲ್ಲಿ ಮುಂಬೈ ಪ್ರಾಂತದಲ್ಲಿ ಪೇಪರ್ ದುರ್ಲಭವಾಗಿತ್ತು. ಆದ

ಕಾರಣ, ಧಾರವಾಡದಿಂದ ಜೀವನ ಬೆಂಗಳೂರಿಗೆ ಬಂತು. ಇಪ್ಪತ್ತೊಂದು ವರ್ಷ ನಿರಂತರ ನಡೆಸಿದ ಮಾಸ್ತಿ ಅದಕ್ಕೊಂದು ಸ್ಥಿರತೆ ಕಲ್ಪಿಸಿದರು. ನಂತರ ಅದು ಅವರಿವರ ಕೈದಾಟಿ ಕೊನೆಗೆ ನಿಂತಿತು. ಜೀವನದ ಅತ್ಯಂತ ಪ್ರಯೋಗಶೀಲ ಕಾಲ ಮೊದಲ ಐದು ವರ್ಷಗಳೇ. ಮಾಸ್ತಿಯವರ ಬಗ್ಗೆ 'ಜೀವನ ವಿಶೇಷಾಂಕ (೧೯೪೩) ಹೊರತಂದ ಕೆಲ ಕಾಲದಲ್ಲಿ ಬೇಂದ್ರೆ ಅವರಿಗೆ ಐವತ್ತು ತುಂಬಿದಾಗ ಅವರಿಗೊಂದು ಅಭಿನಂದನಾ ಗ್ರಂಥ ಸಿದ್ಧಗೊಂಡರೂ ಮುದ್ರಣಕ್ಕೆ ಪೇಪರ್ ಕಂಟ್ರೋಲ್ ಮೂಲಕ ಕಾಗದ ಸಿಗದೆ ಮಾಸ್ತಿ ಜೀವನ ಪತ್ರಿಕೆಯ ಬೆಂಗಳೂರಿನಿಂದ ಬೇಂದ್ರೆ ಕುರಿತ ವಿಶೇಷಾಂಕ ಪ್ರಕಟಿಸಿದರು(೧೯೪೬). ಆನಂತರ ಬಹುಮುಖ್ಯವಾಗಿ ಪ್ರಕಟಗೊಂಡ 'ಮನ್ವಂತರ' ಹಾಗೂ 'ಸಾಕ್ಷಿ' ಪತ್ರಿಕೆಗಳು ಬೆಳೆಸಿದ ವಿಮರ್ಶೆ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮ ಕೊಟ್ಟಿದೆ. ೧೯೬೫ರಲ್ಲಿ ಧಾರವಾಡದಿದ ಆರಂಭಗೊಂಡ ಸಂಕ್ರಮಣ ಕನ್ನಡದ ಎರಡು ಪ್ರಮುಖ ಚಳುವಳಿಗೆ ಬೆಂಬಲವಾಗಿದೆ. ನವ್ಯ ಹಾಗೂ ಬಂಡಾಯ ಸಾಹಿತ್ಯ ಚಳುವಳಿಗಳಿಗೆ ಸಂಕ್ರಮಣ ಜೊತೆಗಾರಿಕೆ ನೀಡಿತು. ೭೦ರ ದಶಕದಲ್ಲಿ ಸಂಕ್ರಮಣದ ಜೊತೆಗಾರಿಕೆಯಿಂದ ಗಿರಡ್ಡಿ ಮತ್ತು ಪಟ್ಟಣಶೆಟ್ಟಿ ಅವರುಗಳು ಹೊರಬಂದ ಮೇಲೆ ಚಂಪಾ ಏಕಾಂಗಿ ವೀರರಾಗಿ ಪತ್ರಿಕೆ ನಡೆಸಿದ್ದಾರೆ. ಈಗ ಸಂಕ್ರಮಣಕ್ಕೆ ನಲವತ್ತೈದು. ಅದು ಮತ್ತೈದು ದಾಟುವುದು ಕಷ್ಟವೇನಲ್ಲ. ಆದರೆ, ಮೊದಲಿನ ಮೂವರು ಸಂಪಾದಕರಿದ್ದ ಕಾಲಕ್ಕಿದ್ದ ವೈವಿಧ್ಯತೆ, ಗುಣಮಟ್ಟ ಈಗಿನ ಸಂಕ್ರಮಣಕ್ಕಿಲ್ಲ. ಇನ್ನು ಶೂದ್ರ, ಅನ್ವೇಷಣೆಗಳು ಇಪ್ಪತ್ತೈದು ದಾಟಿದ್ದರೂ ಅವು ತಮ್ಮ ಸಾತತ್ಯ ಉಳಿಸಿಕೊಂಡವುಗಳೇನಲ್ಲ.

ಸಂಚಯಕ್ಕೆ ಇಪ್ಪತ್ತೈದು ಇಷ್ಟು ಬೇಗ ಆಯ್ತೆ ಅನ್ನಿಸುತ್ತಿದೆ. ಇದಕ್ಕೊಂದು ನೆನಪಿನ ಬೆಂಭಾರ ಬೀಳಲಿದೆ. ಹಾಗೆ ನೆನಪಿನ ಬೆನ್ನ ಭಾರ ಮುಂದಿನ ನಡಿಗೆಯ ವೇಗ ಜೀವಂತಿಕೆಯನ್ನು ಕುಗ್ಗಿಸಬಾರದಷ್ಟೆ.

ಮತ್ತೆ ಮುಂದಿನ ಸಂಚಿಕೆಗೆ,

ನಿಮ್ಮ

ಸಂಪಾದಕ

ಈ ಸಂಚಿಕೆಯಲ್ಲಿ...

ಲೇಖನಗಳು.. ೪

ಕನ್ನಡ ಕಾವ್ಯದ ರಾಷ್ಟ್ರೀಯತೆಯ ಮಾದರಿಗಳು ಮತ್ತು ಗಾಂಧಿ ಸಾವು
ಜಯಪ್ರಕಾಶ ಶೆಟ್ಟಿ ಹೆಚ್

ಹಲವು ಬಣ್ಣಗಳ ಹಗ್ಗ: ಶಿವಪ್ರಕಾಶರ ಕಾವ್ಯ ೧೮
ಎನ್. ಸುರೇಶ ನಾಗಲಮಡಿಕೆ

ಏಕೀಕರಣೋತ್ತರ ಕನ್ನಡ ಸಾಹಿತ್ಯ: ಸಂಘರ್ಷ ಮತ್ತು ಸಾಮರಸ್ಯ ೩೦
ಟಿ.ಪಿ. ಅಶೋಕ

ಶ್ರೀಸಾಮಾನ್ಯಪರ ಧೋರಣೆಯ ಎಲ್. ಬಸವರಾಜು ೪೨
ಡಾ. ಜಿ.ಆರ್. ತಿಪ್ಪೇಸ್ವಾಮಿ

ಕಾವ್ಯ ಸಂಚಯ ೪೬
ಚಂದ್ರಕಾಂತ ದೇವತಾಲೆಯವರ ಅನುವಾದಿತ ಕವಿತೆಗಳು
ಅನು: ಸಿ.ವಿ.**ಶೇಷಾದ್ರಿ ಹೊಳವನಹಳ್ಳಿ**

ಫೈಜ್ ಅಹ್ಮದ್ ಫೈಜ್ ಕವಿತೆಗಳು
ಅನು: **ಆರ್. ವಿಜಯರಾಘವನ್**

ಕನ್ನಡಿಯ ಸೂರ್ಯ ೫೮
ಮಾಧವ ಕುಲಕರ್ಣಿ

ಬರೆಯುವುದು ಯಾರಿಗಾಗಿ?
ಜೀನ್ ಪಾಲ್ ಸಾರ್ತ್ರ್ ೬೯
ಅನು: ಕೇಶವ ಮಳಗಿ

ಪುಸ್ತಕ ವಿಮರ್ಶೆ ೭೪
• **ಅನು ಬೆಳ್ಳೆ**

ಕನ್ನಡ ಕಾವ್ಯದ ರಾಷ್ಟ್ರೀಯತೆಯ ಮಾದರಿಗಳು ಮತ್ತು ಗಾಂಧಿ ಸಾವು

ಗೋವಿಂದ ಪೈ ಮತ್ತು ಬೇಂದ್ರೆ ಕವನಗಳನ್ನು ಅನುಲಕ್ಷಿಸಿ

ಜಯಪ್ರಕಾಶ ಶೆಟ್ಟಿ ಹೆಚ್

೧

ಆಧುನಿಕ ಕನ್ನಡ ಕಾವ್ಯ ಜಗತ್ತನ್ನು ವಿವರಿಸಿಕೊಳ್ಳುವ ಸಂದರ್ಭದಲ್ಲಿ ಅದನ್ನು ವಿಶೇಷವಾಗಿ ಕಾಡಿದ ಪರಿಕಲ್ಪನೆಯಾಗಿ ರಾಷ್ಟ್ರೀಯತೆ ಮತ್ತು ಅತಿಯಾಗಿ ಆವರಿಸಿಕೊಂಡ ವ್ಯಕ್ತಿತ್ವವಾಗಿ ಗಾಂಧಿ ಈ ಎರಡರೊಂದಿಗಿನ ಮುಖಾಮುಖಿಯನ್ನು ಸಹಜವಾಗಿಯೇ ತಪ್ಪಿಸಿಕೊಳ್ಳಲಾಗದು. ಹೀಗೆ ಹೇಳುವಾಗ ಆಧುನಿಕ ಪರಿಭಾಷೆಯಾದ ರಾಷ್ಟ್ರೀಯತೆಯನ್ನು ಕನ್ನಡದ ಕಾವ್ಯ ಒಂದು ಏಕಾಕಾರಿ ಮಾದರಿಯಲ್ಲಿ ನಿರ್ವಚಿಸಿಕೊಳ್ಳಲಿಲ್ಲ ಮತ್ತು ಅದೇ ತೆರನಾಗಿ ಗಾಂಧಿಯನ್ನು ಆಹ್ವಾನಿಸಿಕೊಳ್ಳುವ ವೇಳೆಯಲ್ಲಿಯೂ ಅಲ್ಲೊಂದು ಏಕಾಕಾರಿ ಮಾದರಿಯ ಗಾಂಧಿ ಮೈತಳೆಯಲಿಲ್ಲ ಎಂಬುದನ್ನೂ ಮರೆಯಲಾಗದು. ರಾಷ್ಟ್ರೀಯತೆ ಮತ್ತು ಬಾಪೂವಿಗೆ ಸಂಬಂಧಿಸಿ ಕನ್ನಡ ಕಾವ್ಯ ತನ್ನ ಬಹುತ್ವವನ್ನು ದಾಖಲಿಸಿದೆ. ಸ್ವಯಂ ಗಾಂಧೀಜಿಯೇ ಕೇವಲ ಒಬ್ಬ ವ್ಯಕ್ತಿಯಾಗದೆ, ಭಾರತದ ರಾಷ್ಟ್ರೀಯತೆಯನ್ನು ವಿವರಿಸಿಕೊಳ್ಳಲಾದ ಪರಿಕಲ್ಪನೆಗಳಲ್ಲೊಂದರ ಪ್ರತಿನಿಧಿಯಾಗಿಯೇ ಕನ್ನಡದ ಬರಹ ಪ್ರಪಂಚದ ಸಂವೇದನೆಯೊಳಗೆ ದಾಖಲಾಗಿದ್ದಾರೆ. ಗಾಂಧೀಯುಗ ಮತ್ತು ಆಧುನಿಕ ಕನ್ನಡಕಾವ್ಯದ ಕಾಲ ಬಹುಮುಖ್ಯವಾಗಿ ರಾಷ್ಟ್ರೀಯ ಹೊರಾಟದ ಕಾಲ. ಹಾಗಾಗಿ ಆಧುನಿಕ ಕನ್ನಡ ಕಾವ್ಯ ಎನ್ನಲಾಗುವ ರಾಷ್ಟ್ರೀಯ ಹೋರಾಟದ ಉರುಬಿನ ಕಾಲವಾದ ನವೋದಯ ಕಾಲ, ಗಾಂಧಿ ಕುರಿತಂತೆ ಪ್ರತಿಕ್ರಿಯಿಸಲೇಬೇಕಾದ ಒತ್ತಡವನ್ನು ಅನುಭವಿಸಿತು. ಗಾಂಧಿ ಒಂದು ಶಕ್ತಿಯಾಗಿ ದೇಶದ ಮನಸ್ಸನ್ನು ಆವರಿಸಿಕೊಂಡಿದ್ದ ಕಾಲದಲ್ಲಿಯೆ ಗಾಂಧಿ ಕೊಲೆ ಹಠಾತ್ತಾಗಿ ಸಂಭವಿಸಿತು. ಕೊಲೆಗಡುಕನ ಗುಂಡಿಗೆ ಬಲಿಯಾಗಿ ಸಾಯಬಾರದ ಸಾವು ಸತ್ತ ಗಾಂಧಿ ಯ ದುರಂತ ಸಾವಿನ ಕಾಡುವಿಕೆಯಲ್ಲಿ ಆಧುನಿಕ ಕನ್ನಡ ಕಾವ್ಯ ಈ ಸಾವಿನ ನೋವನ್ನು ವಿಶೇಷವಾಗಿ ಅನುಭವಿಸಿತು. ಈ ನೋವನ್ನು ಹಾದು

ಬಂದುದರಿಂದಾಗಿಯೇ ನವೋದಯ ಕಾಲದ ಕನ್ನಡ ಕಾವ್ಯದಲ್ಲಿ ದಾಖಲಾದ ಘಟನೆಗಳಲ್ಲಿ ಗಾಂಧಿ ಸಾವಿಗೆ ವಿಶೇಷ ಮಹತ್ವ ಇದೆ. ಹೀಗೆ ಗಾಂಧಿ ಸಾವಿಗೆ ಸ್ಪಂದಿಸುವ ವೇಳೆ ವೇಳೆ ಕನ್ನಡ ಕಾವ್ಯಜಗತ್ತು ಆವಾಹಿಸಿಕೊಂಡ ರಾಷ್ಟ್ರೀಯತೆಯ ಕುರಿತಾದ ಗ್ರಹಿಕೆಗಳಲ್ಲಿ ಪರಿಪೂರ್ಣವಾಗಿ ಗಾಂಧೀ ಪ್ರಣೀತ ರಾಷ್ಟ್ರೀಯತೆಯ ಚಿಂತನೆಗಳು ಜಾಗಪಡೆದುವೇ? ಗಾಂಧೀ ಕೊಲೆ ವ್ಯಕ್ತಿಯೊಬ್ಬನ ಸಾವಿನ ಘಟನೆಯಾಗಿ, ಒಂದು ಮಾನವ ಹಿಂಸೆಯಾಗಿ ಅಷ್ಟೇ ಪರಿಭಾವಿಸಲ್ಪಟ್ಟಿತೆ? ಎಂಬ ಪ್ರಶ್ನೆಗಳೊಂದಿಗೆ, ದಟ್ಟ ವಿಷಾದದಲ್ಲಿ ದಾಖಲಾಗುವ ಗಾಂಧಿ ಸಾವಿನ ಮೂಲಕ ಕನ್ನಡಕಾವ್ಯ ಜಗತ್ತು ಕಟ್ಟಿಕೊಂಡ ರಾಷ್ಟ್ರೀಯತೆಯ ಮಾದರಿ ಮತ್ತದರ ರಾಜಕೀಯ ನಿಲುವುಗಳನ್ನು ಗಂಭೀರವಾಗಿಯೇ ಗಮನಿಸಬೇಕಾಗುತ್ತದೆ. ಯಾಕೆಂದರೆ ಕನ್ನಡ ಕಾವ್ಯದ ಈ ನಡೆಗೂ , ಕರ್ನಾಟಕದ ಮುಂದಿನ ರಾಜಕೀಯ ವಸ್ತುಸ್ಥಿತಿಯ ವಿಸ್ತರಣೆಗೂ ಇರುವ ಆಂತರಿಕ ಸಂಬಂಧವನ್ನು ವಿವರಿಸಿಕೊಳ್ಳುವಲ್ಲಿ ಈ ಸಂಗತಿ ಅತ್ಯಂತ ಅಗತ್ಯದ ಮಾಹಿತಿಯನ್ನು ಒದಗಿಸುತ್ತದೆ.

ಮೂಲಭೂತವಾಗಿ ರಾಷ್ಟ್ರೀಯತೆಯೆಂಬುದು ಆಧುನಿಕ ಪರಿಭಾಷೆ. ಅದೊಂದು ಪ್ರಜ್ಞಾಪೂರ್ವಕ ಪ್ರಯತ್ನದ ಕಾರಣದಿಂದ ಕಟ್ಟಿಕೊಳ್ಳಲಾಗುವ ನಿರ್ದಿಷ್ಟ ಪ್ರತಿಭಾಸೃಷ್ಟಿ. ಹಳೆಯ ಸಂಗತಿಗಳನ್ನು ಹೊಸ ಆಶಯ ಮತ್ತು ಅರ್ಥಗಳಿಗೆ ತಕ್ಕಂತೆ ಆಯ್ಕೆ ಮತ್ತು ಪ್ರತ್ಯೇಕತೆಗಳ ಸರಣಿಯಲ್ಲಿ ಆಯ್ದು ಜೋಡಿಸುವ ಮೂಲಕ ಕಟ್ಟಿಕೊಳ್ಳಲಾಗುವ ಈ ಪ್ರತಿಭಾಸೃಷ್ಟಿಯ ಹಿಂದೆ ನಿರ್ದಿಷ್ಟ ರಾಜಕೀಯ ಉದ್ದೇಶಗಳಿರುತ್ತವೆ. ನೆನಪುಗಳ ಪುನರ್ ಸಂಘಟನೆಯ ಮೂಲಕ ಕಟ್ಟಿಕೊಳ್ಳಲಾಗುವ ರಾಷ್ಟ್ರೀಯತೆಯೊಳಗೆ ಸಮುದಾಯಗಳು ತಮ್ಮ ಬಹುಮುಖೀ ವ್ಯಕ್ತಿತ್ವಗಳಿಂದ ಏಕಮುಖೀ ವ್ಯಕ್ತಿತ್ವಗಳಾಗಿ ರೂಪುಗೊಳ್ಳಬಲ್ಲ ಕಲ್ಪಿತ ಸಮುದಾಯಗಳಾಗಿಯೂ ಬದಲಾಗುತ್ತವೆ. ಭಾರತದ ರಾಷ್ಟ್ರೀಯ ಚಳವಳಿಯ ವಸಾಹತು ಕಾಲಘಟ್ಟದಲ್ಲಿಯೇ ರೂಪುಪಡೆದ ರಾಷ್ಟ್ರೀಯತೆಯ ಆಲೋಚನೆಗಳಲ್ಲಿ ಸಾಮಾಜಿಕ ಕಾಳಜಿಯ ದಲಿತನೆಲೆಯ ರಾಷ್ಟ್ರೀಯವಾದಿ ಚಿಂತನೆಗಳನ್ನು ಹೊರತು ಪಡಿಸಿ, ಮುಖ್ಯವಾಗಿ ಕಾಣುವ ಹಿಂದೂ ಮತ್ತು ಮುಸ್ಲಿಂ ನೆಲೆಗಳಲ್ಲಿ ಬೆಳವಣಿಗೆ ಕಂಡ ರಾಷ್ಟ್ರೀಯತೆಯ ಆಲೋಚನೆಗಳು ತಮ್ಮ ಪುನರ್ ಸಂಘಟನೆಗೆ ಮಧ್ಯಕಾಲೀನ ಚರಿತ್ರೆಯ ನೆನಪುಗಳಿಗೆ ಮರಳುತ್ತವೆ, ಸಮುದಾಯಗಳಲ್ಲಿ ಮುಖ್ಯ ಮತ್ತು ದ್ವಿತೀಯ ಎಂಬ ಸ್ಪಷ್ಟ ವಿಭಾಗವನ್ನು ಮಾಡಿಕೊಳ್ಳುತ್ತವೆ. ಆದರೆ ಈ ಪರಿಭಾಷೆಯನ್ನು ಗಾಂಧಿ ವಿವರಿಸಿಕೊಂಡ ಬಗೆಗೂ, ರಾಷ್ಟ್ರೀಯ ಹೋರಾಟದ ಇನ್ನಿತರ ಮುಂಚೂಣಿನಾಯಕರು ವಿವರಿಸಿಕೊಂಡ ಬಗೆಗೂ ಮೂಲಭೂತ ವ್ಯತ್ಯಾಸವೊಂದಿದೆ. ಭಾರತದ ರಾಷ್ಟ್ರೀಯತೆಯನ್ನು ಮರುಸಂಘಟಿಸಿಕೊಳ್ಳುವಲ್ಲಿ ಈ ಎರಡು ಕವಲುಗಳು ಗತ ಅಥವಾ ಮಧ್ಯಯುಗೀನ ಭಾರತವನ್ನು ನೋಡುವ ಕಣ್ಣುಗಳಲ್ಲಿ ಅಗಾಧ ವ್ಯತ್ಯಾಸವಿದೆ. ಡಿ.ಆರ್ ನಾಗರಾಜ ಅವರು ಗುರುತಿಸುವಂತೆ, ಈ ಪರಕೀಯ ಸಾಮ್ರಾಜ್ಯದ ಗರ್ಭದಲ್ಲಿದ್ದವರಿಗೆ ತಮ್ಮ ಗತಕಾಲದ ಸಾಮ್ರಾಜ್ಯದ ಬಗೆಗೆ ತೀವ್ರ ಹಂಬಲ, ಭಾರತೀಯ ರಾಷ್ಟ್ರೀಯವಾದಿಗಳಲ್ಲಿ ಗಾಂಧಿ ಒಬ್ಬರಿಗೆ ಬಿಟ್ಟರೆ ಇನ್ನುಳಿದವರಿಗೆ ಬಲಿಷ್ಠ ಸಾಮ್ರಾಜ್ಯ ರಾಷ್ಟ್ರೀಯತೆಯ ಹುಚ್ಚು. ಬಹುಮುಖ್ಯವಾಗಿ ಮತೀಯನೆಲೆಯಲ್ಲಿ ಭಾರತದ ರಾಷ್ಟ್ರೀಯತೆಯನ್ನು ವಿವರಿಸಿಕೊಂಡ ಈ ಗುಂಪುಗಳು ಗತವನ್ನು ವೀರ್ಯವತ್ತಾದ ಕ್ಷಾತ್ರ ಮಾದರಿಯಲ್ಲಿ ವಿವರಿಸಿಕೊಳ್ಳುವ ಮೂಲಕ ಕ್ಲೈಬ್ಯವನ್ನು ನಿರಾಕರಿಸಿಕೊಂಡುವು ಮತ್ತು ಹೆಣ್ಣಿಗನಲ್ಲದ ವೀರಭಾರತವನ್ನು ಸಂಘಟಿಸಿಕೊಂಡವು. ಅಹಿಂಸೆ ಈ ಪಥಕ್ಕೆ ಕ್ಲೈಬ್ಯದ ಮಾದರಿಯಾಗಿ ಕಂಡಿತ್ತು, ಹೇಡಿತನದ ಲಕ್ಷಣವಾಗಿತ್ತು. ದೇಶದ ಬಹುಸಂಖ್ಯಾತರ ವಕ್ತಾರನಂತೆ ಮಾತನಾಡುವ, ಸಾಂಸ್ಕೃತಿಕ ರಾಷ್ಟ್ರೀಯತೆಯೆಂದು ಕರೆಯಲಾಗುವ ಈ ಮಾದರಿಯನ್ನು ತಿಲಕ ಮಾದರಿಯ ರಾಷ್ಟ್ರೀಯತೆಯೆಂದೇ ಗುರುತಿಸಲಾಗುತ್ತದೆ. ಇದಕ್ಕೆ ಹೆಣ್ಣಿಗ ಭಾರತವನ್ನು ಕಂಡರೆ ಭಯ. ಸಹಜವಾಗಿಯೇ ವೀರಭಾರತವನ್ನು ಸಂಘಟಿಸಿಕೊಳ್ಳಬಯಸುವ ಮತೀಯನೆಲೆಯ ರಾಷ್ಟ್ರೀಯತೆ ಹಿಂಸಾ ಮಾದರಿಯದು. ಈ ಹಿಂಸಾ ಮಾದರಿಗೆ ಪ್ರತಿಯಾಗಿ ಗಾಂಧೀಮಾದರಿಯ ರಾಷ್ಟ್ರೀಯತೆ ಅಹಿಂಸೆಯ, ಒಳಗೊಳ್ಳುವ ಮಾದರಿಯದಾಗಿತ್ತು. ಗಾಂಧಿ ಮಾದರಿಗೆ ಬಲಕ್ಕಿಂತ ಸಾಮರಸ್ಯ ಮುಖ್ಯವಾಗಿತ್ತು. ಆಯ್ಕೆ

ಮತ್ತು ಪ್ರತ್ಯೇಕತೆಗಿಂತ ಸಹಬಾಳ್ವೆಯ ಬದುಕಿನ ಮಾದರಿ ಮುಖ್ಯವಾಗಿತ್ತು. ಈ ರಾಷ್ಟ್ರೀಯತೆಯ ಆಲೋಚನೆಗೆ ಭಾರತದ ಸಂಕರಶೀಲ ಸಾಂಸ್ಕೃತಿಕ ಸಂದರ್ಭದ ಸಹಜ ಸಾಹಚರ್ಯವೂ ಇತ್ತು. ಬಲಿಷ್ಠ ಸಾಮ್ರಾಜ್ಯದ ಹುಚ್ಚಿನಿಂದ ಅದು ತನ್ನನ್ನು ದೂರವಿರಿಸಿಕೊಂಡಿತ್ತು. ವಸಾಹತುಶಾಹಿ ಆಳ್ವಿಕೆಯಡಿಯಲ್ಲಿಯೇ ಅದರ ನೆರಳಾದ ರಾಷ್ಟ್ರೀಯತೆಯ ಮಾದರಿಯನ್ನು ಗಾಂಧಿ ಒಪ್ಪಿಕೊಂಡವರಾಗಿರಲಿಲ್ಲ. ಹೀಗೆ ಪ್ರಧಾನವಾಗಿ ಎರಡು ಕವಲುಗಳಲ್ಲಿ ಒಡೆದುಕೊಂಡ ಭಾರತದ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿಯೇ ರೂಪುಪಡೆದ ಈ ಭಿನ್ನ ರಾಷ್ಟ್ರೀಯತೆಗಳ ಕುರಿತಾದ ನಿರ್ವಚನವನ್ನು ತಿಲಕರ ಮಾದರಿ ಮತ್ತು ಗಾಂಧೀ ಮಾದರಿ ಎಂಬಂತೆ ಎರಡು ಪ್ರಭೇದಗಳಲ್ಲಿಯೇ ಗುರುತಿಸಲಾಗುತ್ತದೆ. ಆಧುನಿಕ ಕನ್ನಡ ಕಾವ್ಯದ ಆರಂಭ ಕಾಲವಾದ ನವೋದಯ ಯುಗವನ್ನು ವಿಶೇಷವಾಗಿ ಪ್ರಭಾವಿಸಿದ ರಾಷ್ಟ್ರೀಯತೆಯ ಮಾದರಿಗಳಿವು. ಇವುಗಳಲ್ಲಿ ಮಧ್ಯಕಾಲೀನ ಚರಿತ್ರೆಯ ವಲಸೆಯ ಮೂಲಕ ಕೋಮುವಾರು ವಿಂಗಡಣೆಯಲ್ಲಿ ರೂಪುಪಡೆದ ತಿಲಕ ಮಾದರಿಯ ರಾಷ್ಟ್ರೀಯತೆ ಮತೀಯ ಅಂತಃಕಲಹವನ್ನು ಹುಟ್ಟುಹಾಕುವ ಮಾದರಿಯದಾಗಿತ್ತು. ಸ್ವ ಮತ್ತು ಅನ್ಯವೆಂಬ ಸಮುದಾಯವಿಘಟನೆಯ ಶಕ್ತಿಗಳು ಅಲ್ಲಿ ಸಕ್ರಿಯವಾಗಿದ್ದವು. ಆದರೆ ಗಾಂಧೀಜಿಯವರು ಉಪವಾಸಗಳ ಮೂಲಕ ಅವುಗಳನ್ನು ಮೆಟ್ಟಿನಿಂತರು ಎಂಬುದನ್ನು ಗಮನಿಸಬೇಕು. ಹಾಗಾಗಿ ಈ ಎರಡು ರಾಷ್ಟ್ರೀಯತೆಯ ಮಾದರಿಗಳು ಒಂದನ್ನೊಂದು ಅನುಸರಿಸಲಿಲ್ಲ ಬದಲಿಗೆ ಒಂದನ್ನೊಂದು ಆಂತರಿಕವಾಗಿ ವಿರೋಧಿಸಿದುವು. ಈ ಹಿನ್ನೆಲೆಯಲ್ಲಿ ಭಾರತದ ರಾಷ್ಟ್ರೀಯ ಹೋರಾಟಕ್ಕೆ ಕೋಮುವಾದ ಮತ್ತು ಗಾಂಧಿವಾದದ ನಡುವಿನ ಸಂಘರ್ಷದ ಆಯಾಮವಿರುವುದನ್ನೂ ನಾವು ಈ ರಾಷ್ಟ್ರೀಯತೆಗಳನ್ನು ವಿವರಿಸಿಕೊಳ್ಳುವ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ.

ಪ್ರಸ್ತುತ ಲೇಖನದಲ್ಲಿ ಎರಡು ಭಿನ್ನ ಪ್ರಾದೇಶಿಕ ಆವರಣಕ್ಕೆ ಸೇರಿದ, ಆದರೆ ಗಾಂಧಿ ಸಾವಿಗೆ ಸಾಕ್ಷಿಯಾಗಿ ಬದುಕಿದ ಭಿನ್ನ ವಯೋಮಾನದ ಇಬ್ಬರು ಕವಿಗಳು ಗಾಂಧಿ ಸಾಹನ್ನು ಕುರಿತು ಬರೆದ ಎರಡು ಕವನಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಯಾಕೆಂದರೆ ರಾಷ್ಟ್ರಕವಿ ಎಂಬ ಹಿರಿಮೆಗೆ ಭಾಜನರಾದ ಗೋವಿಂದ ಪೈ ಅವರ 'ದೆಹಲಿ' ಹಾಗೂ ವರಕವಿ ಬೇಂದ್ರೆಯವರ 'ಶ್ರದ್ಧಾಂಜಲಿ' ಎಂಬ ಎರಡು ಕವನಗಳು ಗಾಂಧಿ ಸಾವನ್ನು ನೋವಿನಿಂದ ಅನುಭವಿಸುತ್ತಲೇ ತಮ್ಮೊಳಗಣ ರಾಜಕೀಯ ನಿಲುವಿನಲ್ಲಿ ಬೇರೆಯಾಗುತ್ತವೆ. ತಮ್ಮ ರಾಷ್ಟ್ರೀಯತೆಯ ನಿರ್ವಚನದಲ್ಲಿ ಬೇರಾಗಿ ನಿಲ್ಲುತ್ತವೆ. ಮಾತ್ರವಲ್ಲ ರಾಜಕೀಯ ಅಧಿಕಾರ ಕೇಂದ್ರವನ್ನು ಗಮನದಲ್ಲಿರಿಸಿಕೊಂಡ ಹಕ್ಕಿನ ಪ್ರಶ್ನೆಯ ಧ್ವನಿಯನ್ನು ಬಿಂಬಿಸುವ ದೆಹಲಿ ಹಾಗೂ ಮಾನವಹಿಂಸೆಯನ್ನೇ ಪ್ರತಿರೋಧಿಸುವ ಸಹಾನುಭೂತಿಯಲ್ಲಿರುವ ಶ್ರದ್ಧಾಂಜಲಿ ಕವನಗಳು ತಮ್ಮ ಶೀರ್ಷಿಕೆಯ ನೆಲೆಯಿಂದಲೂ ಭಿನ್ನವಾಗಿ ನಿಲ್ಲುತ್ತವೆ. ಮರಣೋತ್ತರವಾಗಿ ಗಾಂಧೀಜಿಯನ್ನು ಆವಾಹಿಸಿಕೊಳ್ಳುವ ಈ ಎರಡೂ ಕವನಗಳು ಮಹಾತ್ಮನನ್ನು ನೆನೆಯುತ್ತಲೇ ಗಾಂಧಿಯನ್ನು ತಾತ್ವಿಕವಾಗಿ ವಿರೋಧಿಸಿದ ರಾಷ್ಟ್ರೀಯತೆಯ ಅನ್ಯಧಾರೆಯ ಜೊತೆಗೆ ತೋರುವ ಸಂಬಂಧದ ನೆಲೆಯಲ್ಲಿ ಒಂದರಿಂದ ಇನ್ನೊಂದು ಪೂರ್ಣವಾಗಿ ಬೇರಾಗಿ ನಿಲ್ಲುತ್ತವೆ. ಗಾಂಧೀಜಿಯ ಸಾವು ನೋವಾಗಿ ಕಾಡುತ್ತಲೇ ಒಂದರಲ್ಲಿ ಸೋಲಾಗಿಯೂ, ಇನ್ನೊಂದರಲ್ಲಿ ಗಾಂಧೀಯತೆಯ ಯಶವಾಗಿಯೂ ಭಿನ್ನನೆಲೆಯಲ್ಲಿ ಪರಿಭಾವಿಸಲ್ಪಡುತ್ತವೆ. ಮಹಾತ್ಮ ನೀನು ಇನ್ನೂ ಒಂದಿಷ್ಟು ಕಾಲ ಬದುಕಬೇಕಿತ್ತೆನ್ನುವ ಶೂನ್ಯತೆ, ನಿರ್ವಾತದ ದನಿಗಿಂತ ಭಿನ್ನವಾಗಿ ಇನ್ನೊಂದು ಕವನ ಮರಣೋತ್ತರವಾಗಿ ಗಾಂಧಿಯನ್ನು ಅತಿ ಹೆಚ್ಚು ಶಕ್ತಿಶಾಲಿ ಎನ್ನುವಂತೆ ನಿರೂಪಿಸಿಕೊಳ್ಳುತ್ತದೆ. ಈ ನಿರೂಪಣೆಯ ಮೂಲಕವೇ ಒಂದು ಉದಾರವಾದಿ ನಿಲುವಿನಲ್ಲಿ ತಿಲಕ ಮಾದರಿಯ ರಾಷ್ಟ್ರೀಯತೆಯ ಒಲವನ್ನೂ ; ಇನ್ನೊಂದು ಖಚಿತ ಕೋಮುವಾದಿ ವಿರೋಧಿನೆಲೆಯಿಂದ ಗಾಂಧೀಜಿಯ ಸಂಕರಶೀಲ ರಾಷ್ಟ್ರೀಯತೆಯ ಮಾದರಿಯ ಪರವಾದ ಒಲವನ್ನೂ ಪ್ರತಿನಿಧಿಸುತ್ತದೆ.

ಗೋವಿಂದ ಪೈಯವರು ಕವಿಯಾಗಿ ಲೋಕಹಿತ ಸಾಧಕರಾದ ಏಸು, ಬುದ್ಧ ಹಾಗೂ ಕೃಷ್ಣ ಇವರುಗಳ ಲೋಕಯಾತ್ರೆಯ ಕೊನೆಯ ದಿನಗಳನ್ನು ಕಂಡರಿಸುವ ಅದ್ಭುತ ಕಾವ್ಯಗಳಾದ ಗೋಲ್ಗೊಥಾ, ವೈಶಾಖಿ ಮತ್ತು ಪ್ರಭಾಸಗಳನ್ನು ಕೊಟ್ಟವರು. ಮಹಾತ್ಮರ ಜನನ, ಜೀವನದಂತೆ ಮರಣವನ್ನೂ ವಿಶಿಷ್ಟವಾಗಿ ಕಂಡ ಮನಸ್ಸದು. ದುರಂತ ಸಾವಿನ ನಡುವೆಯೂ 'ಕ್ಷಮಿಸಿವರನೆಲೆ ತಂದೆ' ಎಂದು ಸಾಗಿಹೋದ ಏಸು ಹಾಗೂ ಜಗತ್ತಿಗೆ ಅಹಿಂಸೆಯ ಪಾಠಹೇಳಿ ಪ್ರಶಾಂತ ನಿರ್ಗಮನವನ್ನು ಕಂಡ ಬುದ್ಧಗುರುವಿನ ಜೀವನಯಾತ್ರೆಯ ಕೊನೆಯನ್ನು ಕನ್ನಡಕಾವ್ಯ ಜಗತ್ತಿಗೆ ಕೊಟ್ಟವರು ಅವರು. ಪಾಶ್ಚಾತ್ಯ-ಪೌರ್ವಾತ್ಯ ಮತಗಳೆರಡರ ಅಧ್ಯಯನಗಳನ್ನು ಸಮಾನ ಆಸ್ಥೆಯಿಂದ ಮಾಡಿ, ಅದನ್ನು ಕನ್ನಡ ಕಾವ್ಯ ಸಂವೇದನೆಯಾಗಿ ಮೂಡಿಸಿದವರು. ಜನರ ನಡುವಿದ್ದು ಆ ಜನಬದುಕಿನ ಏರಿಳಿತಗಳಿಗೆ ಸ್ಪಂದಿಸುವ ಜೀವಂತ ಕವಿಯಾಗಿ ಎರಡು ಜಾಗತಿಕ ಯುದ್ಧಗಳನ್ನು ಕಂಡವರು. ಯುದ್ಧದ ವಿನಾಶಕ್ಕಾಗಿ ನೊಂದು 'ಯುದ್ಧನಿಂತಿತೆ' ಎನ್ನುವ ಕವನದಲ್ಲಿ 'ತಮ್ಮಾಯುಧದಿ ತಾವೆ ಮಡಿಯುವರು ನೋಡೆ' ಎಂದು ಆಯುಧ ಸಂಸ್ಕೃತಿಯ ವಿನಾಶವನ್ನು ದೃಷ್ಟಾರರಂತೆ ಧ್ವನಿಸಿದವರು. ಭಾರತದ ಸ್ವಾತಂತ್ರ್ಯ ಚಳುವಳಿಯ ಕಾವು ಕಂಡವರು. ಬುದ್ಧ, ಏಸುವಿನ ಬದುಕಿನ ಹಿನ್ನೆಲೆಯೊಂದಿಗೆ ಗಾಂಧೀ ಯುಗದ ನೆರಳನ್ನು ಅನುಭವಿಸಿದವರು. ಗಾಂಧೀಜಿವರ ದಟ್ಟ ಪ್ರಭಾವಕ್ಕೆ ಒಳಗಾಗಿಯೂ ಶಿವರಾಮ ಕಾರಂತರೆನ್ನುವಂತೆ, ಪಾಕಿಸ್ತಾನದ ಸೃಷ್ಟಿಯೆಂಬುದು ಗಾಂಧೀಜಿಯವರು ಭಾರತಕ್ಕೆ ಬಗೆದಿದ್ದ ದ್ರೋಹವೆಂದೇ ತಿಳಿದವರು ಮತ್ತು ದೇಶವನ್ನು ಒಡೆದು ಇಬ್ಭಾಗ ಮಾಡಿದ ದ್ರೋಹಕ್ಕಾಗಿ ಗಾಂಧೀಜಿಯವರನ್ನು ತೀರ ನಿಷ್ಠುರವಾಗಿ ಹಳಿಯಬಲ್ಲವರು. ಅಹಿಂಸೆ, ಸಹನೆ, ಯುದ್ಧವಿರೋಧಿ ಸಹಬಾಳ್ವೆಯ ಭಾವನೆಯನ್ನು ದಟ್ಟವಾಗಿ ಹೊಂದಿಯೂ ಭಾರತದ ವಿಭಜನೆಗೆ ಸಂಬಂಧಿಸಿ ಗಾಂಧೀಜಿಯನ್ನೇ ದೋಷಿಯೆಂದು ಬಗೆದ ಗೋವಿಂದ ಪೈ ನಮಗೆ ಎದುರಾಗುತ್ತಾರೆ !. ದೇಶದ ಸಮಗ್ರತೆಯ ಕುರಿತಾಗಿ ಅಖಂಡತೆಯ ಕಲ್ಪನೆಯನ್ನು ಹೊಂದಿದ್ದ ಪೈ, ಸಾಂಸ್ಕೃತಿಕ ರಾಷ್ಟ್ರೀಯವಾದಿಗಳು ಪ್ರಚಾರಮಾಡುವಂತೆ ದೇಶ ವಿಭಜನೆಯ ಹೊಣೆಗಾರನನ್ನಾಗಿ ಗಾಂಧಿಯನ್ನೇ ಗುರುತಿಸಿಕೊಂಡಿದ್ದರು! ದೇಶದ ಮತೀಯನೆಲೆಯ ಸಂಘಟನೆಯನ್ನು ರಾಷ್ಟ್ರದ ಭವ್ಯಪರಂಪರೆಯ ವಾರಸುದಾರನಾಗಿಯೂ ಭಾವಿಸಿಕೊಂಡಿದ್ದವರು. ಹಾಗಾಗಿ ಗಾಂಧಿ ಹತ್ಯೆಯಾದಾಗ ಅವರು ಬರೆದ 'ದೆಹಲಿ' ಅಥವಾ 'ಮಹಾತ್ಮನ ಕಡೆಯ ದಿನ' ಕವನವನ್ನು ನಾವು ಈ ಹಿನ್ನೆಲೆಯೊಂದಿಗೇ ಗಮನಿಸಬೇಕಾಗುತ್ತದೆ. ಮಹಾತ್ಮ ನೀನಿನ್ನಿಷ್ಟು ಕಾಲ ಬದುಕಬೇಕೆನ್ನುವ ಉದಾರವಾದಿ ನಿಲುವಿನ ಕವಿ, ಆ ಮಹಾತ್ಮನ ಕೊಲೆಯ ಮೂಲಧಾತುಗಳೆನಿಸಿದವರ ಮೇಲೆ ಬಂದ ಅಪವಾದಕ್ಕಾಗಿಯೂ ಮರುಗುತ್ತಾರೆ! ಗಾಂಧಿ ಸಾವು ಮತ್ತು ಆದರ ಅಪವಾದದ ಹೊರೆಗಳು ಸಮತಕ್ಕಡಿಯಲ್ಲಿಟ್ಟು ತೂಗಲ್ಪಡುತ್ತವೆ. ಈ ಸಂದರ್ಭದ ಕವಿಯ ರಾಜಕೀಯ ನಿಲುವಿನಲ್ಲಿ ಗಾಂಧಿ ಕೊಲೆಯನ್ನು ಅದರ ಮೂಲಬೇರುಗಳೊಂದಿಗೆ ವಿರೋಧಿಸುವ ಖಚಿತ ರಾಜಕೀಯ ನೆಲೆಯ ಸ್ಪಷ್ಟತೆಯಿಲ್ಲದೆ, ಹುತಾತ್ಮ ಮತ್ತು ಹಂತಕರು ಸಮಸಹಾನುಭೂತಿಗೊಳಗಾಗುವ ದ್ವಂದ್ವವಿದೆ.

ದೆಹಲಿ ಕವನ ಗಾಂಧಿಯ ಕೊನೆಯ ದಿನವನ್ನು ಅರ್ಥಾತ್ ಸಾವಿನ ಘಟನೆಯನ್ನು ವಸ್ತುವಾಗಿ ಹೊಂದಿದ ಕವನ. ಕವನ ಆರಂಭವಾಗುವುದೇ ದೇಶ ವಿಘಟನೆಯ ಗಡಿಭಾಗದ ಹಿಂಸೆಯ ನಿರೂಪಣೆಯೊಂದಿಗೆ. 'ಅಪರ ಪಂಜಾಬದಲಿ ಧರ್ಮಹಿಂಸಾಜ್ವಾಲೆಗೀಡಾಗಿ' ಎಂದೇ ಆರಂಭಗೊಳ್ಳುವ ಕವನದೊಳಗಿನ ಈ ಹಿಂಸೆಯ ನೋವಿರುವುದು ಮತ್ತೆ ಮತೀಯನೆಲೆಯಲ್ಲಿಯೇ ಎಂಬುದನ್ನೂ ಗಮನಿಸಬೇಕು. ಗಾಂಧಿ ಸಾವಿನ ಕಾರಣಗಳನ್ನು ಹರಳುಗಟ್ಟಿಸಲು ಬಳಕೆಯಾಗುವ ಈ ಹಿಂಸೆಯ ವಿವರಗಳಲ್ಲಿ ನಿರಾಶ್ರಿತರ ಗೋಳಿನ ಕಥೆಯೊಂದಿಗೆ,ಅವರಾರ್ತನಾದದಿಂದೆದೆ ಕಿವುಡು ಮನಕುರುಡನಾದ ತರುಣ ಶಕ್ತಿಗಳು ಗಾಂಧಿ ಕೊಲೆಗಾಗಿ ನಡೆಸಿದ ವಿಫಲ ಯತ್ನವಿದೆ, ಗಾಂಧಿ ತೋರಿದ ಸಾವಿನ ಕುರಿತಾದ ಧೀಮಂತ ಧೈರ್ಯವಿದೆ. ಈ ಧೀಮಂತಿಕೆಯ

ನಡುವೆಯೇ ''ತಲೆ ತಿರುಕನಾ ಕೆಯ್ಯೋವಿಯೆಸುಗೆಯಿಂ,ಮ್ಲೇಚ್ಛನಾಘಾತದಿಂ ನಿರ್ಲೋಚಿಸುವ ಕಾಂಚನದ ದೇವತಾ ಪ್ರತಿಮೆಯಂತೆ'' ಧರೆಗುರುಳಿದ ಗಾಂಧೀಜಿಯ ಸಾವಿನ ಚಿತ್ರಣವಿದೆ(ಗಾಂಧಿ ಸಾವು ಯೋಜಿತ ಕೊಲೆಯೆಂದು ಪರಿಭಾವಿತವಾಗುವುದಕ್ಕಿಂತ, ಗಾಂಧೀಜಿಯ ನಿರ್ಲಕ್ಷ್ಯ ಮತ್ತು ಆ ಕಾಲದಲ್ಲಿ ಹಿಂಸೆ ಯಿಂದೆದ್ದ ಆಕ್ರೋಶದ ಫಲಿತವೆಂಬ ಸರಳೀಕರಣದ ನಿಲುವೂ ಹೌದಿದು). ಈ ಕಣ್ಣೀರ ಕಥೆಯನ್ನು ಹಾಡುವಂತೆ ವಿನಂತಿಗೊಳಗಾಗುವ ತಾಯಿ ಭಾರತಿಯ ಜೊತೆಗೆ, ಕೊಲೆಗಡುಕ ಗೋಡ್ಸೆಯಿಂದ ಹಿಡಿದು ದೇವಲೋಕದ ಅಮರ ಸ್ತ್ರೀಯರೂ ಸೇರಿ ಅನೇಕರೊಂದಿಗೆ ಕವನ ಮಾತನಾಡುತ್ತದೆ. ಈ ಸಂಭಾಷಣೆಯ ಪ್ರಕ್ರಿಯೆಯಲ್ಲಿ ಹುತಾತ್ಮ ಗಾಂಧಿ ಮತ್ತು ಗಾಂಧಿ ಕೊಲೆಯ ಅಪವಾದಕ್ಕೆ ಗುರಿಯಾದ ಹಿಂದೂ ಮಹಾಸಭಾದ ಕುರಿತಾಗಿ ನಿರೂಪಕಧ್ವನಿಯ ಹೇಳಿಕೆಗಳು ದಾಖಲಾಗುತ್ತಾ ಹೋಗುತ್ತವೆ. ಈ ಹೇಳಿಕೆಗಳು ಗಾಂಧಿಯನ್ನು ಕಳೆದುಕೊಂಡ ದುಃಖವನ್ನು ಅಭಿನಯಿಸುವ ಜೊತಗೆ ರಾಷ್ಟ್ರೋಪಾಸನೆಯ ರಾಷ್ಟ್ರಭಕ್ತ ಸಂಘಟನೆಯೆಂದು ಕಾವ್ಯ ನಂಬುವ ಹಿಂದೂಮಹಾಸಭಾಕ್ಕೆ, ಸಂಘಕ್ಕೆ ಒದಗಿದ ಅಪವಾದಕ್ಕಾಗಿ ಸಂಕಟಪಡುತ್ತದೆ. ಸತ್ತು ಕತ್ತಲಾದ ಹೊತ್ತಿನಲ್ಲಿ ಮನೆಪಾಲಿನ ಹಕ್ಕುದಾರರು ಯಾರು ಎಂದು ಚೌಕಾಶಿಗಿಳಿಯುವ ತೆರದಲ್ಲಿದೆ ಇಲ್ಲಿಯ ಧಾಟಿ. ಈ ಇಬ್ಬಗೆಯ ನಿಲುವು ಗಾಂಧಿ ಕೊಲೆಯ ಕುರಿತಾಗಿ ಕವನ ಅಭಿವ್ಯಕ್ತಿಸುತ್ತಿರುವ ಸಂಕಟದ ಅಸಲಿಯತ್ತನ್ನೇ ಅನುಮಾನಿಸುವಂತೆ ಮಾಡುತ್ತದೆ.

ಗಾಂಧಿ ಕೊಲೆಯ ತರುವಾಯ ಪೂರ್ಣವಾಗಿ ಒಂದು ಖಂಡವನ್ನೇ ಗೋಡ್ಸೆಯನ್ನು ಉದ್ದೇಶಿಸಿ ಹಳಿಯಲು ಕವನ ಮೀಸಲಿಟ್ಟಿದೆ. ಗಾಂಧಿಯ ಕೊಲೆಗಾರನನ್ನು ಉದ್ದೇಶಿಸಿ ಎಂತಹ ತಪ್ಪು ಮಾಡಿದೆ? ಎಂದು ಪ್ರಶ್ನಿಸುವಂತೆ ಮಾತಿಗಿಳಿಯುವ ಕವನ, ಆತನಿಂದಾದ ಅಚಾತುರ್ಯದ ಅಗಾಧತೆಯನ್ನು ಅರಿವಿಗೆ ತರುವ ಧಾಟಿ ತೋರುತ್ತದೆ. ಗೋಡ್ಸೆ ಮತ್ತಾತನ ಕೃತ್ಯಗಳು ಸಮಾನ ಭರ್ತ್ಸನೆಗೆ ಒಳಗಾಗುತ್ತವೆ. ಗಾಂಧಿ ಯನ್ನು ಮಹಾತ್ಮನಾಗಿಯೂ, ಗೋಡ್ಸೆಯನ್ನು ಪಾಪಾತ್ಮನಾಗಿಯೂ ಕವನ ವಿಭಜಿಸಿಕೊಂಡೇ ನೋಡುತ್ತದೆ. ಬೋಧಿಸತ್ವ, ಚಂದ್ರ, ಮುಂಗೋಳಿ, ಕಲ್ಪವೃಕ್ಷ, ಅಜಾತಶತ್ರುವೆಂಬ ಬಹುಬಗೆಯ ವಿಶೇಷಣಗಳಲ್ಲಿ ಗಾಂಧಿ ಯನ್ನು ಸಮೀಕರಿಸುತ್ತಾ, ಕೊಲೆಗಾರನನ್ನು ಮತ್ತೆ ಮತ್ತೆ ಮಾತಿನಿಂದ ಚುಚ್ಚಲಾಗುತ್ತದೆ. ಗಾಂಧಿ ಸಾವು ಕಲ್ಪವೃಕ್ಷದ ನಾಶವಾಗಿ, ಹಿಂದೂತ್ತಮನ ಕೊಲೆಯಾಗಿ ಪರಿಭಾವಿತವಾಗುತ್ತದೆ. ಕವನದ ಈ ಸುದೀರ್ಘ ಭಾಗದಲ್ಲಿಯೇ ಹಿಂದುತ್ವ ಮತ್ತು ಭಾರತೀಯತೆಗಳು ಸಮೀಕರಣಗೊಂಡಿರುವುದನ್ನೂ ಕಾಣಬಹುದು. ಗೋಡ್ಸೆಯ ಕೃತ್ಯವಾದರೋ ಪುರಾಣಗಳ ನೆಲೆಯ ರಾಕ್ಷಸೀಕರಣದ ಮಾದರಿಗಳಲ್ಲಿ ಸಮೀಕರಣಗೊಳ್ಳುವ ಜೊತೆಗೆ, ಮಧ್ಯಯುಗೀನ ಭಾರತದ ಚರಿತ್ರೆಯ ಕಟ್ಟುವಿಕೆಯಲ್ಲಿ ರಾಕ್ಷಸೀಕರಣಗೊಂಡ ಮ್ಲೇಚ್ಛರ ಮೂರ್ತಿಭಂಜನೆಯೊಂದಿಗೂ ಸಮೀಕರಣಗೊಳ್ಳುತ್ತಿದೆ. ಪಾಪವನ್ನು ವಿವರಿಸಲು ಪುರಾಣದೊಂದಿಗೆ ಬಳಸುವ ಚರಿತ್ರೆಯ ಮೂಲಗಳು ಕವನದ ತಾತ್ವಿಕ ಹಿನ್ನೆಲೆಯ ಮೇಲೆ ಬೆಳಕು ಚಲ್ಲುತ್ತವೆ ಎಂಬುದನ್ನು ಗಮನಿಸಬೇಕು. ಗೋಡ್ಸೆಯ ಕೃತ್ಯ ಪಾತಕ ಎನಿಸುವುದು ಈ ನೆಲೆಯಿಂದ. ರಾಷ್ಟ್ರೀಯತೆಯನ್ನು ಮತೀಯನೆಲೆಯಲ್ಲಿಯೇ ವಿವರಿಸಿಕೊಳ್ಳುವ ಈ ಮನಸ್ಸು ಗಾಂಧಿ ಸಾವನ್ನು ಆಗುಮಾಡಿದ ಗೋಡ್ಸೆಯನ್ನುದ್ದೇಶಿಸಿ,-

> ಕಲ್ಪವೃಕ್ಷವ ಕಡಿಯೆ ಕೊಡಲಿಯಾದೆಯ ಪಾಪಿ!
> ಯಾರನೀ ಕೊಂದೆ ? ಹಿಂದುಬ್ರುವನೆ, ಹಿಂದೂತ್ತ
> ಮನಕೊಂದೆ![5]

ಎನ್ನುವ ಈ ಮಾತುಗಳ ಆಳದಲ್ಲಿ ಕೊಲೆಯ ಪಾಪಕ್ಕಿಂತ ಹಿಂದೂತ್ತಮನ ಸಾವಿನಿಂದ ಕಾಡುವಿಕೆಗೊಳಗಾದ, ಸ್ವಧರ್ಮಿಯನ ಸಾವಿನಮರುಕ ಭಾಸವಾಗುತ್ತದೆ. ಗೋಡ್ಸೆಯ ಪಾಪವಿರುವುದು ಈ ಕ್ಷಣದಲ್ಲಿ ಹಿಂದುವೊಬ್ಬನ ಕೊಲೆಯಲ್ಲಿಯೇ ಹೊರತು ಕೊಲೆಯಲ್ಲಿ ಅಲ್ಲ. ಹಿಂಸೆಯನ್ನು ವಿರೋಧಿಸುವ ಖಚಿತ ನಿಲುವಲ್ಲವಿದು. ಕೊಲೆಗಡುಕ ಗೋಡ್ಸೆಯನ್ನು ಪಾಪಿ ಎಂದು ಸಂಭೋದಿಸುವ ಕಾರಣ ಸ್ಪಷ್ಟವಿದೆ.

ಸತ್ತ ಗಾಂಧಿಯನ್ನು ಮತಪರಿಪ್ರೇಕ್ಷ್ಯದಲ್ಲಿಟ್ಟು ಹಿಂದುವಾಗಿ ವಿವರಿಸಿಕೊಳ್ಳುವ, ಪುರಾಣ ರೂಪಕವಾದ ಕಲ್ಪವೃಕ್ಷವಾಗಿ ಸಮೀಕರಿಸಿಕೊಳ್ಳುವ ಬಗೆಗಳು ಗಾಂಧಿಯ ಸಾವಿನೊಳಗಿನ ನೋವಿಗೆ ಹಿಂದುತ್ವದ ನೆಲೆಯ ಕಾರಣಗಳನ್ನು ಜೋಡಿಸಿಕೊಳ್ಳುತ್ತದೆ. ನಮ್ಮವನೇ(?) ಒಬ್ಬನನ್ನು ಕಳೆದುಕೊಂಡೆವಲ್ಲ ಎಂಬ ದುಃಖವಿದು. ಕುತೂಹಲದ ಸಂಗತಿಯೆಂದರೆ ಕಲ್ಪವೃಕ್ಷವನ್ನು ಕಡಿಯುವ ಆಯುಧವಾದ ವ್ಯಕ್ತಿಯನ್ನೇ ಮುಂದಿನ ಹಂತದಲ್ಲಿ ಎಲ್ಲ ಪಾಪಗಳ ಹೊಣೆಗಾರನಾಗಿ ಮಾಡಲಾಗಿರುವುದು. ಕೊಡಲಿ ಯಾಗಿರುವುದನ್ನು ಹಿಡಿದವರ ಬಗೆಗೆ, ಅಂತಹ ಕೊಲೆಗಡುಕ ವಿಚಾರಧಾರೆಯ ಬಗೆಗೆ ಕವನ ಮಾತನ್ನೇ ಆಡುವುದಿಲ್ಲ. ಆಯುಧವನ್ನೇ ಅಪರಾಧಿಯೆಂದು ಶಿಕ್ಷಿಸುವ ಈ ಮನಸ್ಸು ಆಯುಧ ಹಿಡಿಯುವ ಕೈಗಳನ್ನು ಆಪಾದನೆಯಿಂದ ಬಚಾವು ಮಾಡಲು ಹೆಣಗುತ್ತದೆ. ಆದಕ್ಕಾಗಿಯೇ ಮಂತ್ರಪಠಿಸಿದಂತೆ ಉಪಾಸಕನೆಂಬ ಬಿರುದುಗಳನ್ನುದುರಿಸುತ್ತದೆ. ಗಡಿಭಾಗದ ಮತೀಯ ಹಿಂಸೆಯನ್ನೇ ಗಾಂಧಿ ಕೊಲೆಯ ಸರಳ ಕಾರಣವಾಗಿ ತಂತ್ರವೇ ನಡೆದಿಲ್ಲ ಎಂಬಂತೆ ಬೋಳೇತನವಲ್ಲಿ ನಂಬಿಸಲು ಆತುರ ತೋರುತ್ತದೆ. ಯೋಜಿತ ಪಿತೂರಿಯ ಆವರಣವನ್ನೇ ನಿವಾರಿಸಿಕೊಂಡ ಕವನ ಹಿಂದುವಾದ ಗಾಂಧಿಯ ಕೊಲೆಯನ್ನು ವಿರೋಧಿಸುವ ಹೊತ್ತಿಗೆ, ಕೊಲೆ ಮತ್ತು ಹಿಂಸೆಯ ಕುರಿತಾಗಿ ಸಮಾನ ವಿರೋಧ ತೋರುತ್ತದೆ ಎಂದು ವಾದಿಸಲು ಅವಕಾಶ ಕಡಿಮೆ ಎಂದೇ ಅನಿಸುತ್ತದೆ. ಯಾಕೆಂದರೆ ಕೊಲೆಯ ಹಿಂಸೆಗಿಂತ ಕೊಲೆಯ ಪ್ರಕಟಣೆ ತಂದ ಮುಜುಗರಗಳು ಹೆಚ್ಚು ಆತಂಕವನ್ನುಂಟು ಮಾಡಿವೆ ಎಂಬುದು ಕಾವ್ಯದ ಮುಂದಿನ ಭಾಗದಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತಾ ಹೋಗುತ್ತದೆ.

ಕವನದ ಗಾಂಧೀ ಕುರಿತಾದ ಹಳಹಳಿಕೆಗಳು ಗಾಂಧಿ ಸಿದ್ಧಾಂತಬದ್ಧ ಹಳಹಳಿಕೆಗಳೇ? ಎಂಬ ಅನುಮಾನ ಮತ್ತಷ್ಟು ಗಟ್ಟಿಯಾಗುವುದು ಗಾಂಧಿಯ ಕೊಲೆಗಡುಕ ಗೋಡ್ಸೆಯನ್ನು ಉದ್ದೇಶಿಸಿ ಹೇಳುವ ಈ ಮುಂದಿನ ಮಾತುಗಳಲ್ಲಿ. ಈ ಹಂತದಲ್ಲಿ ಗಾಂಧಿ ಕೊಲೆಯ ಹೊಣೆಯೆಲ್ಲವನ್ನೂ ಗೋಡ್ಸೆಯೊಬ್ಬನ(ಕೊಡಲಿ) ಮೇಲೆ ಹಾಕುವ ಕವನ ಕೊಲೆಯ ವ್ಯಾಪ್ತಿಯನ್ನು ಸೀಮಿತಗೊಳಿಸಿಬಿಡುತ್ತದೆ. ಗಾಂಧೀ ವ್ಯಕ್ತಿತ್ವವನ್ನು ವೈಭವೀಕರಿಸುತ್ತಾ ಗಾಂಧಿಪಥವಲ್ಲಿರುವಂತೆ ಕಾಣುವ ಕವನದೊಳಗಿನ ಗಾಂಧಿ ಮತ್ತು ಗಾಂಧಿಕೊಲೆಯನ್ನು ಕುರಿತಾದ ಮಾತುಗಳಲ್ಲಿ ಸ್ಪಷ್ಟ ವ್ಯತ್ಯಾಸವಿದೆ. ಗಡಿಹಿಂಸೆಯ ಪ್ರಚೋದನೆಯಷ್ಟನ್ನೆ ಪ್ರಸ್ತಾಪಮಾಡಿ ಗಾಂಧಿಯ ಕೊಲೆಯ ಕಾರಣವನ್ನು ಸಂಕ್ಷೇಪಿಸುವ ಕವನ ತನ್ನ ರಾಜಕೀಯ ನಡೆಯಲ್ಲಿ ಗಾಂಧೀಯೇತರ ಪಥವನ್ನು ಹಿಡಿದುಬಿಡುತ್ತದೆ. ಕೃತ್ಯದ ಹೊಣೆಯಲ್ಲವನ್ನೂ ವ್ಯಕ್ತಿಯ ಮೇಲೆ ಹೊರಿಸಿ ವಿಚಾರವೊಂದರ ಪರವಹಿಸುವ ಆ ಹಂತದಲ್ಲಿ ಗಾಂಧೀ ಕೊಲೆಯ ನಿಜಕಾರಣಗಳ ಜೊತೆಗೆ ಕವನ ಸಹಾನುಭೂತಿಯನ್ನೇ ತೋರುತ್ತದೆ. ಈ ಹತ್ಯೆಯನ್ನು ವಿಚಾರಗಳ ನಡುವಿನ ಸಂಘರ್ಷವಾಗಿ ವಿವರಿಸಿಕೊಳ್ಳುವ ರಾಜಕೀಯ ಗಟ್ಟಿತನವನ್ನು ತೋರುವ ಬದಲು, ಸಾವಿಗಾಗಿ ಅಳುತ್ತಲೇ ಕೊಲೆಗಡುಕ ಮನಸ್ಸುಗಳ ಕೃತ್ಯವನ್ನು ಚರ್ಚೆಯಿಂದ ಬದಿಗೆ ಸರಿಸಿಬಿಡುತ್ತದೆ ಎಂಬುದು ಗಮನಿಸಬೇಕಾದ ಅಂಶ.

ಎನಿತೋ ವರುಷಗಳಿಂದ ನಿಃಸ್ವಾರ್ಥದಿಂ ಮಾತೃ
ಭೂಮಿಯನುಪಾಸಿಸುವ ಹಿಂದೂ ಮಹಾಸಭೆಯ
ರಾಷ್ಟ್ರಸೇವಾ ಸಂಘದಕ್ಷತ ಯಶೋನಾಮ
ಕಕಟ ವಿಷಪುಚ್ಛವನಕಾರಣಮೆ ಊರಿದೆಯಾ?[9]

ಗಾಂಧಿ ಸಾವಿಗೆ ಸಿಹಿ ಹಂಚಿ ಸಂಭ್ರಮಿಸಿದ ನಿಜ ಸಂಗತಿ ಮತ್ತು ಹತ್ಯೆಯ ಪಿತೂರಿಯಲ್ಲಿ ಭಾಗಿಯಾದವರ ಕುರಿತಂತೆ ಇಡಿಯ ದೇಶವೇ ಹೊಂದಿರುವ ಮಾಹಿತಿಗಳನ್ನು ಕವನ ತನ್ನ ಸ್ತರವಲ್ಲಿ ನಿರಾಕರಿಸಿಕೊಳ್ಳಲು ಒತ್ತಾಯಿಸುತ್ತದೆ. ಗಾಂಧಿಯ ಸಾವಿನಿಂದಾದ ನಿರ್ವಾತಕ್ಕೆ ದುಃಖಿಸಿದಂತೆ ಮಾಡುವ ಕವನ , ಹಿಂದೂ ಮಹಾಸಭೆಯ ಮೇಲೆ ಬಂದ ಆಪಾದನೆಗಾಗಿಯೂ ಗೋಡ್ಸೆಯನ್ನೇ ಗುರಿಯಾಗಿಸಿಕೊಂಡು ಆಕ್ರೋಶವನ್ನು ವ್ಯಕ್ತಪಡಿಸುತ್ತದೆ. ಗೋಡ್ಸೆಯನ್ನೇನೋ ಕವನ ನಿಶ್ಚಿತವಾಗಿ ದೂಷಿಸುತ್ತದೆ. ಆದರೆ ಆತನನ್ನು ಕೊಡಲಿಯಾಗಿ

ಉತ್ಪಾದಿಸಿದವರ ಕುರಿತಾದ ಕ್ರೋಧವನ್ನು ಪೂರ್ಣವಾಗಿ ಮರೆತುಬಿಡುತ್ತದೆ. ಈ ಮೂಲಕ ಗಾಂಧಿ ಸಾವಿಗೆ ಮರುಗುವುದರ ಅಂತರ್ಯದಲ್ಲಿರುವ ದ್ವಂದ್ವ ಗೋಚರವಾಗುತ್ತದೆ. ಎಲ್ಲದಕ್ಕೂ ಕಾರಣವಾಗಿ ಗಡಿಭಾಗದ ಸ್ವಮತೀಯರ ಹಿಂಸೆಯ ನೋವೇ ಪ್ರಚೋದನೆಯಾಯಿತೆಂದು ಭಾವಿಸುವ ಕವನದ ಏಕಮುಖೀ ಧೋರಣೆಯಲ್ಲಿ ಘಟನೆಯ ಹೊಣೆ ವಿಚಾರದಿಂದ ವ್ಯಕ್ತಿಯ ಮಟ್ಟಕ್ಕೆ ಇಳಿದುಬಿಡುತ್ತದೆ. ಈ ಕಾರಣದಿಂದಾಗಿ ಗಾಂಧಿ ಕೊಲೆಯನ್ನು ಒಂದು ಗಂಭೀರ ಸಂಗತಿಯಾಗಿ ಕವನ ಮಾತನಾಡಿದಂತೆ ಅನಿಸುವುದೇ ಇಲ್ಲ. ಅದರ ನಿಜ ಆತಂಕವಿರುವುದು ಕೊಲೆಯ ಹಿನ್ನೆಲೆಯಲ್ಲಿ ಬಂದ ಅಪಾದನೆಯ ಕುರಿತಂತೆ. ಅದ್ದರಿಂದಲೇ ಕವನ ಪಾಪ ಮತ್ತು ಪಾಪಿಗಳನ್ನು ಮುಖಾಮುಖಿಯಾಗಿ ಎದುರಿಸದೆ, ಪಾಪಿಯೊಬ್ಬನನ್ನು ದೂಷಿಸುತ್ತದೆ. ಮಾತೃಭೂಮಿಯ ಉಪಾಸಕನಾಗಿ ಹಿಂದೂ ಮಹಾಸಭಾಕ್ಕೆ ಪ್ರಮಾಣಪತ್ರ ನೀಡುತ್ತದೆ! ಅದರ ಮೇಲಿನ ಅಪಾದನೆ ಅಕಾರಣವಾದುದು ಎಂದು ವಾದಿಸುತ್ತದೆ! ಒಂದು ಸಂಘಟನೆಯನ್ನು ದೇಶದ ವಾರೀಸುದಾರನಾಗಿಯೂ, ಅಸಲಿ ದೇಶಭಕ್ತನಾಗಿಯೂ ಕಟ್ಟಿಕೊಂಡಿರುವ ಕಾವ್ಯಕ್ಕೆ ಮಿಕ್ಕ ಧಾರೆಗಳ ಮೇಲಿರುವುದು ಯಾವ ಭಾವ ಎಂದು ವಿವರಿಸಿ ಹೇಳಬೇಕಾಗಿಲ್ಲ. (ಇದೊಂದು ರೀತಿಯಲ್ಲಿ ದೇಶಭಕ್ತಿಯ ಪೇಟೆಂಟ್ ಪಡೆದುಕೊಂಡಂತೆ. ಕಾವ್ಯ ಆ ಪೇಟೆಂಟ್ ದರ ವಕಾಲತ್ತು ಮಾಡುತ್ತದೆ ಅಷ್ಟೆ) ಈ ನಡೆಯಿಂದಾಗಿಯೇ ಗಾಂಧಿ ಸಾವಿಗೆ ಪರಿತಪಿಸುವ ಕವನ ತನ್ನೊಳಗಿನ ಗಾಂಧೀ ವಿರೋಧಿ ರಾಷ್ಟ್ರೀಯತೆಯ ಬೇರುಗಳನ್ನು ಮುಚ್ಚಿಡಲಾರದೇ ಬೆತ್ತಲಾಗುತ್ತದೆ. ಭೂಮಿಯನ್ನು ಆರಾಧಿಸುವ ಉಪಾಸಕ ಮಾದರಿಯ ದೇಶಭಕ್ತಿಯನ್ನೇ ಸಮರ್ಥಿಸುವ ಕವನ, ಗಾಂಧಿ ಸಾವಿನ ವಸ್ತುವನ್ನು ಶಿಲೀಕ ಮಾದರಿಯ ರಾಷ್ಟ್ರೀಯತೆಯಲ್ಲಿಯೇ ಅಳೆದುಬಿಡುತ್ತದೆ.

ಅಂದ ಮಾತ್ರಕ್ಕೆ ಅವರಲ್ಲಿ ಗಾಂಧಿ ಕುರಿತಾದ ತಾತ್ಸಾರವಿದೆ ಎಂದು ಅರ್ಥವಲ್ಲ. ಗಾಂಧಿ ಗೋವಿಂದ ಪೈ ಅವರ ಪಾಲಿಗೆ ಮಹಾತ್ಮನೆ. ಎಂತಹ ಮಹಾತ್ಮ ಅಂದರೆ ವೈದಿಕ ಪುರಾಣಗಳು ಕಟ್ಟಿಕೊಡುವ ದೈವತ್ವದ ಮಾದರಿಯ ಮಹಾತ್ಮ. ಆತ ಸ್ವರ್ಗಾರೋಹಣದ ಎಲ್ಲ ಅರ್ಹತೆಯಿರುವಾತ. ಹಾಗಾಗಿಯೇ ಸ್ವರ್ಗದಲ್ಲಿಯೂ ಆತನ ಕೀರ್ತಿ ವಿಸ್ತರಣೆಗೊಳ್ಳಲಿ ಎಂಬ ಸದಾಶಯ ಕವನಕ್ಕಿದೆ. ಗಾಂಧಿ ದೊಡ್ಡ ಶಕ್ತಿಯಾಗಿ ದೇಶದ ಜನತೆಯ ಮೇಲೆ ಪ್ರಭಾವ ಬೀರಿದ ಕುರಿತು ಅದಕ್ಕೆ ಪೂರ್ಣ ಸಮ್ಮತಿಯಿರುವಂತೆಯೂ ಇದೆ. ಗೋಪಾಲಕೃಷ್ಣ ಅಡಿಗರ ಅಂಬೇಡಕರ ಭೀಮರಾಯನಿಗೆ ಕವನದಲ್ಲಿಯಂತೆ ಕಣ್ಣಲ್ಲಿ ಧೂಳು, ಮನಸ್ಸಲ್ಲಿ ಮಂಕುಹಿಡಿಸಿದ ಭಾವುಕತೆಯ ಜಪ್ಪಗಾಗಿ, ಫಸಲು ಬರುವುದಸಾಧ್ಯವಾದರೂ ಬಿಲ್ಲದ ಆಕಾಶಕ್ಕೆ ತೂರಿದಹೊಟ್ಟಾಗಿ ಗಾಂಧಿಯ ಪ್ರಭಾವವನ್ನು ದೆಹಲಿ ಕವನ ಲೇವಡಿ ಮಾಡೋದಿಲ್ಲ. ದೇವಲೋಕದ ದೇವಕನ್ನೆಯರಲ್ಲಿ ಕವನ ಮಾಡುವ ಈ ಕೆಳಗಿನ ಭಿನ್ನಹದಲ್ಲಿ ಗಾಂಧಿ ಉಂಟುಮಾಡಿದ ಎಚ್ಚರದ ಸ್ಪಷ್ಟವಾದ ಗುರುತಿಸುವಿಕೆ ಮತ್ತದರ ಗೌರವಿಸುವಿಕೆಯಿದೆ.

ತನ್ನ ಕೈಯೊಳೆ ನೂತು, ತನ್ನ ಕೈಯೊಳೆ ನೇತು
ಬಟ್ಟೆಯುಡಬೇಕೆಂದು ಭಾರತವನೊಲಿಸಿದ
....
....
ಈ ಲೋಕ ರುಜೆಗಹಿಂಸೆಯ ಅಗದವೆಂದದನೆ
ಸಾಧಿಸಿದ ಭೋದಿಸಿದ ವೈದ್ಯನನು ಕೊಂಡಾಡಿ

ಇಡಿಯ ದೇಶವನ್ನು ಸ್ವಾವಲಂಬನೆಯ ನೆಲೆಯಲ್ಲಿ ಪ್ರಭಾವಿಸಿದ ಮತ್ತು ಸ್ವಯಂ ತಾನೇ ಆ ಬದುಕನ್ನು ಬದುಕಿದ ಗಾಂಧಿಯನ್ನು, ಲೋಕದ ರೋಗಕ್ಕೆ ಅಹಿಂಸೆಯ ಮದ್ದು ಕಂಡಕೊಂಡ ವೈದ್ಯ/ ಚಿಕಿತ್ಸಕ ಎಂಬ ಆದರದ ಭಾವನೆಯಿಂದ ಕಾವ್ಯ ನೆನೆಯುತ್ತದೆ. ದೇಶದ ಸ್ವಾತಂತ್ರ್ಯಕ್ಕೆ ಗಾಂಧಿ ಕೊಡುಗೆ ಶೂನ್ಯವೆಂದು ಸಾರುತ್ತಲೇ ಬಂದ ಮತೀಯವಾದಿ ರಾಷ್ಟ್ರೀಯವಾದಿಗಳಿಗಿಂತ ಭಿನ್ನವಾಗಿ, ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು ಎಂಬ ಶೀರ್ಷಿಕೆಯುಳ್ಳ ಕವಿತೆಯಲ್ಲಿ 'ಈಗ ಭಾರತಕ್ಕಗತ್ಯವಿದೆ ನಿನ್ನ' ಎಂದು

ಬರೆದ ಗೋವಿಂದ ಪೈ ಗಾಂಧಿಯನ್ನು ಕಾಣುವುದು ದೇಶದ ರೋಗವನ್ನೂ ಮೀರಿ ಲೋಕದ ರೋಗಕ್ಕೆ ಔಷಧಿಯನ್ನು ಕಂಡು ಹುಡುಕಿದ ವೈದ್ಯನ ಪದವಿಯಲ್ಲಿ! ಮಹಾತ್ಮನ ಆ ಖ್ಯಾತಿಯನ್ನು ದೇವ ಲೋಕದಲ್ಲಿಯೂ ಕೊಂಡಾಡಿ ಎಂದು ದೇವಕನ್ನೆಯರಿಗೆ ಭಿನ್ನವಿಸುವ ಪೈ ಅವರ ಈ ಕವನದಲ್ಲಿರುವುದು ಗಾಂಧಿ ನಮ್ಮೊಂದಿಗಿಲ್ಲದ ಶೂನ್ಯತೆಯ ಭಾವ ಎಂಬುದನ್ನೂ ಗಮನಿಸಬೇಕು. ಇಲ್ಲಿರುವುದು ಮರಣಿಸಿದ ಗಾಂಧಿಯಿಂದಾಗಿ ಆವರಿಸಿಕೊಂಡ ಶೂನ್ಯತೆ. ಗಾಂಧಿ ತತ್ವಕ್ಕಿಂತ ಹೆಚ್ಚಾಗಿ ಗಾಂಧಿ ಎನ್ನುವ ವ್ಯಕ್ತಿಯನ್ನು ಕಳೆದುಕೊಂಡ ದುಃಖ ಇಲ್ಲಿ ಮಡುಗಟ್ಟಿದೆ ಎಂದೇ ಹೇಳಬೇಕು. ಆದರೆ ಗಾಂಧಿಯ ಕೊಲೆಯ ಅಪರಾಧಿತರನ್ನು ಸಹಾನುಭೂತಿಯಿಂದ ನೋಡಬಲ್ಲ ಕವನಕ್ಕೆ ಗಾಂಧಿಯನ್ನು ಈ ಮಾದರಿಯಲ್ಲಿ ಕೀರ್ತಿಸುವುದು ಹೇಗೆ ಸಾಧ್ಯವಾಗುತ್ತದೆ ಎಂಬುದು ಕುತೂಹಲಕಾರಿ ಸಂಗತಿ. ಒಂದು ಕಡೆಯಿಂದ ಇದು ಕವನದ ಇಬ್ಬಂದಿತನಕ್ಕೆ ಸಾಕ್ಷಿಯಾಗುವ ಹಾಗೆಯೇ ಆ ಉರಿಯುವ ಚರಿತ್ರೆಯ ಒತ್ತಡದಲ್ಲಿ ಗಾಂಧಿಯನ್ನು ಹಾಗೆ ಚಿತ್ರಿಸಬೇಕಾದ ಒತ್ತಡದಿಂದ ಕಾವ್ಯಕ್ಕೆ ತಪ್ಪಿಸಿಕೊಳ್ಳಲಾಗಿಲ್ಲವೆಂದೂ ಭಾವಿಸಲು ಅವಕಾಶವಿದೆ.

ಈ ಹುಸಿ ರಾಷ್ಟ್ರೀಯವಾದದ ಪರವಾದ ಒಲವಿನ ನಡುವೆಯೂ ಜನಾಂಗೀಯ ಕಲಹ, ಪರಮತ ದ್ವೇಷಗಳಿಗೆ ಪೈಯವರ ಕೃತಿಗಳು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾ, ಸಹಬಾಳ್ವೆಯ ಅವಶ್ಯಕತೆಯನ್ನು ಸಾರುತ್ತವೆ ಎಂಬುದನ್ನು ನಿರಾಕರಿಸಲಾಗದು. ಉದಾಹರಣೆಗೆ ವಿಶಲಿಪ್ತ ನಾಟಕದ ಆರ್ಯ-ಅನಾರ್ಯ ಸಂಘರ್ಷಕ್ಕೆ ಸಂಬಂಧಿಸಿದಂತೆ ಹೇಳುವ, ಅನ್ಯ ಸಮ್ಯಾಗಗಳಿಗೆ ಎಡೆಕೊಡದ ಜವಿದುಮೆಳೆ ತನ್ನ ಕಿಚ್ಚಾಟದಿಂದಲೇ ತಾನು ಉರಿದು ಹೋಗುವ ಹಾಗೆ ಎಂಬ ಹಾಗೂ ಚಿತ್ರಭಾನು ನಾಟಕದ ಜಾತಿಭೇದ ಬರಿತೆ ಕಡಾ ಅನ್ಯರ ತೊತ್ತಾದೆವು ಎನ್ನುವ ಮಾತುಗಳು ಆಂತರಿಕ ಕಲಹದಿಂದಾಗುವ ಅನಾಹುತವನ್ನು ಧ್ವನಿಸುತ್ತವೆ. ಈ ನಡುವೆಯೂ ಹೀಗೆ ನಿರ್ದಿಷ್ಟವಾದ ಸಂದರ್ಭದಲ್ಲಿ ರಾಷ್ಟ್ರ ಎನ್ನುವುದಕ್ಕೆ ಸಂಬಂಧಿಸಿ ಅವರ ರಾಜಕೀಯ ನಿಲುವಿನಲ್ಲಿ ಮತೀಯ ನೆಲೆಯ ಚಾರಿತ್ರಿಕ ಧೋರಣೆಯ ಸ್ಪರ್ಶವಿರುವುದನ್ನು ಅಲ್ಲಗಳೆಯುಕೊಳ್ಳಬೇಕಾ ಗಿಲ್ಲವೆನ್ನುವುದೂ ಅಷ್ಟೇ ಮುಖ್ಯ. ಭಾರತಕ್ಕೊಂದು ಸುವರ್ಣಯುಗವಿತ್ತು ಮತ್ತು ಅದು ನಿರ್ದಿಷ್ಟವಾದ ಕಾಲಘಟ್ಟವೊಂದರಲ್ಲಿ, ನಿರ್ದಿಷ್ಟ ಸಮುದಾಯದ ಆಕ್ರಮಣದಿಂದ ಹಾಳುಗೆಡವಲ್ಪಟ್ಟಿತೆಂಬ ನಿಲುವು ಹಾಗೂ ಆ ಗತ ಮತ್ತೆ ಪುನರ್ನಿರ್ಮಾಣಗೊಳ್ಳಬೇಕೆಂಬ ಹಂಬಲ. ಈ ಆಲೋಚನೆಗಳೊಳಗೆ ಅಂತರ್ಗತವಾಗಿರುವುದನ್ನು ಮರೆಮಾಚಬೇಕಾಗಿಯೂ ಇಲ್ಲ.

೩

ಕನ್ನಡದ ಇನ್ನೊಬ್ಬ ಮಹಾನ್ ಕವಿ ಬೇಂದ್ರೆಯವರದು ಮೂಲತಃ ಸಂಕರಶೀಲಪ್ರತಿಭೆ. ವಸಾಹತು ಮತ್ತು ವಸಾಹತೋತ್ತರ ಭಾರತದಲ್ಲಿ ಮುಕ್ಕಾಲು ಶತಮಾನ ಬದುಕಿದ ಬೇಂದ್ರೆಯವರ ಕಾವ್ಯದ ಇನ್ನಿತರ ಆಯಾಮಗಳ ಬಗೆಗೆ ಚರ್ಚೆ ನಡೆದ ಪ್ರಮಾಣದಲ್ಲಿ ಅವರ ರಾಜಕೀಯ ತಾತ್ವಿಕತೆ ಮತ್ತು ರಾಷ್ಟ್ರೀಯತೆಯ ಕುರಿತಾದ ನಿಲುವುಗಳ ಕುರಿತಂತೆ ಚರ್ಚೆ ನಡೆದಿಲ್ಲ ಎಂದೇ ಹೇಳಬೇಕು. ಭಾರತದ ರಾಷ್ಟ್ರೀಯ ಹೋರಾಟ ಹಾಗೂ ಮತೀಯವಾದದ ಕುರಿತಂತೆ ಬೇಂದ್ರೆಯವರ ವಿಚಾರಧಾರೆಗಳಲ್ಲಿರುವ ಖಚಿತ ರಾಜಕೀಯ ಸ್ಪಷ್ಟತೆ ಈ ಸಂಬಂಧವಾಗಿ ಅನಾವರಣಗೊಂಡುದು ಕಡಿಮೆಯೆಂದೇ ಹೇಳಬೇಕು. ಈ ದಿಸೆಯಲ್ಲಿ ಕನ್ನಡದ ಸಮಕಾಲೀನ ಕವಿಗಳಿಗಿಂತ ಭಿನ್ನವಾಗಿ ಗತಕಾಲದ ವೈಭವೀಕರಣಕ್ಕಿಂತಲೂ ವರ್ತಮಾನದ ಸಮಸ್ಯೆಯ ಶೋಧಕ್ಕಿಳಿಯಬಲ್ಲ ಬೇಂದ್ರೆ, ಅವರಲ್ಲಿ ನಿರ್ಮತೀಯ ರಾಷ್ಟ್ರೀಯವಾದದ ಖಚಿತ ನಿಲುವುಗಳೂ, ಭಾರತದ ಮತೀಯವಾದಿ ವಿಚಾರಗಳಿಗೆ ಖಚಿತ ವಿರೋಧವೂ ವ್ಯಕ್ತವಾಗುವುದನ್ನು ನಾವು ಗಮನಿಸಬಹುದು. ನವೋದಯದ ಪ್ರಮುಖ ಕವಿಗಳ ಕಾವ್ಯದಲ್ಲಿ ಮತೀಯ ರಾಷ್ಟ್ರೀಯವಾದಿ ಚಿಂತನೆಗಳು ಸಹಜ ಸಂವೇದನೆಗಳಾಗಿ ಅಭಿವ್ಯಕ್ತಿ ಪಡೆದಿವೆ. ವಸಾಹತು ಚರಿತ್ರೆಯ ದಟ್ಟ ಪ್ರಭಾವಕ್ಕೊಳಗಾದ ನವೋದಯದ ಕವಿಗಳಲ್ಲಿ ಗತಕಾಲದ ವೈಭವೀಕರಣ ಹಾಗೂ ಮಧ್ಯಕಾಲೀನ ಚರಿತ್ರೆಯ ವಿಕೃತೀಕರಣಗಳು ಅವರ ಸಂವೇದನೆಯ ಭಾಗವಾಗಿ ನೆಲೆಗೊಂಡಿವೆ. ಆದರೆ

ಬೇಂದ್ರೆಯವರು ತಮ್ಮ ಕವಿತೆಗಳಲ್ಲಿ ಉದ್ದೇಶಪೂರ್ವಕವಾಗಿ ಈ ಮಿತಿಯನ್ನು ಮೀರಲು ಯತ್ನಿಸುತ್ತಾರೆ. ಇದು ಕನ್ನಡ ಕಾವ್ಯ ಸಂದರ್ಭದಲ್ಲಿಯೇ ವಿರಳವಾಗಿ ಕಾಣಸಿಗುವ ರಾಜಕೀಯವಾದ ಗಟ್ಟಿನಿಲುವು ಎಂಬುದನ್ನು ನಾವು ಗಮನಿಸಬೇಕು. ಭಾರತ ಸಂಸ್ಕೃತಿಯ ಸಂಕರಶೀಲತೆ ಹಾಗೂ ವೈವಿಧ್ಯತೆಗಳನ್ನು ಅಸಂಖ್ಯ ಆಯಾಮಗಳಲ್ಲಿ ಮೈದುಂಬಿಕೊಂಡು ಬರೆದ ಕವಿ ಬೇಂದ್ರೆಯವರಲ್ಲಿ ನವೋದಯದ ಯಾವುದೇ ಕವಿಗಳಿಗಿಂತಲೂ ಹೆಚ್ಚಿನ ನಿರ್ಮಿತಿಯ ರಾಜಕೀಯ ಒಳನೋಟಗಳಿವೆ. ಆತ್ಮಕಲ್ಯಾಣ ಹಾಗೂ ಲೋಕ ಕಲ್ಯಾಣಗಳಿಗಾಗಿ ಸಮಸ್ತ ಧಾರೆಗಳನ್ನು ತನ್ನ ಬೌದ್ಧಿಕ ವ್ಯವಸ್ಥೆಗೆ ಸ್ವೀಕರಿಸುವ ಈ ಸಂಕರಶೀಲ ಗುಣ, ಲೋಕ ವಿರೋಧಿಯಾದ ನೆಲೆಗಳನ್ನು ವಿರೋಧಿಸುವಲ್ಲಿಯೂ ನಿಷ್ಠುರತೆಯನ್ನು ಹೊಂದಿರುತ್ತದೆ. ಭಾರತೀಯ ಸಂಸ್ಕೃತಿಯ ಬಹುಮುಖತೆ ಹಾಗೂ ಸಂಕರಶೀಲತೆಗಳು ಬೇಂದ್ರೆ ವ್ಯಕ್ತಿತ್ವದ ಜೀವದ್ರವ್ಯ. ಗಾಂಧಿಯನ್ನು ಭಾರತ ಸಂಸ್ಕೃತಿಯ ಬಹುಮುಖತೆಯ ಪ್ರತಿನಿಧಿಯಾಗಿ ಗ್ರಹಿಸುವ ಬೇಂದ್ರೆಯವರು ಈ ತತ್ವಕ್ಕೆ ವಿರುದ್ಧವಾದ ಮತೀಯವಾದದ ಕರಾಳತೆಯನ್ನು ನಿಷ್ಠುರಮಾತುಗಳಲ್ಲಿ ವಿರೋಧಿಸಬಲ್ಲರು. ಸಮಕಾಲೀನ ಚರಿತ್ರೆ ನಿರ್ಮಾಣ ಹಾಗೂ ಸಂಶೋಧನಾ ವಿಧಾನದಲ್ಲಿರುವ ಭೂತಾರಾಧನೆ(ಗತದ ವೈಭವೀಕರಣ) ಮತ್ತು ಮತೀಯ ಧ್ರುವೀಕರಣವನ್ನು ವಿರೋಧಿಸಿ, ಗತಕಾಲವನ್ನು ಮಧ್ಯಕಾಲಕ್ಕೆ ವೈರಿಯಾಗಿ ನಿಲ್ಲಿಸುವ ವಸಾಹತುಶಾಹಿ ಚರಿತ್ರೆಯ ವಿಭಜಕವಾದಿ ಚಿಂತನಾಕ್ರಮಕ್ಕೆ ಕಾವ್ಯದ ಮೂಲಕ ಪ್ರತಿಕ್ರಿಯಿಸಿದವರು ಕವಿ ಬೇಂದ್ರೆ. ಇದು ಆಧುನಿಕ ಕನ್ನಡದ ಸಂದರ್ಭದಲ್ಲಿ ಮತ್ತು ಕನ್ನಡ ಕಾವ್ಯದಲ್ಲಿ ಅತ್ಯಂತ ವಿರಳವಾಗಿ ಕಾಣಸಿಗುವ ಮತೀಯವಾದದ ವಿರೋಧಿ ಚಿಂತನೆಯೂ ಹೌದು.

ಬೇಂದ್ರೆಯವರು ಗಾಂಧೀಜಿಯವರನ್ನು ಕುರಿತು ಸುಮಾರು ಹದಿನೆಂಟು ಕವಿತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಸುಮಾರು ಹತ್ತು ಕವಿತೆಗಳು ಗಾಂಧೀಜಿಯವರ ಕೊಲೆ ಮತ್ತು ಮರಣವನ್ನೇ ಕೇಂದ್ರೀಕರಿಸುತ್ತವೆ. ಈ ಕವನಗಳು ಗಾಂಧೀಜಿಯವರ ಕೊಲೆ, ಕೊಂದವರ ಹಿಂಸಾಗುಣ, ಅದಕ್ಕೆ ಜನತೆಯ ಪ್ರತಿಕ್ರಿಯೆ ಮುಂತಾದ ಸಂಗತಿಗಳನ್ನು ಹಿಂಸೆ-ಅಹಿಂಸೆಯ ಪರಿಭಾಷೆಯಲ್ಲಿ ಮಾತ್ರ ಚರ್ಚಿಸದೆ, ಮತೀಯವಾದ ಮತ್ತು ಧಾರ್ಮಿಕ ಸಾಮರಸ್ಯದ ಸಂಘರ್ಷದ ನೆಲೆಗೂ ವಿಸ್ತರಿಸುತ್ತವೆ. ಗಾಂಧಿ ಕುರಿತ ಈ ಮಾದರಿಯ ಕಾವ್ಯ ಸರಣಿಗಳ ಕುರಿತಂತೆ ಎಂ.ಡಿ ಒಕ್ಕುಂದ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ -ಗಾಂಧಿ ಹತ್ಯೆಯ ಆಘಾತವನ್ನು ತನ್ನ ಸೃಜನಶೀಲತೆಯ ಬಹುಮುಖ್ಯ ರೂಪಕವಾಗಿ ಸ್ವೀಕರಿಸುವುದು, ಗಾಂಧಿ ಮತ್ತು ಗೋಡ್ಸೆ ವೈರುಧ್ಯಗಳನ್ನು ನಿರಂತರವಾಗಿ ಮುಖಾಮುಖಿಯಾಗಿಸುವದು, ಜನತೆಯ ತಲ್ಲಣ ಸಂಕಟಗಳನ್ನು ಮರಳಿ ಮರಳಿ ಅಭಿವ್ಯಕ್ತಿಸುವದು, ಸಾರ್ವಕಾಲಿಕ ಗಾಂಧೀಚಿಂತನೆಗಳನ್ನು ಎತ್ತಿ ಹಿಡಿಯುವದು, ಬೇಂದ್ರೆಯವರ ಗಾಂಧಿ ಕವಿತೆಗಳ ಲಕ್ಷಣಗಳಾಗಿವೆ. ಕವಿಯೊಬ್ಬ ಕೋಮುವಾದದ ವಿರುದ್ಧ ತೋರಿದ ಪ್ರಖರ ರಾಜಕೀಯ ಪ್ರತಿಭಟನೆಯ ಕಾವ್ಯಾತ್ಮಕ ಮಾದರಿ ಇದು' ಎಂದು ಅಭಿಪ್ರಾಯಪಡುತ್ತಾರೆ. ಮರಣಿಸಿದ ಗಾಂಧಿಯನ್ನು ಜೀವಂತ ಗಾಂಧಿಗಿಂತ ಹೆಚ್ಚು ಶಕ್ತಿಶಾಲಿಯಾಗಿ ವಿವರಿಸಿಕೊಳ್ಳುವ ಶ್ರದ್ಧಾಂಜಲಿ ಕವನ ಗಾಂಧೀ ತರುವಾಯ ದೇಶ ಕತ್ತಲೆಯಲ್ಲಿ ಮುಳುಗಿತು ಎಂದು ನೈರಾಶ್ಯವನ್ನು ತೋರಿದ ರಾಷ್ಟ್ರನಾಯಕರುಗಳ ಮಾತಿಗೆ ಪ್ರತಿಕ್ರಿಯೆಯಂತಿದೆ.

ಬೇಂದ್ರೆಯವರ ಶ್ರದ್ಧಾಂಜಲಿ ೧೬ ಸಾಲುಗಳ ಪುಟ್ಟ ಕವನ. ಕವನ ಆರಂಭವಾಗುವುದು ಮತ್ತು ಕೊನೆಗೊಳ್ಳುವುದು ಒಂದೇ ಮಾದರಿಯ ಎರಡು ಸಾಲುಗಳಲ್ಲಿ. ಈ ಎರಡೂ ಸಾಲುಗಳಲ್ಲಿ ಗಾಂಧಿ ಎಂಬ ವ್ಯಕ್ತಿಯ ಉಲ್ಲೇಖವೇ ಇಲ್ಲ. ಇಲ್ಲಿರುವುದು ಒಂದನ್ನೊಂದು ಮುಖಾಮುಖಿಯಾಗಿ ಸೆಣಸುವ ಎರಡು ವಿಚಾರಗಳು. ಅಹಿಂಸೆಯನ್ನು ಎದುರಿಸಲಾರದ ಹಿಂಸೆ ತನ್ನ ಹಿಂಸಾ ಮಾದರಿಯಲ್ಲಿಯೇ ಅದನ್ನು ಮಣಿಸಲೆಳಸಿದ ಸಂಘರ್ಷದ, ಆದರೆ ವಿಫಲ ಕಥನವನ್ನು ಕಾವ್ಯ ಕಾಣಿಸುತ್ತದೆ. ಗಾಂಧಿ ಕೊಲೆಯನ್ನು ವಿಚಾರದ ಕೊಲೆಯತ್ನವಾಗಿಯೇ ಪರಿಭಾವಿಸುವ ಕವನ, ಹಾಗೆ ಯತ್ನಿಸಿದ ಶಕ್ತಿಯನ್ನು ಒಂದು ವಿಚಾರ ಪಂಥವಾಗಿಯೇ ಮೂರ್ತೀಕರಿಸಿಕೊಂಡಿದೆ. ಹಾಗಾಗಿ ಇಲ್ಲಿ ಗೋಡ್ಸೆ ಒಬ್ಬ ವ್ಯಕ್ತಿಯಾಗದೆ ಒಂದು

ವಿಚಾರಪಂಥದ ಪ್ರತಿನಿಧಿಯಾಗುತ್ತಾನೆ. ಆ ವಿಚಾರವಾದರೋ ಸಂಕರಶೀಲ ಸಾಮರಸ್ಯ ಪರಂಪರೆಯನ್ನೇ ನಾಶಮಾಡಲೆಳಸಿದ ಮತೀಯವಾದಿ ಹಿಂಸಾಮಾದರಿಯದಾಗುತ್ತದೆ. ಸಹಜವಾಗಿಯೇ ಕವನದ ಏಕಧ್ವನಿಕೋಮುವಾದ ಹಾಗೂ ಸಾಮರಸ್ಯವಾದಗಳ ಸಂಘರ್ಷದ ಸ್ವರೂಪಪಡೆಯುತ್ತದೆ.

ಹಿಂಸೆ ಕೊನೆಗಹಿಂಸೆಯನು ಗುಂಡುಹಾಕಿ ಕೊಂದಿತೋ?
ತನ್ನ ಕೊಲೆಯ ಕೊನೆಗಾಣಿಸಿ ಇವಗೆ ಶರಣು ಬಂದಿತೋ?
ಅಯ್ಯೋ ಇವನು ಅಮರ ನಾನೇ ತಾನೇ ಸತ್ತೆ ಎಂದಿತೋ?
ನಾನೆ ಸತ್ತೆ ಎಂದಿತೋ?[೮]

ಬೇಂದ್ರೆಯವರ ಕವನದಲ್ಲಿ ಭಾರತದ ವಿಭಜನೆಯ ಕಾರಣದೊಂದಿಗೆ ಗಾಂಧಿಯ ಕೊಲೆಯನ್ನು ವಿವರಿಸಿಕೊಳ್ಳುವ ಯತ್ನವಿಲ್ಲ. ಹಾಗೆಯೇ ಇದೊಂದು ಯಾವುದೋ ಒಂದು ಕಾಲದ ಉರುಬಿನ ಫಲಿತವೆಂತಲೂ ಪರಿಭಾವಿತವಾಗುವುದಿಲ್ಲ. ಬದಲಾಗಿ ಅಹಿಂಸೆಯ ಗೋಡೆಯನ್ನೆ ಬಳಸಿ ಬರೆಯುತ್ತಾ ಬಂದ ಕೊಲೆಯ ಈ ಚಿತ್ರ ಗಳಿಗೆ ಶತಮಾನಗಳ ಇತಿಹಾಸವಿದೆ ಎಂಬ ಅರಿವಿದೆ. ಹಾಗಾಗಿಯೇ ಗೋವಿಂದ ಪೈ ಅವರ ಹಾಗೆ ಅದನ್ನೊಂದು ವ್ಯಕ್ತಿಗತ ಮಟ್ಟದ ಹತ್ಯಾಯತ್ನವಾಗಿ ಇಲ್ಲಿ ಕಾಣಲಾಗಿಲ್ಲ. ಬೇಂದ್ರೆಯವರಲ್ಲಿ ಅದು ಎರಡು ಬಗೆಯ ಆಲೋಚನೆಗಳ ಸಂಘರ್ಷ. ಹಿಂಸೆ-ಅಹಿಂಸೆ ಎಂದು ವಿಭಜಿಸಿಕೊಳ್ಳುವ ಇವುಗಳ ಮುಖಾಮುಖಿಯಲ್ಲಿ ಅಹಿಂಸೆಯ ನಿಲುವನ್ನು ಸ್ಥಿರತೆಯ ನೆಲೆಯಲ್ಲಿಯೂ, ಹಿಂಸೆಯನ್ನು ಮಾನವ ವಿಕೃತಿ ಜಿಡಿಸಲಾದ ಕೃತಕಚಿತ್ರವಾಗಿಯೂ ವಿವರಿಸಿಕೊಳ್ಳಲಾಗಿದೆ. ಹೇಸಿಗೆ ತರಬಲ್ಲ ಹಿಂಸೆಯ ವಾತಾವರಣದ ಇರುವಿಕೆಯನ್ನು ಬೀಸಿತ್ತು ದುರ್ವಾಸನೆಯ ವಾತ, ಕೊಲೆಯ ನಾರುವ ನಾತ ಎಂದೇ ಅವರು ತಮ್ಮ ಗಾಂಧೀ ಕುರಿತ ಕವನಗಳ ಸರಣಿಯಲ್ಲಿ ಗುರುತಿಸುತ್ತಾರೆ. ಈ ಕೊಲೆಯನ್ನು ವ್ಯಕ್ತಿಗತ ನೆಲೆಯಲ್ಲಿ ನೋಡದೆ ಅದನ್ನೊಂದು ಪಂಥವಾಗಿ, ಸಾಂಘಿಕ ಹೊಣೆಗಾರಿಕೆಯಿರುವ ದೋಷವಾಗಿ, ತಾತ್ವಿಕ ಪಭೇದವಾಗಿಯೇ ಗುರುತಿಸುತ್ತಾರೆ. ಗಾಂಧಿ ಕೊಲೆಯನ್ನು ಒಬ್ಬ ವ್ಯಕ್ತಿಯ ಹೊಣೆಗೇಡಿ ವರ್ತನೆಯೆಂದು ಕಾಣದ ಬೇಂದ್ರೆ ಕವನಗಳು, ಕೊಲೆಗಡುಕರು ಯಾರು? ಅವರ ಶೀಲಚರ್ಯೆಗಳೇನು? ಅವರು ಕೊಲೆಗೆ ಆಯ್ದುಕೊಂಡ ಕಾಲವಾದರೂ ಎಂತಹದು? ಎಂಬುದನ್ನು -

ಮುಗಿದ ಕೈಗಳಲಿ ಮುಚ್ಚಿಟ್ಟಿದ ದೊಣ್ಣೆ![೯]
ಆ ಜನ ದನ, ತಾಯಿ[೧೦]
ಲೋಕಕಾಶೀರ್ವಾದ ಪಾರ್ಥಿಸುವ ಸಮಯಕ್ಕೆ ಕೊಂದರು![೧೧]

ಎಂದು ಹೇಳುವ ಮೂಲಕ ಕೊಲೆಗಾರರ ಚರಿತ್ರೆಯ ಚಹರೆಯನ್ನೇ ನೀಡುತ್ತಾರೆ. ಸಾಂಸ್ಕೃತಿಕ ವಾರೀಸುದಾರಿಕೆಯ ಮಾತಾಡುವ ಈ ಮಂದಿ, ಸಂಸ್ಕೃತಿ ನಿಷೇಧಿಸುವ ಕೊಲೆಯ ಹೊತ್ತನ್ನೇ ಗಾಂಧೀ ಕೊಲೆಗಾಗಿ ಆಯ್ದುಕೊಂಡರು ಎಂದು ತೋರುವ ಮೂಲಕ ಈ ಹಿಂಸಾಭಕ್ತರ ಸಂಸ್ಕೃತಿನಿಷ್ಠೆಯ ನಿಜಹೂರಣವನ್ನು ಬಯಲಿಗೆಳೆಯುತ್ತಾರೆ. ಇವರ ದೇಶನಿಷ್ಠೆಯ ಅಸಲಿಯತ್ತಿಗೆ ಗೋವಿಂದ ಪೈ ಅನುಮಾನಕ್ಕೆಡೆಯಿಲ್ಲದಂತೆ ಸಮ್ಮತಿಯ ಮುದ್ರೆಯೊತ್ತಿದರೆ, ಬೇಂದ್ರೆ ರೇಷಿಮೆಯ ತೊಟ್ಟವರು ಬಂಗಾರ ಇಟ್ಟವರು ಬೆರಳಾಡಿಸಿದಲ್ಲೆಲ್ಲ ವಂದೇ ಮಾತರಂ ಗೀತ,[೧೨] ಎಂದು ಬೆರಳಾಡಿಸುವ ತಂತ್ರಗಾರಿಕೆಯನ್ನೂ, ಬೆರಳಾಡಿಸುವವರ ಆರ್ಥಿಕ ಸ್ಥಿತಿಗತಿಗಳನ್ನೂ ಯಾವುದೇ ಮುಲಾಜಿಲ್ಲದೆ ಪಸ್ತಾಪಿಸುತ್ತಾರೆ.

ಹಿಂಸೆಯನ್ನು ಅದರೆಲ್ಲ ವಿಕೃತಿಗಳ ಜೊತೆಗೆ ವಿರೋಧಿಸುವ ಖಚಿತವಾದ ನಿಲುವುಳ್ಳ ಬೇಂದ್ರೆ, ಗಾಂಧಿಕೊಲೆಯ ಹಿಂಸೆಯೊಂದಿಗೆ, ಜಗತ್ತಿನ ದಾರ್ಶನಿಕರನ್ನು ಆಹುತಿಪಡೆದ ಹಿಂಸೆಯ ಚರಿತ್ರೆಯನ್ನು ನೆನಪಿಸುತ್ತಾರೆ. ಹಿಂಸೆ ಅಹಿಂಸೆಗಳ ನಡುವಿನ ವ್ಯತ್ಯಾಸವನ್ನು,

ಅಹಿಂಸೆ ಎಂಬುದು ಗೋಡೆ
ಹಿಂಸೆ ಎಂಬುದು ಚಿತ್ರ[೧೩]

ಎಂದೇ ಗಮನಿಸುವ ಬೇಂದ್ರೆ, ಹಿಂಸೆಯನ್ನು ಕೇಡಾಗಿಯೇ ಪರಿಭಾವಿಸುತ್ತಾರೆ. ಬೇಂದ್ರೆ ಅವರಲ್ಲಿ ಈ ಕೇಡು ವಿಜೃಂಭಿಸಿದ ಆತಂಕವಿಲ್ಲ. ಅಹಿಂಸೆಯ ನಿಲುವನ್ನು ಕದಲಿಸಲು ಹಿಂಸೆ ಪಟ್ಟ ಶ್ರಮದ ವಿಫಲ ಚರಿತ್ರೆಯನ್ನು ಅವರ ಕಾವ್ಯ ಮೆಲುಕು ಹಾಕುತ್ತದೆ. ತನ್ನ ಸೋಲಿನ ನಿರಂತರತೆಯ ನಡುವೆಯೂ ಶತಮಾನಗಳ ಕಾಲದಿಂದ ಗೋಡೆಯಂತೆ ನಿಂತ ಅಹಿಂಸೆಯ ಮೇಲೆಯೇ ಹೂವಿಗೆ ಬೆಂಕಿ ಹಚ್ಚಿ ಸಂಸ್ಕೃತಿಯ ಜಂಭಕೊಚ್ಚುವ ಈ ಹಿಂಸಾಭಕ್ತರೆಲ್ಲರೆಲ್ಲರೂ ಮತ್ತೆ ಮತ್ತೆ ಜನ ಓದುವ ಹಿಂಸೆಯ ಚಿತ್ರವನ್ನು ಬಿಡಿಸುತ್ತಲೇ ಬಂದಿದ್ದಾರೆ. ಹಾಗಿದ್ದೂ ಚಿತ್ರಗಳಿಗೆ ಆಧಾರವಾದ ಗೋಡೆಯನ್ನು ಕಬಳಿಸುವ ಶಕ್ತಿ ಆ ಹಿಂಸೆಗೆ ಇಲ್ಲ ಎಂಬ ಧ್ವನಿ ಸ್ಪಷ್ಟವಿದೆ. ಹಾಗಾಗಿ ಅದು ಕೇಡು ಮಾತ್ರವಲ್ಲ, ದುರ್ಬಲವೂ ಹೌದು. ಗಾಂಧಿಯ ಕೊಲೆ ಅಂತಹ ದುರ್ಬಲ ಶಕ್ತಿಯಾದ ಕೇಡಿನ ಕೆಲಸ. ಚರಿತ್ರೆಯಲ್ಲಿ ಈ ಗೋಡೆ ಮೇಲಿನ ಚಿತ್ರಗಳು ಮತ್ತಷ್ಟೋ ಮೂಡಿವೆ, ಹೀಗಿದ್ದೂ ಗೋಡೆಯ ಸ್ಥಾಯೀತನಕ್ಕೆ ಭಂಗ ಬಂದುದಿಲ್ಲ ಎಂಬ ಧ್ವನಿ ಬೇಂದ್ರೆ ಅವರ ಗಾಂಧಿ ಕುರಿತ ಕವನಗಳ ಒಳತಂತುವಾಗಿ ಹರಿದಿದೆ ಎಂಬುದನ್ನು ಗಮನಿಸಬೇಕು. ಹಾಗಾಗಿ ಇಲ್ಲಿ ಗಾಂಧಿ ಕೊಲೆಯಾದರೂ ಗಾಂಧಿ ಮತ್ತಷ್ಟು ಶಕ್ತ, ಸಮರ್ಥ. ಹಿಂಸೆಗೆ ಅಹಿಂಸೆಯನ್ನು ಗುಂಡು ಹಾಕಿ ಕೊಲ್ಲೋದಕ್ಕಾಗದು.

ಗಾಂಧಿ ಗಂಧ ದಿಗ್-ದಿಗಂತ ಕೀರ್ತಿರೂಪ ತಳೆದಿದೆ
ಸೋಲನೆಲ್ಲ ಗೆಲುವುಗೊಳಿಸಿ ಮುಕ್ತನಾದ ಭೂಪನು
ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ?[೧೪]

ಹಾಗಾಗಿ ಹಿಂಸೆಯನ್ನು ದುರ್ಮಾರ್ಗಿಯ ಪಾತವಾಗಿ, ಸಾಯುವ ಸಾತವೆಂದೇ ಪರಿಭಾವಿಸುವ ಬೇಂದ್ರೆ ಅವರಲ್ಲಿ, ಹಿಂಸೆ ತನ್ನ ಅತ್ಯಂತಿಕಸ್ವರೂಪದಲ್ಲೂ ಯಾವುದೇ ಗೌರವಕ್ಕೆ ಪಾತ್ರವಾಗುವುದಿಲ್ಲ. ಕೊಲ್ಲುವ ಹಿಂಸಾರತಿ ಸಾವಿಗೆ ಸ್ವಯಂ ಶರಣಾಗುವಂತಹದು. ಇದನ್ನು ಸಾಮ್ಯದ ನೇತ್ರವನ್ನು ಕಳೆದುಕೊಂಡ ಅವಿವೇಕಿಯಾದ ಧೃತರಾಷ್ಟ್ರ ಸಂತತಿಯೆಂದೇ ಗುರುತಿಸುವ ಮೂಲಕ ಸಾಮರಸ್ಯದ ಬದುಕನ್ನೇ ವಿಕೃತಿಸುವ ಮತೀಯವಾದದ ಜಡವಾದಿ, ಬಡಕಿನ ಹಾದಿಯ ದುಷ್ಟಮುಖವನ್ನು ತೋರುತ್ತಾರೆ. ಶ್ರದ್ಧಾಂಜಲಿ ಕವಿತೆಯಲ್ಲಿ ಗಾಂಧೀಜಿಯನ್ನು ಕೊಲ್ಲುವುದರ ಮೂಲಕ ತಾನು ಗೆಲ್ಲಬಹುದೆಂದು ಭ್ರಮಿಸಿದ ಕೋಮುವಾದಿ ಶಕ್ತಿಗಳು ಅಲ್ಲಿಯೂ ಸೋತದ್ದು ಎನ್ನುವುದು ಬೇಂದ್ರೆಯವರ ಖಚಿತ ನಿಲುವು. ಮತೀಯವಾದವು ಗಾಂಧಿವಾದವನ್ನು ನಿಗ್ರಹಿಸಿದಂತೆ ಭಾಸವಾದರೂ, ಜಗತ್ತಿನ ಮತೀಯಹಿಂಸೆಯ ವಿರುದ್ಧದ ಗಂಧವಾಗಿ ದಿಗ್ ದಿಗಂತದವರೆಗೆ ವ್ಯಾಪಿಸಿದ ಗಾಂಧಿವಾದದ ಚಾರಿತ್ರಿಕ ಶಕ್ತಿಯೆದುರು ಅದು ಅಂದು ಸೋಲೊಪ್ಪಿಕೊಳ್ಳಲೇಬೇಕಾಯ್ತು. ಗಾಂಧಿಯ ಸಾವು ಗಾಂಧಿವಾದಕ್ಕೆ ಶಕ್ತಿವರ್ಧಕವಾಗಿ, ಆ ಕ್ಷಣಕ್ಕೆ ಕೋಮುವಾದವನ್ನು ಅದು ಹಿಮ್ಮೆಟ್ಟಿಸಿತ್ತು. ಗಾಂಧಿಯನ್ನು ಕೊಂದ ಕಾರಣಕ್ಕೆ ದಶಕಗಳವರೆಗೆ ಕೋಮುವಾದಿ ಶಕ್ತಿಗಳಿಗೆ ಭಾರತದ ಸಮಾಜದಲ್ಲಿ ತಲೆ ಎತ್ತಲು ಸಾಧ್ಯವಾಗಿರಲಿಲ್ಲ ಎನ್ನುವ ಐತಿಹಾಸಿಕ ಸತ್ಯದ ಹಿನ್ನೆಲೆಯಲ್ಲಿ ಬೇಂದ್ರೆಯವರ ಈ ಮಾತು ಹೆಚ್ಚು ಧ್ವನಿಪೂರ್ಣವಾಗುತ್ತದೆ. ಇಲ್ಲಿ ಗೋವಿಂದ ಪೈ ಅವರ ಕವನದಲ್ಲಿದ್ದಂತೆ ಗಾಂಧಿ ಇಲ್ಲದ ಶೂನ್ಯತೆಯಿಲ್ಲ. ಸತ್ತ ಗಾಂಧಿ ಬದುಕಿದ್ದ ಗಾಂಧಿಗಿಂತ ಹೆಚ್ಚು ಶಕ್ತಿಶಾಲಿ ಎಂಬ ಧ್ವನಿಯಿದೆ. ಗಾಂಧಿ ಪ್ರತಿಪಾದಿಸಿದ ಸೌಹಾರ್ದತಾ ಪರಂಪರೆಯಲ್ಲಿ ನಿಂತು ಮಾತನಾಡುವ ಬೇಂದ್ರೆಯವರಲ್ಲಿ ಹುಸಿ ರಾಷ್ಟ್ರೀಯವಾದದ ಕುರಿತಾಗಿ ಆದರವೂ ಇಲ್ಲ, ಅಕಾರಣವಾದ ಅನುಕಂಪವೂ ಇಲ್ಲ. ಅವರು ಮತೀಯ ರಾಷ್ಟ್ರೀಯವಾದಿಗಳನ್ನು ಹೂವಿಗೆ ಬೇಗೆ ಹಚ್ಚಿದರು ಅದರ ಸೌಂದರ್ಯ ಮೆಚ್ಚಿದರು, ಸಂಸ್ಕೃತಿ ಜಂಬ ಕೊಚ್ಚಿದರು[೧೫] ಎಂದು ನೇರವಾಗಿಯೇ ಚುಚ್ಚಬಲ್ಲರು. ಮಾತ್ರವಲ್ಲ, ಅವರ ಮಾತು ಕೃತಿಗಳ ವೈರುಧ್ಯವನ್ನು ಹೇಳಿದ್ದು-ಅಹಿಂಸಾ-ಪುರಾಣ; ತಿಂದದ್ದು ಹಿಂಸೆಯ ಯಮ ಬದನೆಕಾಯಿ![೧೬] (ಅನ್ನದಂತಹ ಬುದ್ಧಿ ಎಂಬ ಮಾತೇ ಇದೆಯಲ್ಲ!?) ಎಂದು ರಾಜಕೀಯ

ಖಚಿತತೆಯಲ್ಲಿ ಲೇವಡಿ ಮಾಡಬಲ್ಲರು. ಯಾವುದನ್ನು ಗೋಪಾಲಕೃಷ್ಣ ಅಡಿಗರು ಗೋವಿಂದ ಪೈಯವರು, ರಾಷ್ಟ್ರಸೇವಾಸಂಘ ದಕ್ಷತೆ ಯಶೋನಾಮ[೨೭] ಹೊಂದಿರುವುದೆಂದು ಗುರುತಿಸುತ್ತಾರೋ, ಬೇಂದ್ರೆ ಮುಗಿದ ಕೈಗಳಲಿ ಮುಚ್ಚಿದ ದೊಣ್ಣೆ ಎಂದು ಅದರೊಳಗಿನ ಹುಸಿಯನ್ನು ಬಯಲುಮಾಡಲು ಹಿಂಜರಿಯುವುದಿಲ್ಲ.

ಹಾಗೆಯೇ ಬೇಂದ್ರೆಯವರು ಗಾಂಧಿ ಕೊಲೆಯನ್ನು ಬಹುಬಗೆಯ ಪ್ರತಿಕ್ರಿಯೆಗಳ ಸಾಹಚರ್ಯದಲ್ಲಿ ಹಿಡಿಯಬಲ್ಲರು. ದೇಶದ ಜನ ದಿಕ್ಕೆಟ್ಟ ಸ್ಥಿತಿ ಅನುಭವಿಸುತ್ತಿರುವಾಗಲೇ, ಭಾರತದ ಕೆಲವು ನಗರಗಳಲ್ಲಿ ಗೋಡ್ಸೆ ಚಿಂತನೆಯ ಜನ ಗಾಂಧಿ ಕೊಲೆಯಾದಾಗ ಸಿಹಿ ಹಂಚಿ ಸಂಭ್ರಮಿಸಿದ್ದರಂತೆ! ಜನಮಾನಸದ ದಿಗ್ಭ್ರಮೆ, ಆತಂಕಗಳನ್ನು ಒಳಗೊಂಡ ಹಾಗೆ ಗೋಡ್ಸೆ ಮನಸ್ಥಿತಿಯ ಸಾಮರಸ್ಯವಿರೋಧಿಗಳ ಈ ಸಂಭ್ರಮವನ್ನು ಕಟ್ಟಿಕೊಡುವುದನ್ನೂ ಅವರು ಮರೆಯುವುದಿಲ್ಲ. ಗೋವಿಂದ ಪೈ ಅವರ ಕವನದಲ್ಲಿ ಇದನ್ನು ನಿರೀಕ್ಷಿಸಲಾಗದು. ಅಲ್ಲಿ ಕಾವ್ಯದ ಹೇಳಿಕೆಯ ಮಟ್ಟದಲ್ಲಿಯೂ ಇಡಿಯ ಭಾರತದಲ್ಲಿ ಗಾಂಧಿಯನ್ನು ವಿರೋಧಿಸುವ ಆಲೋಚನೆಗಳೇ ಇದ್ದಂತಹ ಸಂಗತಿಗಳೇ ಇಲ್ಲ. ಆ ಇರುವಿಕೆಯನ್ನು ಕವನ ಕಣ್ಣಿಗೆ ಕಾಣದಂತೆ ಮುಚ್ಚಿಬಿಡುತ್ತದೆ. ಆದರೆ ಬೇಂದ್ರೆ ಒಂದು ಸಾಂಘಿಕ ಮತದ ಸಂಭ್ರಮವನ್ನು ಹಿಂಸೆಯೂ ಆಚರಿಸಿಕೊಂಡಿತೆಂಬುದನ್ನು ತಮ್ಮ ಗಾಂಧೀ ಕುರಿತ ಕವನಗಳ ಸರಣಿಯಲ್ಲಿ ಹೀಗೆ ದಾಖಲಿಸಿದಾರೆ.-

> ಬೀಸಿತ್ತು ದುರ್ವಾಸನೆಯ ವಾತ, ಕೊಲೆಯ ನಾರುವ ನಾತ
> ಅಬ್ಬ! ಎಂದರು ಯಾರೋ, ಯಾರೊ ಅಬ್ಬರಿಸಿದರು
> ಮೋರೆದಿರುಪಿದರು ಕಿವಿಚಿದರು ನಕ್ಕರು ಯಾರೋ[೨೮]

ಕ್ರೌರ್ಯ, ಮತಾಂಧತೆಯಿಂದ ಕೂಡಿದ ಗಾಂಧಿ ಕೊಲೆಯ ಈ ಸಂಭ್ರಮವನ್ನು ಕಂಡೂ ಕವಿಗೆ ನಿರಾಶೆಯಿಲ್ಲ. ಗಾಂಧಿ ಬೆಳಗಿ ಹೋದ ಬೆಳಕು ಬತ್ತಿಯನ್ನು ಕಳೆದುಕೊಂಡ ಮಾತ್ರಕ್ಕೆ ಬೆಳಕು ನಂದಿ ಕತ್ತಲೆ ವಿಜಯಿಯಾಯಿತೆಂದು ಅವರೆಂದೂ ಭಾವಿಸುವುದಿಲ್ಲ. ಆ ಬೆಳಕಿಗೆ ಬತ್ತಿಯಾಗಿ ಬೆಳಕು ಕಾಣುವ ಹೊಣೆಗಾರಿಕೆಯನ್ನು ನಿಭಾಯಿಸಬೇಕಾದ ಕರೆಕೊಡುವುದನ್ನು ಮಾತ್ರ ಮರೆಯುವುದಿಲ್ಲ. ಬೇಂದ್ರೆ ಅವರಲ್ಲಿ ಗಾಂಧಿ ಸಾವು, ಸೋಲನ್ನು ಗೆಲುವಾಗಿಸಿಕೊಂಡ ದಾರಿ. ಮತಗಳನ್ನು ಮತೀಯತೆಯಿಂದ ಶುದ್ಧೀಕರಿಸುವ ಯಜ್ಞವನ್ನೇ ಬದುಕಾಗಿಸಿಕೊಂಡ ಗಾಂಧಿಗೆ ತಮ್ಮ ಜೀವತಾವಧಿಯ ಎಲ್ಲ ಪ್ರಯತ್ನಗಳೂ ಸಂಪೂರ್ಣ ಗೆಲುವನ್ನು ನೀಡಿರಲಿಲ್ಲ. ಬದುಕಿನ ಈ ಸೋಲನ್ನೆಲ್ಲ ಕೊಲೆಗೀಡಾಗುವುದರ ಮೂಲಕ ಗಾಂಧಿ ಗೆಲುವಾಗಿ ಪರಿವರ್ತಿಸಿದ್ದರು. ಈ ಸಾರ್ಥಕತೆಯ ಸಾವಿನ ಬಗ್ಗೆ ಬೇಂದ್ರೆ ಹಲವಾರು ಬಾರಿ ಉದ್ಗಾರ ತೆಗೆಯುತ್ತಾರೆ. ಹೀಗೆ ಗಾಂಧಿ ಸಾವನ್ನು ಸೌಹಾರ್ದತೆಯನ್ನು ಸಾಧಿಸಿದ ಸಾವಾಗಿ ಕಾಣುವ ಬೇಂದ್ರೆಯವರ ಕವಿತೆ ಅಂತಿಮವಾಗಿ ಧಾರ್ಮಿಕ ಸೌಹಾರ್ದತೆಯ ಕರೆಯನ್ನು ನೀಡುತ್ತದೆ.

೩

ಚಾರಿತ್ರಿಕವಾಗಿ ಗಾಂಧೀಜಿಯವರ ಭಾರತದ ರಾಜಕೀಯ ಪ್ರವೇಶ ಕಾಂಗ್ರೆಸ್ಸಿನೊಳಗಿನ ಹಿಂದೂ ಮೂಲಭೂತವಾದಿ ಶಕ್ತಿಗಳಿಗೆ ಬಿಸ್ಪಡೆಯನ್ನೇ ಉಂಟುಮಾಡಿತ್ತು. ಭಾರತದ ರಾಷ್ಟ್ರೀಯತೆಯನ್ನು ಧರ್ಮಾಧಾರಿತವಾಗಿ ನಿರೂಪಿಸುವ ಕೋಮುವಾದಕ್ಕೆ ಪ್ರತಿಯಾಗಿ ಗಾಂಧೀಜಿಯವರು ಎಲ್ಲ ಧರ್ಮದವರನ್ನು ಸಮಾನವಾಗಿ ಒಳಗೊಳ್ಳುವ ಚಿಂತನೆಗಳನ್ನು ಬೆಳೆಸಲು ತಮ್ಮ ಜೀವಿತವನ್ನು ಪಣಕ್ಕಿಟ್ಟವರು. ಮುಸ್ಲಿಂ ಮೂಲಭೂತವಾದವೂ ಇಷ್ಟೇ ಅಪಾಯಕಾರಿಯಾಗಿ ಬೆಳೆದು, ಅಸಹಾಯಕತೆಯ ಕಟ್ಟಕಡೆಯ ಗಳಿಗೆಯಲ್ಲಿ ಗಾಂಧಿ ದೇಶ ವಿಭಜನೆಗೆ ಸಮ್ಮತಿಸಲೇಬೇಕಾದುದು ಚಾರಿತ್ರಿಕ ಸತ್ಯ. ಭಾರತದ ವಿಭಜನೆಯಲ್ಲಿ ನಾನೂ ಪಾಲುಗಾರನೆಂದು ಜನ ಹೇಳದಿದ್ದರೆ ಸಾಕು[೨೯] ಎಂದೇ ಸಂಕಟಪಟ್ಟ ಗಾಂಧಿಯ ಕೈಮೀರಿ ಸಂಭವಿಸಿದ ವಿಭಜನೆಯು, ಗಾಂಧೀ ಕನಸಿನ ಸಾಮರಸ್ಯ ಪರಂಪರೆಗೆ ಬಹುದೊಡ್ಡ ಹೊಡೆತವನ್ನು ಕೊಟ್ಟಿತ್ತು. ಮತೀಯವಾದಿ ರಾಷ್ಟ್ರೀಯತೆಯ

ಪ್ರಸರಣಕ್ಕೆ ಈ ವಿಭಜನೆ ನೀರು ಗೊಬ್ಬರ ಒದಗಿಸಿತಲ್ಲದೆ, ಗಾಂಧಿಯನ್ನು ಖಳನಾಯಕನಂತೆ ಬಿಂಬಿಸಲೂ ಸಹಾಯಪ್ರದವಾಗಿಸಿತು. ವಿಭಜನೆಯನ್ನೇ ಬಯಸಿದ್ದ ವಿಭಜಕವಾದಿಗಳು ಹೇಳುತ್ತಲೇ ಬಂದ ತೋರಿಕೆಯ ಅಖಂಡ ಭಾರತವು ಗಾಂಧಿ ಪಾಲಿಗೆ ಬರಿಯ ಭೂಖಂಡವಾಗಿರಲಿಲ್ಲ, ಅದು ಮನುಷ್ಯರ ನಡುವಿನ ಸಾಮರಸ್ಯವನ್ನು ಉಳಿಸಿಕೊಡಬಲ್ಲ ಸೌಹಾರ್ದತೆಯ ಮನುಷ್ಯ ಸಂಬಂಧವಾಗಿತ್ತು. ಈ ಸೌಹಾರ್ದತೆಯನ್ನು ವಿರೋಧಿಸಿಕೊಂಡೇ ಬಂದ ಮತೀಯವಾದ ಗಾಂಧಿಯನ್ನು ಬಲಿ ಪಡೆಯಿತು. ಆದರೆ ಅದಕ್ಕೆ ಗಾಂಧಿವಾದವನ್ನು ಬಲಿಪಡೆಯಲಾಗಲಿಲ್ಲ ಎಂಬುದು ಚಾರಿತ್ರಿಕ ಸತ್ಯ. ಈ ಸಂಕರಶೀಲ ರಾಷ್ಟ್ರೀಯತೆಯ ವಕ್ತಾರನಾದ ಗಾಂಧೀವಾದ ಕನ್ನಡ ಸೃಜನಶೀಲ ಜಗತ್ತನ್ನು ಇಂದಿಗೂ ಪ್ರಭಾವಿಸುತ್ತಲೇ ಬಂದಿದೆ. ಆದರೆ ಗಾಂಧೀಜಿಯವರ ಸಾವನ್ನು ಕುರಿತಾದ ಉದಾರವಾದಿ ಬರವಣಿಗೆಗೂ, ಮತೀಯ ರಾಷ್ಟ್ರೀಯತೆಯ ಅನುಸಂಧಾನದ ಅಭಿವ್ಯಕ್ತಿಗೂ, ಸಂಕರಶೀಲ ರಾಷ್ಟ್ರೀಯಚಿಂತನೆಗೂ ಸ್ಪಷ್ಟ ವ್ಯತ್ಯಾಸವಿದೆ. ಗಾಂಧಿಯನ್ನು ಕುರಿತಾಗಿ ಬರುವ ಅಭಿವ್ಯಕ್ತಿಗಳು ಗಾಂಧಿಚಿಂತನೆಯನ್ನು ಪ್ರತಿನಿಧಿಸುತ್ತವೆ ಎಂದು ಅರ್ಥವಲ್ಲ. ಗಾಂಧಿಯನ್ನು ಕುರಿತಾಗಿ ಆಕಾಶದೆತ್ತರದ ಗೌರವವನ್ನು ತೋರುತ್ತಲೇ, ಆ ಸಾವಿನ ದೂಷಣೆಗೆ ಒಳಗಾದವರ ಪರವಹಿಸಿ ವಕಾಲತ್ತು ನಡೆಸುವ ಗೋವಿಂದ ಪೈ ಅವರ ಕವನವನ್ನೂ, ಸತ್ತು ಸೌಹಾರ್ದತೆಯನ್ನು ಆಗುಗೊಳಿಸಿದ ಗಾಂಧಿಯನ್ನು ಕೊಂದ ಕೊಲೆಗಡುಕರ ಮತೀಯಹಿಂಸಾವಾದವನ್ನು ನಿಂದಿಸುವ

(ಹೊತ್ತಿಸಿದ ಬೆಂಕಿ ಹೊತ್ತಿಸದವನನ್ನೂ ನೆಕ್ಕುವುದು;
ಹೊತ್ತಿಸಿದವರನ್ನೂ ಮುಕ್ಕುವುದು)[೨೦]

ಬೇಂದ್ರೆಯವರ ಕವನಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಲಾಗದು. ಈ ಎರಡೂ ಕವನಗಳು ತಮ್ಮ ತಾತ್ವಿಕತೆಯ ನೆಲೆಯಿಂದ ಎರಡು ಭಿನ್ನ ಧಾರೆಗಳನ್ನು ಪ್ರತಿನಿಧಿಸುತ್ತವೆ ಎಂಬುದಂತೂ ಸ್ಪಷ್ಟ. ಗೋವಿಂದ ಪೈ ಅವರ ಕವನದೊಳಗೆ ಹಿಂದೂ ರಾಷ್ಟ್ರೀಯತೆಯ ಪರವಾದ ಒಲವು ಗಾಂಧಿಸಾವಿನ ನಿರೂಪಣೆಯ ಜೊತೆಗೆ ನುಸುಳಿಬರುತ್ತವೆ. ಆದರೆ ಬೇಂದ್ರೆಯವರು ಗಾಂಧೀಜಿಯವರನ್ನು ಕುರಿತಾಗಿ ಬರೆದ ಕವಿತೆಗಳಲ್ಲಿ ಈ ಮತೀಯವಾದದ ಖಚಿತ ವಿರೋಧದ ಜೊತೆಗೆ , ಸಾಮರಸ್ಯಪರಂಪರೆಯ ಗಾಂಧಿವಾದಿ ರಾಷ್ಟ್ರೀಯತೆ ನಿಚ್ಚಳವಾಗಿ ಮೈತೋರುತ್ತದೆ. ಸತ್ತಗಾಂಧಿಯೊಂದಿಗೆ , ಅಪಾದಿತ ಸಂಘಟನೆಗೂ ಅಳುವ ಇಬ್ಬಂದಿತನದಲ್ಲಿ ಬರುವ ದೆಹಲಿ ಕವನ ಅನುಭವಿಸುವ ಅನಾಥಪ್ರಜ್ಞೆ, ಶ್ರದ್ಧಾಂಜಲಿ ಕವನದ್ದಲ್ಲ. ಶ್ರದ್ಧಾಂಜಲಿಯ ಗಾಂಧಿ ಸತ್ತು ಸಶಕ್ತನಾದ ಗಾಂಧಿ. ಬಹುತ್ವವನ್ನು ಒಪ್ಪುವ ಸಂಕರಿತ ಪ್ರಜ್ಞೆಗೆ ಮಾತ್ರ ಈ ಮತೀಯ ಹಿಂಸೆಯ ವಿರೋಧಿ ಸೃಜನಶೀಲ ನೆಲೆಯ ಶ್ರದ್ಧಾಂಜಲಿಯಂಥ ಕವಿತೆಯನ್ನು ಬರೆಯಲು ಸಾಧ್ಯವೆಂಬುದಂತೂ ಸ್ಪಷ್ಟ.

★ ★ ★

ಟಿಪ್ಪಣಿಗಳು:

೧. ಸಾಹಿತ್ಯ ಕಥನ. ಪುಟ: ೨೫೭

೨. ಶಿವರಾಮ ಕಾರಂತ : ಹಿರಿಯವ್ಯಕ್ತಿ-ದೀವಿಗೆ ಸಂ-೧.ಪುಟ: ೫೫

ದೀವಿಗೆ ಸಂ-೧ ರಲ್ಲಿ ಹಿರಿಯ ವ್ಯಕ್ತಿ ಎಂಬ ಶೀರ್ಷಿಕೆಯಲ್ಲಿ ಶಿವರಾಮ ಕಾರಂತರು ಬರೆದ ಲೇಖನದಿಂದ ಉದ್ಧರಿಸಲಾದುದು

೧೯೪೮ನೇ ಇಸವಿ ಜನವರಿ ತಿಂಗಳ ಕೊನೆಗೆ ನನ್ನನ್ನು ಒಂದು ಶಾಲಾವರ್ಧಂತಿಗೆಂದು ಪೆರ್ಲ್ಲಾಲೆಯವರು ಆಮಂತ್ರಿಸಿದ್ದರು. ನಾನು ಅದರ ಮುಂಚಿನ ದಿವಸವೇ ಹೊರಟು, ಆ ಸಂಜೆ, ಮಂಜೇಶ್ವರದಲ್ಲ ಪೈಗಳವರ ಮನೆಯಲ್ಲಿ ಕಳೆದೆ. ಆ ವೇಳೆಯಲ್ಲಿ ಅನೇಕ ಸಂಗತಿಗಳು ನಮ್ಮ ಮಾತುಕತೆಗೆ ಗುರಿಯಾದುವು. ನಡುವೆ ಭಾರತದ ವಿಭಜನೆಯ ಪ್ರಶ್ನೆಯೂ ಬಂದಿತು. ಅದು ಬರುತ್ತಲೇ ಪೈಗಳವರುಥಾವು ತಾವಾಗಿರಲಿಲ್ಲ! ದೇಶವನ್ನು ಒಡೆದ ಇಬ್ಬಾಗ ಮಾಡಿದ ದ್ರೋಹಕ್ಕಾಗಿ ಗಾಂಧೀಜಿಯವರನ್ನು ತೀರ ನಿಷ್ಠುರವಾಗಿ ಹಳಿದರು. ಅವರ ಮನೋವೇದನೆ , ಮಾತು ಮಾತಿಗೂ ಕಾಣುತ್ತಿತ್ತು !

೩. ದೆಹಲಿ.ದೀವಿಗೆ ಸಂ-೧. ಪುಟ: ೧೩೨

೪. ಅದೆ

೫. ಹಿಂದೂಮಹಾಭಾದ ಕುರಿತಾದ ಮಾತನ್ನು ವ್ಯಂಗ್ಯವಾಗಿ ಪರಿಭಾವಿಸುವ ಅವಕಾಶವಿದೆ. ಆದರೆ ಗಾಂಧಿಯನ್ನು ದೇಶ ವಿಭಜನೆಯ ಹೊಣೆಗಾರನಾಗಿ ದ್ರೋಹದ ಪಟ್ಟದಲ್ಲಿ ಕೂರಿಸಿಕೊಂಡ, ಪಾಪಾಪತುರಾಪಿ ಕಟ್ಟಿಕೊಟ್ಟ ಮತೀಯನೆಲೆಯ ಚರಿತ್ರೆಯ ಧಾಟಿಯಲ್ಲಿಯೇ ಮ್ಲೇಚ್ಚರ ಆಕ್ರಮಣದ ಮಧ್ಯಯುಗೀನ ಭಾರತಕಥನದ ಭಾಗವಾದ ಮೂರ್ತಿಭಂಜನೆಯ ರೂಪಕವನ್ನು ಬಳಸುವ , ಗಾಂಧಿ ಕೊಲೆಯನ್ನು ಮ್ಲೇಚ್ಚನ ಗೋಹತ್ಯೆಗಿಂತಲೂ ಕನಿಷ್ಟವಾದ ಕಪಿಲೆಯ ಕೊಲೆಯಾಗಿ ಸಮೀಕರಿಸುವ ಅಂಶಗಳು ತಿಲಕಮಾದರಿಯ ರಾಷ್ಟ್ರೀಯತೆಯ ಛಾಯೆಯಲ್ಲಿಯೇ ಕಾವ್ಯದ ರಾಜಕೀಯ ನಿಲುವನ್ನು ವಿವರಿಸಿಕೊಳ್ಳುವಂತೆ ಒತ್ತಾಯಿಸುತ್ತವೆ. ಯಾಕೆಂದರೆ ಮೂರ್ತಿಭಂಜನೆ ಮತ್ತು ಗೋಹತ್ಯೆಯ ಎರಡೂ ಸಮೀಕರಣಗಳು ರಾಕ್ಷಸೀಕರಣಕ್ಕೊಳಗಾದ ಸಮುದಾಯವೊಂದನ್ನು ನೆನಪಿಸುತ್ತವೆ ಎಂಬುದನ್ನು ಮರೆಯಬಾರದು. ಈ ರಾಕ್ಷಸೀಕರಣ ಪ್ರಕ್ರಿಯೆ ಮಧ್ಯಯುಗೀನ ಚರಿತ್ರೆಯನ್ನು ವಿವರಿಸಿಕೊಳ್ಳುವ ಮಾದರಿಗಳಲ್ಲೊಂದು ಮತ್ತು ತಿಲಕ ಮಾದರಿಯ ರಾಷ್ಟ್ರೀಯತೆಯ ಬಹುಮುಖ್ಯವಾದ ಲಕ್ಷಣವೂ ಆಗಿದೆ.

೬. ಅದೆ ಪುಟ: ೧೩೩

೭. ಆಧುನಿಕ ಕನ್ನಡ ಕಾವ್ಯದಲ್ಲಿ ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆಯ ಸ್ವರೂಪ ಪುಟ: ೨೯೧

೮. ಶ್ರದ್ಧಾಂಜಲಿ, ಔದುಂಬರಗಾಥೆ ಸಂ-೧. ಪುಟ: ೪೧೯

೯. ಮಹಾತ್ಮ. ಔದುಂಬರಗಾಥೆ ಸಂ-೧. ಪುಟ:೪೪೬

೧೦. ಅದೆ, ಪುಟ:೪೪೪

೧೧. ಅದೆ, ಪುಟ:೪೪೪

೧೨. ಅದೆ, ಪುಟ:೪೪೪

೧೩. ಪೂತಾತ್ಮ-ಹೂತಾತ್ಮ ಹುತಾತ್ಮ-ಮಹಾತ್ಮ. ಔದುಂಬರಗಾಥೆ ಸಂ-೧. ಪುಟ;೪೪೦

೧೪. ಶ್ರದ್ಧಾಂಜಲಿ, ಔದುಂಬರಗಾಥೆ ಸಂ-೧. ಪುಟ: ೪೧೯

೧೫. ಪೂತಾತ್ಮ-ಹೂತಾತ್ಮ ಹುತಾತ್ಮ-ಮಹಾತ್ಮ. ಔದುಂಬರಗಾಥೆ ಸಂ-೧. ಪುಟ:೪೪೦

೧೬. ಅದೆ.ಪುಟ: ೪೩೮

೧೭. ದೆಹಲಿ.ದೀವಿಗೆ ಸಂ-೧. ಪುಟ: ೧೩೨

೧೮. ಮಹಾತ್ಮ. ಔದುಂಬರಗಾಥೆ ಸಂ-೧. ಪುಟ:೪೪೭.

೧೯. ಪಾಪುಗಾಂಧಿ...:ಪುಟ:೧೭೩

೨೦. ಪೂತಾತ್ಮ-ಹೂತಾತ್ಮ ಹುತಾತ್ಮ-ಮಹಾತ್ಮ ಔದುಂಬರಗಾಥೆ ಸಂ-೧ ಪುಟ:೪೪೦

ಪರಾಮರ್ಶನಕೃತಿಗಳು.

೧. ಅರ ರಾಮದೇವ ಶೆಣೈ(ಸಂ). ದೀವಿಗೆ ಸಂ-೧ ಗೋವಿಂದ ಪೈ ಸ್ಮಾರಕ ನಿಧಿ ಭಂಡಾರಕಾರ್ಸ್ ಕಾಲೇಜು. ಕುಂದಾಪುರ, ೧೯೬೫

೨. ಡಾ. ವಾಮನ ಬೇಂದ್ರೆ (ಸಂ) ಅಂಬಿಕಾತನಯದತ್ತ ಸಮಗ್ರಕಾವ್ಯ ಔದುಂಬರಗಾಥೆ ಸಂ-೧. ಬೇಂದ್ರೆ ಸಂಶೋಧನಾ ಸಂಸ್ಥೆ ಹುಬ್ಬಳ್ಳಿ, ೨೦೦೩.

೩. ಡಾ ಡಿ. ಆರ್ ನಾಗರಾಜ. ಸಾಹಿತ್ಯ ಕಥನ. ಅಕ್ಷರ ಪ್ರಕಾಶನ ಹೆಗ್ಗೋಡು. ೨೦೦೭


೪. [illegible] ಬೆಂಗಳೂರು.೨೦೦೬

೫. ಡಾ. ಎಂ ಡಿ ಒಕ್ಕುಂದ,. ಆಧುನಿಕ ಕನ್ನಡ ಕಾವ್ಯದಲ್ಲಿ ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆಯ ಸ್ವರೂಪ(ಅಪ್ರಕಟಿತ)

(ದಿನಾಂಕ ೨೦೧೨ರ ಜನವರಿ ೬ ಮತ್ತು ೭ ರಂದು ಶ್ರೀ.ಧ.ಮಂ ಕಾಲೇಜು ಉಜಿರೆಯಲ್ಲಿ ನಡೆಯುವ ರಾಷ್ಟ್ರಮಟ್ಟದ ವಿಚಾರಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ)

ಹಲವು ಬಣ್ಣಗಳ ಹಗ್ಗ : ಶಿವಪ್ರಕಾಶರ ಕಾವ್ಯ

ಎನ್. ಸುರೇಶ ನಾಗಲಮಡಿಕೆ



೧

ಶಿವಪ್ರಕಾಶರ ಸಮಗ್ರ ಕವಿತೆಗಳನ್ನು ಒಟ್ಟಿಗೆ ಓದಿದಾಗ ನಿರ್ದಿಷ್ಟ ಧಾರೆಯೊಂದನ್ನು ಹುಡುಕಿಕೊಳ್ಳುವುದು ಕಷ್ಟವಾದ ಸಂಗತಿ. ಅವರ ಕಾವ್ಯ ಹಲವು ಬಣ್ಣಗಳಿಂದ ಕೂಡಿರುವ ಹಗ್ಗವೆಂದು ಹೇಳಿದರೂ, ಅಥವಾ ಅವರ ಮಾತಿನಲ್ಲೇ ಹೇಳುವುದಾದರೆ ಹಲವು ಮರಗಳ ಕಾಡು ಎಂದೂ ಹೇಳಬಹುದು. ಕನ್ನಡ ಕಾವ್ಯ ಸಿದ್ಧಾಂತಗಳನ್ನು ಹಠ ಹಿಡಿದು ಸಾಧಿಸುವ ಸಂದರ್ಭದಲ್ಲಿ ತೊಡಗಿಸಿಕೊಂಡಿದ್ದಾಗ ಶಿವಪ್ರಕಾಶರು ತಮ್ಮ ಕವಿತೆಯನ್ನು ಬೇರೊಂದು ದಿಕ್ಕಿನಲ್ಲಿ ಶೋಧಿಸಿದವರು. ಇದುವರೆಗಿನ ಕವಿತೆಗಳಲ್ಲಿ ನಮಗೆ ಕಾಣುವ ಪ್ರಶ್ನೆಗಳೆಂದರೆ, ಶಿವಪ್ರಕಾಶರು ಚರಿತೆಯನ್ನು ಒಡೆದು ಕಟ್ಟಿರುವ ಬಗೆ ಯಾವುದು? ಇವುಗಳ ಮೂಲ ಯಾವುದು? ಈ ಕಾವ್ಯದ ಹಿನ್ನೆಲೆಯಲ್ಲಿ ದೇಸೀಮೂಲ ಎಂದರೆ ಯಾವುದು? ಇವರ ಕಾವ್ಯ ಅನುಭವ ಮೂಲದ್ದೋ? ಅಥವಾ ಜ್ಞಾನ ಮೂಲದ್ದೋ? ಇವುಗಳನ್ನು ಇವರು ಹೇಗೆ ಸಮ್ಮಿಳಿತಗೊಳಿಸುತ್ತಾರೆ. ಲಯಗಳಲ್ಲೇ ಒಂದು ದೇಸೀತನವನ್ನು ಕಾಣಬಹುದೇ? ಕನ್ನಡ ಸಂಸ್ಕೃತಿಯ ಬೇರುಗಳನ್ನು ಜಗತ್ತಿನ ಇತರೆ ಕಿರು ಸಂಸ್ಕೃತಿಗಳ ಜತೆ ಜೋಡಿಸುವ ಕ್ರಮವನ್ನು ಇವರ ಕಾವ್ಯದಲ್ಲಿ ಹೇಗೆ ಗ್ರಹಿಸಬಹುದು? ಹೀಗೆ ಉದ್ದಕ್ಕೂ ಬೇರೆ ಬೇರೆ ರೀತಿಯ ಪ್ರಶ್ನೆಗಳನ್ನು ಬೆಳೆಸುತ್ತಾ ಹೋಗಬಹುದು. ಶಿವಪ್ರಕಾಶರ ಕಾವ್ಯವನ್ನು ಚರಿತ್ರೆ ಮತ್ತು ಪುರಾಣಗಳ ಹಿನ್ನೆಲೆಯಲ್ಲೇ ಕನ್ನಡ ವಿಮರ್ಶೆ ಹೆಚ್ಚು ಚರ್ಚಿಸಿದ್ದು. ನಮ್ಮ ವಿಮರ್ಶಕರಲ್ಲಿ ಒಬ್ಬರಾದ ರಾಜೇಂದ್ರ ಚೆನ್ನಿಯವರು ಕಲ್ಯಾಣದ ಕವಿತೆಗಳನ್ನೇ ಆಧರಿಸಿ ಶಿವಪ್ರಕಾಶರ ಚರಿತ್ರೆಯ ನೆಲಗಟ್ಟನ್ನು ಚರ್ಚಿಸಿದ್ದಾರೆ. ಇದು ಮಿತಿ ಎಂದು ಹೇಳಲಾಗದು. ಆದರೆ ಕಲ್ಯಾಣವನ್ನು ಕೇವಲ ಚರಿತ್ರೆಯನ್ನು ಪ್ರತಿನಿಧಿಸುವ ಕೇಂದ್ರವೆಂದು ಪರಿಭಾವಿಸಿದರೆ ನಮಗೆ

ಆದರಿಂದ ಬೇರೆ ಆಯಾಮಗಳು ದಕ್ಕುವುದು ಕಡಿಮೆ ಎಂದೇ ಹೇಳಬೇಕು. ಇದು ಒಂದು ಅಂಶ ಮತ್ತೊಂದು ತತ್ವಪದಕಾರರನ್ನು ಕುರಿತು ಸೂಫಿ, ಬೌದ್ಧಗುರುಗಳು, ಝೆನ್ ಗುರುಗಳು, ಹೆಬ್ಬಾಳದ ಸಂತ, ಸನ್ಯಾಸಿಗಳನ್ನು ಶಿವಪ್ರಕಾಶರು ಕವಿತೆಯೊಳಗೆ ಯಾವ ಉದ್ದೇಶದಿಂದ ತರುತ್ತಾರೆ ಎಂಬುದು ಕೂಡ ಮುಖ್ಯವಾಗುತ್ತದೆ. ಇವು ಪ್ರಾಯಃ ಏಕಕಾಲದಲ್ಲಿ ಚರಿತ್ರೆ-ಪುರಾಣ-ದೇಸಿ ಸಂಸ್ಕೃತಿಗಳು ಮುಖಾಮುಖಿಗೊಂಡಾಗ ಸ್ಫೋಟಗೊಳ್ಳುತ್ತವೆ.

ಇವರ ಕಾವ್ಯದ ಬೆನ್ನಲ್ಲಿ ನಾವು ಚರಿತ್ರೆಯನ್ನು ಎರಡು ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಅವಕಾಶವಿದೆ. ಸಿದ್ಧ ಚರಿತ್ರೆ ಎಂಬುದೊಂದಿದೆ. ಅದನ್ನು ಪತ್ರದ ಮೂಲಕ ನಾವು ಅಧ್ಯಯನ ಮಾಡುತ್ತೇವೆ. ಇದು ಒಂದು ರೀತಿಯಲ್ಲಿ ಸ್ಥಾವರ. ಜಂಗಮ ಚರಿತ್ರೆ ಅಂದರೆ ಅದು ಮೌಖಿಕ ಚರಿತ್ರೆ ಇದನ್ನು ತೋಂಡಿ ಪತ್ರವೆಂದು ಕರೆಯಬಹುದು. ಸಿದ್ಧಚರಿತ್ರೆಯು ಯಾವಾಗಲೂ ಶ್ಲಾಘಿತ ಸಮುದಾಯಗಳನ್ನು ಮತ್ತು ಅದರ ಲಕ್ಷಣಗಳನ್ನು ಪ್ರತಿನಿಧಿಸಿರುತ್ತವೆ. ಆದರೆ ನಮಗೆ ತೋಂಡಿ ಪತ್ರಗಳನ್ನು ಅಥೆಂಟಿಕ್ ಆದ ಅಧ್ಯಯನದ ಕ್ರಮದ ಒಳಗೆ ಚರ್ಚಿಸಲು ಸಾಧ್ಯವಾಗುತ್ತಿಲ್ಲ. ಶಿವಪ್ರಕಾಶರ ಕವಿತೆಗಳು ಮುಖ್ಯವಾಗುವುದು ಈ ಸಂದರ್ಭದಲ್ಲಿ ಎನ್ನಬಹುದು. ಸಿದ್ಧ ಚರಿತ್ರೆಯ ರೂಪಗಳನ್ನು ಒಡೆದು ತೋಂಡಿ ಚರಿತ್ರೆಯ ಗರ್ಭವನ್ನು ತಡಕಿ ಅಲ್ಲಿನ ಆಯಾಮಗಳಲ್ಲಿ ತಮ್ಮ ಕವಿತೆಗೆ ಜೀವತುಂಬಿಸಿಕೊಳ್ಳುತ್ತಾರೆ. ಇವರು ಕೇವಲ ಕನ್ನಡದ, ಭಾರತದ ಇತರೆ ಭಾಷೆಗಳಲ್ಲಿ ಇರುವ ಮೌಖಿಕಧಾರೆಯನ್ನು ಮಾತ್ರವೇ ಸ್ವೀಕರಿಸದೇ ಜಗತ್ತಿನ ಅನೇಕ ಕಥನತಂತ್ರಧಾರೆಗಳನ್ನು ಸೇರಿಸಿಕೊಳ್ಳುತ್ತಾರೆ. ಇದೇ ಚರ್ಚೆಯನ್ನು ಪುರಾಣಕ್ಕೂ ವಿಸ್ತರಿಸಬಹುದು. ಪುರಾಣವನ್ನು ಇವರ ಕವಿತೆಗಳು ಸಿದ್ಧರೂಪದಲ್ಲಿ ಸ್ವೀಕರಿಸುವುದಿಲ್ಲ. ಇದಲ್ಲದೇ ಇವರ ಕಾವ್ಯ ತೋಂಡಿ ಪರಂಪರೆಯಲ್ಲಿ ಇನ್ನೂ ನಿರ್ಲಕ್ಷಿತವಾಗಿಯೇ ಉಳಿದಿರುವ ಹುಳಕತೆ, ಕತೆ, ಬುಡುಬುಡಿಕೆ, ತತ್ವಪದಗಳ ಧಾರೆಯಲ್ಲಿ ಬರುವ ನಾಯಕರನ್ನು ಘಟನೆಗಳನ್ನು ಗರ್ಭೀಕರಿಸಿಕೊಳ್ಳುತ್ತವೆ. ಮುಖ್ಯವಾಗಿ ಪ್ರಶ್ನೆ ಹುಟ್ಟಿಕೊಳ್ಳುವುದು ಇವುಗಳ ಮೂಲಕ ಶಿವಪ್ರಕಾಶರು ಕನ್ನಡ ಕಾವ್ಯಕ್ಕೆ ಕೊಟ್ಟ ಕಸುವು ಯಾವ ಬಗೆಯದು ಎಂಬುದು. ಕಾಲ ಮತ್ತು ಸಾವು ಇವೆರಡನ್ನು ಬುದ್ಧಲೋಕ ಸ್ವೀಕರಿಸುವ ಬಗೆ ಬೇರೆ ರೀತಿಯದು. ಇವುಗಳ ಮುಖೇನ ಇತರ ಬೌದ್ಧಿಕ ಧಾರೆಗಳ ಜೊತೆ ಇದು ಮುಖಾಮುಖಿಯಾಗುತ್ತದೆ. ಕಾಲ ಮತ್ತು ಮನುಷ್ಯನನ್ನು ಕೇಂದ್ರವಾಗಿಟ್ಟುಕೊಂಡು ನವೋದಯ ಕಾವ್ಯ ಈಗಾಗಲೇ ಗಂಭೀರವಾಗಿ ಯೋಚಿಸಿದೆ.

> ಬಿದ್ದ ಇಟ್ಟಿಗೆಯ ಅಳಿಸಿದ್ದ ಮಂಜು
> ಬಿಳಿಗಗನಕ್ಕೆ ಬಾಯ್ಬಿಟ್ಟ ಗೆದ್ದಲು ಕಂಬ
> ಹದಿನಾಲ್ಕು ಲೋಕಗಳ ಹಣೆಬರಹ
> ನಿರ್ವಾಣದಂಚಲ್ಲಿ ಬುದ್ಧಗುರುವಿಗೂ ಕೂಡ ಕಿಬ್ಬೊಟ್ಟೆ ನೋವು
> ಯಾಕೆ ಬಲಿ ಕೊಡಲಿ ಚಕ್ರದ ತಿರುಗಣಿಗೆ
> ಅಮ್ಮ ಅಪ್ಪ ನಿಮ್ಮ? (ಮಿಲರೇಪ)

ಮಿಲರೇಪನ ಸ್ವಗತ ರೂಪದಲ್ಲೇ ಹುಟ್ಟುವ ಈ ಕವಿತೆ ಸಾವಿನ ಅನಿತ್ಯತೆಯನ್ನು ಒಳಗೊಂಡಂತೆ ಕಾಲ ಸಂಬಂಧಗಳನ್ನು ಒಡೆದು, ಗತದ ನೆನಪನ್ನು ಮಾತ್ರ ಮನುಷ್ಯನಲ್ಲಿ ಉಳಿಸಿಹೋಗುತ್ತದೆ. ಜೈನ ಪರಂಪರೆಯಲ್ಲೂ ಈ ಕ್ರಮವನ್ನು ನೋಡಬಹುದು. ಪುರುದೇವನ ಪ್ರಸಂಗದಲ್ಲಿ ನೀಲಾಂಜನೆಯ ನೃತ್ಯವನ್ನು ನೆನಪಿಸಿಕೊಂಡರೆ ಅಲ್ಲಿ ಸಾವು ಮತ್ತು ಕಾಲ, ನೆನಪುಗಳು ಮುಖಾಮುಖಿಗೊಂಡಿವೆ. ಇದನ್ನು ಮತ್ತಷ್ಟು ಸ್ಪಷ್ಟಪಡಿಸಬೇಕಾದರೆ ಮತ್ತೊಂದು 'ಮಾವಿನ ಕಾಲ' ಕವಿತೆಯಲ್ಲಿ ಬದುಕಿನ ಲಯ ಹಾಗೂ ಕಾಲದ ಲಯಗಳು ಮುಖಾಮುಖಿಯಾಗಿ ಮತ್ತೆ ನಿರಾಸೆ ಹುಟ್ಟಿಸುತ್ತವೆ.

ಬೇಸಿಗೆ ಚಳಿಗಾಲ ಬೇರೆಯಾಗಿರುವುದು
ಕ್ಯಾಲೆಂಡರಿನಲ್ಲೇ
ಗಣಿತ ತರಗತಿಯಲ್ಲೆ
ಒಂದು ಕಿಟಕಿಯಲ್ಲಿ ಬಿಸಿಲು
ಇನ್ನೊಂದರಲ್ಲಿ ಮೋಡ
ಬೆಟ್ಟಗಳ ಕಡೆಯಿಂದ
ನುಗ್ಗಿ ಬರುವ ಮಳೆ
ಒಂದೇ ಕ್ಷಣ ಒಂದು ಕೋಣೆಯ
ಎರಡು ಕಿಟಕಿಗಳಲ್ಲಿ ಮೂರು ಋತುಗಳು (ಮಾವಿನ ಕಾಲ)

ನಿಸರ್ಗದ ಆಲೋಚನೆಯ ಕ್ರಮವನ್ನು ಭಿನ್ನವಾಗಿ ನೋಡುವ ಕ್ರಮವಿದು. ಆಧುನಿಕ ಮನುಷ್ಯನ ಜಂಜಾಟಗಳು ಕಾಲವನ್ನು ಆಸ್ವಾದಿಸುವ ಕ್ಷಣಗಳನ್ನು ಕಿತ್ತುಕೊಂಡಿವೆ.

ಬೇಸಿಗೆ ನೊಣಗಳ ಕಾಲ
ಮಾವಿನ ಹಣ್ಣು ಬೇಕೆನ್ನಿಸಲಿಲ್ಲ (ಮಾವಿನ ಕಾಲ)

ಎರಡು ಮಾತುಗಳು ಇದನ್ನೇ ಹೇಳುತ್ತವೆ. ಈ ಮೂಲಕ ಬದುಕಿನ ಲಯ ಮತ್ತು ಕಾಲದ ಲಯಗಳು ಮನುಷ್ಯನನ್ನು ಕಾಡುವ ಬಗೆಯನ್ನು ಪ್ರಕಟಿಸಲು ಶಿವಪ್ರಕಾಶರು ನವೋದಯದ ಕವಿಗಳಿಗಿಂತ ಬೇರೆಯಾದ ಚಿಂತನಾ ಕ್ರಮವನ್ನು ಬಳಸಿಕೊಂಡಿದ್ದಾರೆ.

೨

ಶಿವಪ್ರಕಾಶರ ಓದು ಮತ್ತು ತಿರುಗಾಟ ಅವರ ಕಾವ್ಯದ ಅನುಭವವನ್ನು ಹಿಗ್ಗಿಸಿದೆ. ವಚನ ಚಳುವಳಿಯ ಓದು, ತತ್ವಪದ, ಸೂಫಿ, ಸಿದ್ಧ, ಬೌದ್ಧ ಲೋಕಗಳ ಓದುಗಳನ್ನು ಶಿವಪ್ರಕಾಶರು ಭಿನ್ನ ಆಯಾಮಗಳಲ್ಲಿ ತೊಡಗಿಸಿಕೊಂಡು ಕಾವ್ಯ ಕಟ್ಟುವ ಕಡೆಯಲ್ಲಿ ಮುಂದಾಗುತ್ತಾರೆ. ಇವುಗಳ ಮೂಲಕ ಅವರ ಕಾವ್ಯ ಪಡೆಸಾದ ಅಲೌಕಿಕ ಅನುಭವವನ್ನು ನೀಡಿದಂತೆ ಕಂಡರೂ ತಕ್ಷಣವೇ ಅದಕ್ಕೊಂದು ಸಮಕಾಲೀನ ಮತ್ತು ಮನುಷ್ಯನ ಸಂಕೇತಗಳ ಸ್ಪರ್ಶವನ್ನು ಕೊಡುತ್ತಾರೆ. ಇದನ್ನು ಅವರ ಸಮಗ್ರ ಕಾವ್ಯದ ಮುನ್ನುಡಿಯಲ್ಲಿ ನವಾಲ್ಟ್ ಹೆಸರಿನಲ್ಲಿ ಶ್ರೀಮತಿ ತಾರಿಣಿಯವರು ಗಂಭೀರವಾಗಿ ಪ್ರಸ್ತಾಪಿಸಿದ್ದಾರೆ. ಇದನ್ನು ಮತ್ತಷ್ಟು ಹಿಗ್ಗಿಸುವುದಾದರೆ, ಕೆಳಹಂತದ ಕಿರುಪರಂಪರೆಗಳಲ್ಲಿ ಕನ್ನಡದ ನೆಲದಿಂದ ಮಾತ್ರವೇ ಸ್ವೀಕರಿಸದೇ ಜಗತ್ತಿನ ಬೇರೆ ಬೇರೆ ಜಾಗಗಳಿಂದ ಕಾವ್ಯದ ಒಳಗಡೆ ತರುತ್ತಾರೆ. ಇಷ್ಟೇ ಆಗಿದ್ದರೆ ಅವರ ಕಾವ್ಯ ಏಕಮುಖವಾಗುವ ಸಂಭವವಿತ್ತು. ಆದರೆ ಜಗತ್ತಿನ ಕಿರುಪರಂಪರೆಗಳ ಕೆಲವು ಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ಕನ್ನಡ ಲೋಕದೊಳಗೆ ಸಮೀಕರಿಸುತ್ತಾರೆ. ಬಾಗ್ದಾದ್ ಪ್ರಾಂತ್ಯದ ತಲ್ಲಣಗಳ ಕುರಿತು ಚಿಂತಿಸುವಾಗ ಜಗತ್ತಿನ ಬಾಬಾಗಳನ್ನು ಅಲ್ಲಿ ತರುತ್ತಾರೆ.


ಬಾಗ್ದಾದ್‌ನ ಹೆಸರಾಂತ ಸಂತ ಶೇಖ್
ಷಹಾಬುದ್ದೀನ್ ಸುಹ್ರವಾರ್ದೀ ಅವರ
ಶಾಗಿರ್ದ್ ಅಬ್ದುಲ್ ಖಾದ್ರಿ ಗಿಲಾನೀ ಅವರ ಸಿಲ್ ಸಿಲಾದ್
ಬೆಂಗಳೂರಿನ ಅಜ್ಞಾತ ಸಂತ ಅಕ್ಬರ್ ಷಾವಲೀ ಅವರ ಶಾಗಿರ್ದ್
ಶೇಖ್ ಅಸದುಲ್ಲಾ ಖಾದ್ರೀ ಅವರ ಮಜಾರ್‌ನ ಪಕ್ಕ

ಕೂತು ಪ್ರಾರ್ಥಿಸುತ್ತಿದ್ದೇನೆ
ಹಣ್ಣುಹಣ್ಣು ಮುದುಕನ ರೂಪದಲ್ಲಿ

ಇದಕ್ಕೆ ವಿವರಣೆಯೇ ಬೇಕಿಲ್ಲ. ಬಾಗ್ದಾದ್ ಸಂತ ಷಹಾಬುದ್ದೀನ್ ಜನತೆ ಕರ್ನಾಟಕದ ಅದರಲ್ಲೂ ಹೆಬ್ಬಾಳದ ಅಜ್ಞಾತ ಶಿವಯೋಗಿ ಅಕಮುಲ್ಲಾ ಬಾದಿವಲೀಯವರನ್ನು ಜೋಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಮುಸ್ಲಿಂ ಧರ್ಮದ ಮೂಲಭೂತವಾದಿತನವನ್ನು ಧಿಕ್ಕರಿಸಿ ತಮ್ಮ ಹಾದಿಗೆ ತಾವು ಜಗತ್ತಿನ ಶಾಂತಿಯ ಕನಸು ಕಾಣುತ್ತಿದ್ದ ಸೂಫಿ ಮತ್ತು ಬಾಬಾಗಳ ಚಿಂತನಾ ಕ್ರಮವನ್ನು ಇವರ ಕಾವ್ಯ ಮುನ್ನಲೆಗೆ ತರುತ್ತದೆ.

ಬಂಡೆಗಾನಿಸಿದ ಏಕತಾರಿಗೆ
ಆ ಬೆರಳ ಸ್ಪರ್ಶವೇ ಸಾಕು
ಗಾಂಜ ಹೊಗೆ ತಿಂದು ಹಾಕಿದ್ದ ಕೊರಳಿಗೆ
ಎದೆತುಂಬಿ ಬಂದ ಭಾವಸ್ಪರ್ಶವೇ ಸಾಕು
ಆ ನಾದ ನವಿರು
ಲಯ ಹೃದಯ ಉಸಿರು
ನಾರೇಯಣ ವಾಣಿ
ಬ್ರಹ್ಮಯ್ಯಗಳ ತತ್ವ
ಸರ್ಪಸದೃಶಮನದ ಪುಂಗಿಯೂದುತ ನಿಲಿಸಿ
ಸ್ವರ್ಗ ನರ್ತಕಿ ಹಾಗೆ ಕುಣಿಸುವ ಪ್ರವೀಣತ್ವ (ಹೆಬ್ಬಾಳು)

ಅಕಮುಲ್ಲಾ ಬಾದಿಯವರ ಬಗ್ಗೆ ಶಿವಪ್ರಕಾಶರ 'ಬತ್ತೀಸರಾಗ' ಎಂಬ ಅನುಭಾವದ ಕವನದಲ್ಲೂ ಪ್ರಸ್ತಾಪವಿದೆ. ಹೆಬ್ಬಾಳು ಇದು ಸಮಾಸ ಪದ. ಇದನ್ನು ಬಿಡಿಸಿದರೆ ಹಿರಿದಾದ ಬಾಳು ಆಗುತ್ತದೆ. ಬಾದಿಯವರದೂ ಕೂಡ ಹಿರಿದಾದ ಬದುಕಾಗಿತ್ತು. ಇವರ ಜತೆಗೆ ಬರುವ ಕೈವಾರ ನಾರಾಯಣಪ್ಪ, ಬಸ್ಸಯ್ಯ ಇವರೆಲ್ಲ (ಬಸ್ಸಯ್ಯ ಅಂಥವ ಪ್ರಸಿದ್ಧ ಅವಧೂತ-ಕಾಲಜ್ಞಾನಿ). ಮುಖ್ಯವಾಹಿನಿಯಿಂದ ದೂರವಿದ್ದು ತಮ್ಮ ತತ್ವಗಳ ಮುಖೇನ ಕೆಳಹಂತದ ಬದುಕುಗಳಿಗೆ ದಿಕ್ಕು ತೋರಿಸಿದವರು. ಇಂಥವರನ್ನು ಶಿವಪ್ರಕಾಶರ ಕಾವ್ಯ ಅನ್ವೇಷಣೆ ಮಾಡುತ್ತಾ ಹೋಗುತ್ತದೆ. ಹಾಗೆ ಬಂದರೆ ಸಮಗಾರ ಭೀಮವ್ವ ಕನ್ನಡ ಕಾವ್ಯಲೋಕದಲ್ಲಿ ಒಂದು ಹೊಸಧಾರೆ ಎನ್ನಬಹುದು. ತಮ್ಮ ಅನುಭವಲೋಕದೊಳಗೆ ಸಿದ್ದಯ್ಯನವರು ಬಕಾಲಿ ಮುನಿಯನ್ನು, ಶಿವಲೀರ್ಥನ್ ಅವರು ಗಂಡಗಯ್ಯನನ್ನು ಹುಡುಕಿಕೊಂಡ ಹಾಗೆ ಶಿವಪ್ರಕಾಶರು ಭೀಮವ್ವನನ್ನು ಶೋಧಿಸಿದ್ದಾರೆ. ಭೀಮವ್ವ ಕೇವಲ ನಾಗಲಿಂಗನಿಗೆ ಮಾತ್ರ ತಾಯಿಯಲ್ಲ, ಬದಲಾಗಿ ಈ ಜಗತ್ತಿನ ಅಜ್ಞಾತ ಪರಂಪರೆಗಳಿಗೆ ಜೀವಪಕ್ಷಿಯಾಗಿ ಗೋಚರಿಸುತ್ತಾಳೆ. ಅಷ್ಟೇ ಯಾವುದೂ ಕುಲಪಕ್ಷಿಯನ್ನು ಮೀರಿ ಭೂತಾಯಿಗೆ ಪ್ರತೀಕವಾಗುತ್ತಾಳೆ. ರಿಕ್ಷಾನ ಕೊನೆಯ ಆ ಸಮಾರಂಭ ನಾಗಾರ್ಜುನ ಶಂಸ್-ಇ-ತಬ್ರೀಜ್ ಮುಂತಾದ ಕವಿತೆಗಳಲ್ಲಿ ಇದನ್ನು ಗಮನಿಸಬಹುದು.



೩

ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ಶಿವಪ್ರಕಾಶ ಅವರು ಮುಖ್ಯವಾಗುವುದು ಅದುವರೆಗೆ ನಾಪತ್ತೆಯಾಗಿದ್ದ ಅಧೋಲೋಕದ ಜ್ಞಾನಶಾಖೆಗಳಿಗೆ ಅಸ್ಮಿತೆಯನ್ನು ನೀಡುವುದರ ಮೂಲಕ. ದೇಸಿ ಎಂಬ ಪರಿಕಲ್ಪನೆಯನ್ನು ಇವರ ಕಾವ್ಯ ಆವಾಹಿಸಿಕೊಂಡಿರುವ ಬಗೆಯೇ ಬೇರೆಯಾದುದು. ಸೂಕ್ಷ್ಮವಾಗಿ ಗಮನಿಸಿದರೆ ಕೆಳಸ್ತರದ ಜ್ಞಾನಶಾಖೆಗಳೆಲ್ಲಾ ಇವರಿಗೆ ದೇಸಿ ಧಾರೆಗಳೇ ಆಗಿ ಕಂಡಿವೆ. ಅವು ಕೇವಲ ಕನ್ನಡ ಸಂಸ್ಕೃತಿಗೆ ಮಾತ್ರ ಒಳಪಡದೆ ಬೌದ್ಧ, ನಾಥ, ಸಿದ್ಧ ಅಲೆಮಾರಿ ಶೂದ್ರನಾಯಕರ ತನಕ ಎಲ್ಲರೂ ದೇಸಿ ಗರ್ಭದಲ್ಲಿ ಸೇರಿಕೊಂಡು ಬಿಡುತ್ತಾರೆ. ವಚನ ಚಳುವಳಿಯು ಚರಿತ್ರೆಯೊಳಗೆ ಪಡೆದುಕೊಂಡಿರುವ ಜಾಗಕ್ಕೂ ಇವರ ಕಾವ್ಯದೊಳಗೆ ದಕ್ಕಿಸಿಕೊಂಡಿರುವ ಜಾಗಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಎಪ್ಪತ್ತರ ದಶಕದ ನಂತರ ಕನ್ನಡ ಕಾವ್ಯ, ವಚನ ಚಳುವಳಿಯನ್ನು ಮತ್ತು ಅದರ ಅನುಭಾವದ ಬೆಡಗನ್ನು ಒಳಗು ಮಾಡಿಕೊಂಡಿರುವ ಧಾರೆಯು ಬೇರೊಂದು ಅಧ್ಯಯನ ಚರ್ಚೆಯನ್ನೇ ಬಯಸುತ್ತದೆ. ಶಿವಪ್ರಕಾಶರ ಕಲ್ಯಾಣದ ಯಾವುದೇ ಕವಿತೆಯನ್ನು ತೆಗೆದುಕೊಂಡರೂ ನಮಗೆ ಕಾಣುವುದು ಕೆಳವರ್ಗದ ವಚನಕಾರರೇ ಹೊರತು ಸ್ಥಾಪಿತ ವಚನಕಾರರಲ್ಲ. ಇವರನ್ನು ಕನ್ನಡ ಕಾವ್ಯದೊಳಗೆ ಹೇಗೆ ಸಮಕಾಲೀನಗೊಳಿಸುತ್ತಾರೆ? ಅವರಿಗೆ ಅಸ್ಮಿತೆಯನು ನೀಡುವ ಬಗೆ ಹೆಚ್ಚು ಚರ್ಚೆಗೆ ಅವಕಾಶ ನೀಡುತ್ತದೆ. ಸಿಂಗಿರಾಜ ಸಂಪಾದನೆ ಕವಿತೆ ಕೇವಲ ಕಲ್ಯಾಣದ ವಿವರಗಳನ್ನು ಮಾತ್ರವೇ ನೆನಪಿಸುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಇದು ಸಮಕಾಲೀನ ರಾಜಕಾರಣದ ವಿರುದ್ಧ ಬಂಡೆದ್ದ ಕವಿತೆಯಾಗಿಯೇ ಕಾಣುತ್ತದೆ. ಬಿಜ್ಜಳ ಪ್ರಭುತ್ವವನ್ನು ಸರ್ವಾಧಿಕಾರಿ ನೆಲೆಯಲ್ಲಿ ಸ್ಥಾಪಿಸಿದವನು. ಕಲ್ಯಾಣದಲ್ಲಿ ಸಿಂಗಿರಾಜನಂತಹವರು ಕೆಳಸ್ತರದ ಮೂಲಕವೇ ಪ್ರಭುತ್ವಕ್ಕೆ ಹೊಸ ವ್ಯಾಖ್ಯಾನ ನೀಡಿದವರು. ಈ ಕವಿತೆ ಸುಮಾರು ಹದಿನೈದು ಸುರುಳಿಗಳಾಗಿ ಬಿಚ್ಚಿಕೊಂಡು ಇಡೀ ಕಲ್ಯಾಣದ ಪ್ರಭುತ್ವದ ಸಡಿಲತೆಯನ್ನು ದುರ್ಬಲತೆಗಳನ್ನು ಮುಂದಿಡುತ್ತದೆ. ಇಂಥ ಸಂದರ್ಭಗಳಲ್ಲಿ ಚರಿತ್ರೆ-ಪ್ರಭುತ್ವ-ಸಮಕಾಲೀನ ವಿಚಾರಗಳ ಮೂಲಕ ಗಮನ ಸೆಳೆಯುತ್ತದೆ. ಮೊದಲು ಪ್ರಾರಂಭಗೊಳ್ಳುವ ಸುರುಳಿಗಳಲ್ಲಿ ಸ್ವಗತ ರೂಪದಲ್ಲಿ ಆವೇಶಗೊಂಡ ಸಿಂಗಿರಾಜ ಮಾತನಾಡುತ್ತಾನೆ. ನಂತರದಲ್ಲಿ ಕವಿ ನಮ್ಮ ನಡುವೆ ದನಿ ಎತ್ತುತ್ತಾರೆ. ಸಿಂಗಿರಾಜ ಮಾತನಾಡುವಾಗ ಕಲ್ಯಾಣದ ಪ್ರಭುತ್ವ-ಕವಿ ಅಭಿವ್ಯಕ್ತಿಸುವಾಗ ನಮ್ಮ ಕಾಲದ ಪ್ರಭುತ್ವಗಳು ಏಕೀಭವಿಸುತ್ತವೆ.

ಬಿಜ್ಜಳನ ಉಗ್ರಾಣದ ಜೋಳರಾಶಿಯ
ರೊಟ್ಟಿಯಲ್ಲವೆ ಅಣ್ಣ ನಿಮ್ಮ ರಕ್ತದ ಕಾವು?
ಬಿಜ್ಜಳನ ವಿಕ್ರಮನ ತಲೆ ಮೇಲೆ ಕೈಯಿಟ್ಟು
ಸತ್ತ ಸಂಸ್ಕೃತದಲ್ಲಿ ಹರಸುವರ
ವೀರ್ಯವಲ್ಲವೆ ನಿಮ್ಮ ಜೀವಧಾತು?
ನೀರ ಮಹಾಮನೆಯಲ್ಲಿ ದಾಸೋಹ ಗಂಟೆ ಬಾರಿಸಿ
ಕೂತು ಉಣ್ಣುವರಿಗೆಲ್ಲ ಮೃಷ್ಟಾನ್ನ
ಚೆನ್ನ ಬಸವ ನೀಡುತ ಬಂದ. ಎಷ್ಟು ದಿನ?
ಇಬ್ಬರು ಹೆಂಡಿರ ಗಂಡ
ಒಬ್ಬಾಕೆ ಹರಳಯ್ಯ ಮಧುವರಸರ ಸ್ನೇಹ ವಲ್ಲರಿ
ಇನ್ನೊಬ್ಬಾಕೆ ಬಿಜ್ಜಳನ ಮನದ ವೇಶ್ಯಾವಾಟಿಕೆಗಳಲ್ಲಿ
ಕೊಳೆತ ಯೋನಿಯ ರಾಜ್ಯಲಕ್ಷ್ಮಿ

(ಸಿಂಗಿರಾಜ ಸಂಪಾದನೆ)

ಕಲ್ಯಾಣದ ವಿಮರ್ಶೆ ಮತ್ತು ಪ್ರಭುತ್ವದ ದುರ್ಬಲತೆ ಏಕವಾಗಿ ಇವರಲ್ಲಿ ಮೈಗೂಡಿಸಿಕೊಂಡಿವೆ. ಕೊಳೆತ ಯೋನಿಯ ರಾಜ್ಯಲಕ್ಷ್ಮಿ ಎನ್ನುವಾಗಲೂ ಈ ಮಾತು ಸ್ಪಷ್ಟವಾಗುತ್ತದೆ. ಇದೇ ಕವಿತೆಯಲ್ಲಿ ಕವಿ ಅಭಿವ್ಯಕ್ತಿಸುವಾಗ

ನಾಳೆ ಇದೇ ಹೊತ್ತು
ಇಲ್ಲೆಲ್ಲಾ ಬೆರತು ಬಿರಿಯುವ
ತಿರುಗಿ ಬೆರೆಯುವ
ಸಿಂಗಿರಾಜರು ಎಲ್ಲಿ ಹೋಗುತ್ತಾರೆ? (ಸಿಂಗಿರಾಜ ಸಂಪಾದನೆ)

ಎನ್ನುವಾಗ 'ನಾಳೆ' ಎಂಬುದು ಕಾಲವನ್ನು ಮೀರಿ ನಿಲ್ಲುತ್ತದೆ. ಚರಿತ್ರೆಯನ್ನು ಜಂಗಮಗೊಳಿಸುವ ಪರಿ ಇದು. ಆಗಿನ ಈ ಸಿಂಗಿರಾಜರು ಈಗಿನ ಸಿಂಗಿರಾಜರು ಎಂಬುದನ್ನು ವರ್ಗೀಕರಿಸಿ ಹೇಳಬೇಕಾದ ಅಗತ್ಯವಿಲ್ಲವೇನೋ? ಮೇಲಿನ ಪದ್ಯದ ಕೊನೆಯ ನಾಲ್ಕು ಕಾಲದಕೂಸುಗಳಾದ ಭೂತ, ವರ್ತಮಾನ, ಭವಿಷತ್ತುಗಳನ್ನು ಪ್ರಶ್ನೆ ಮಾಡುತ್ತದೆ ಎನಿಸುತ್ತದೆ. ಆ ಮೂಲಕ ತಾತ್ವಿಕ ಪ್ರಶ್ನೆಯನ್ನು ಕೇಳಿಸಿಕೊಳ್ಳುತ್ತದೆ. ಸಿಂಗಿರಾಜನ ಆವೇಶ, ಸಂಕಟ ಒಂದು ಬಗೆಯದಾದರೆ ಅಗಮೆಮ್ನಾನ್ ನಾಟಕದ ಕಾವಲುಗಾರನ ಸ್ವಗತ ಮತ್ತೊಂದು ಬಗೆಯದು. ಈ ಕಾವಲುಗಾರನಿಗೆ ಹತ್ತು ವರ್ಷ ನಿದ್ದೆ ಇಲ್ಲದೆ ಸತ್ತಿದ್ದಾನೆ. ಎಲ್ಲಾ ಮುಗಿಯಿತಲ್ಲಾ ಎನ್ನುವಾಗ ದೊಡ್ಡವರ ಅಂತರಂಗದ ಬಿರುಕುಗಳು ಮತ್ತೆ ಮತ್ತೆ ಬಿಸುಗುಡುತ್ತವೆ

ತಂದೆ ಮಗಳನ್ನೇ ಕೊಂದ
ದ್ವೇಷ ತೀರಿಲ್ಲ ಇನ್ನಾ
ಮಡದಿ ಕೊಲ್ಲುವ ಗಂಡ
ದ್ವೇಷ ತೀರಿಲ್ಲ ಇನ್ನಾ
ಮಗ ತಾಯ ಕೊಲ್ಲುವ
ದ್ವೇಷ ತೀರಿಲ್ಲ ಇನ್ನಾ
....
ರಾತ್ರಿ ಕಳೆದಿಲ್ಲ ಇನ್ನಾ
ಯುದ್ಧ ಮುಗಿದಿಲ್ಲ ಇನ್ನಾ (ಅಗಮೆಮ್ನಾನ್ ನಾಟಕದ ಕಾವಲುಗಾರನ ಸ್ವಗತ)

ಒಬ್ಬ ಕಾವಲುಗಾರನ ಸ್ವಗತದ ಮೂಲಕವೇ ಟ್ರಾಯ್ ಮತ್ತು ಗ್ರೀಕ್ ಪ್ರಭುತ್ವಗಳ ಅಂತರಂಗ ಪರೀಕ್ಷಿಸುವುದು. ಮತ್ತು ಸಿಂಗಿರಾಜನ ಮೂಲಕ ಕಲ್ಯಾಣವನ್ನು ವೀಕ್ಷಿಸುವುದು ಹೆಚ್ಚು ಅಥೆಂಟಿಕ್ ಎಂದು ಭಾವಿಸಬಹುದು. ಪ್ರಾ.ಯು. ಸಬಾಲ್ಟ್ರನ್ ಗೆ ಹೆಚ್ಚು ಅರ್ಥ ಬರುವುದು ಇಂಥವರಿಂದಲೇ. "ಶಿವಪ್ರಕಾಶರ ಕಾವ್ಯ ಸಮಕಾಲೀನ ಸಂದರ್ಭದಲ್ಲಿ ಮಹತ್ವಪೂರ್ಣನಿಸಲು ಕಾರಣವಿದೆ. ಅತ್ಯಂತ ಸೂಕ್ಷ್ಮ ರಾಜಕೀಯ ದನಿಗಳನ್ನು ಕೇಳಿಸುತ್ತ ಅದಕ್ಕೆ ಪರಿಹಾರಗಳೇನಿರಬಹುದೆಂದು ಚಿಂತಿಸುವ ಕಾವ್ಯ ಅವರದು" ಎಂಬ ತಾರಿಣಿಯವರ ಮಾತುಗಳು ಅರ್ಥಪೂರ್ಣವಾಗಿದೆ. ಇಂತಹ ಒಂದು ಪರಿಹಾರ ಕಲ್ಯಾಣವು ತತ್ತರಿಸಿದರೂ ಕೊನೆಯಲ್ಲಿ

ಈ ಮೋಡ ಸಿಂಹದ ಬಾಯ ಕಲ್ಯಾಣದಲ್ಲೂ
ಗುಡುಗು ನಡುಗಿಸಿದ ಗ್ರಾಮ ಗ್ರಾಮಗಳಲ್ಲೂ
ನಾನು ಕಾಣುವ ಕಲ್ಪನೆಯ ಮಿಂಚು
ಮಾದ ಮೇದರ ಕುಂಬಾರ ರೈತರ
ಅಂತರಾಳಗಳಲ್ಲಿ ಸಂಚರಿಸಿದೆ (ಕಲ್ಯಾಣ)

ಎಂಬ ಮಾತುಗಳಲ್ಲಿ ಗಮನಿಸಬಹುದು. ಕಲ್ಯಾಣದ ಕೊನೆಯ ದಿನಗಳು ಈ ಕವಿತೆಯಲ್ಲೂ ಮಾರ್ಮಿಕವಾಗಿ ಅನುರಣಿಸಿದೆ.

೪

ತಾತ್ವಿಕತೆಯ ಸಂಕಂಥನ, ವಿಶ್ವಾತ್ಮಕತೆಯ ಜಾಡು ಇತ್ಯಾದಿ

ಕಾವ್ಯದಲ್ಲಿ ತಾತ್ವಿಕತೆಯನ್ನು ಒಳಗು ಮಾಡಿಕೊಳ್ಳುವುದು ಕೂಡ ಒಂದು ಸವಾಲು. ಹಾಗೆಯೇ ಅದರ ಸಂವಹನಶೀಲತೆಯೂ ಕೂಡ ಬಹಳ ಮುಖ್ಯವಾದುದು. ತಾತ್ವಿಕತೆ ಮತ್ತು ಸ್ವಗತ, ಕಥೆ ತಂದ ಮೀಮಾಂಸೆ ಮತ್ತು ಅನುಭವದೊಳಗೆ ಕಾವ್ಯ ಉಸಿರಾಡುತ್ತದೆ ಎನಿಸುತ್ತದೆ. ಕವಿ ಇವುಗಳನ್ನು ಹೇಗೆ ನಿಭಾಯಿಸುತ್ತಾನೆ ಎಂಬುದೇ ಅತನ ಗಟ್ಟಿತನವನ್ನು ತೋರಿಸುತ್ತದೆ. ತಾತ್ವಿಕತೆ ಅತಿಯಾಗಿ ಪಡುವಾದರೆ ಸಂವಹನ ಸಾಧ್ಯವಾಗುವುದಿಲ್ಲ. ಅನುಭವ ತೀರ ಸಡಿಲಗೊಂಡರೆ ತಾತ್ವಿಕತೆಗೆ ಗಟ್ಟಿರೂಪ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವೆರಡರ ಮಧ್ಯೆ ಬದುಕನ್ನು ಕಾವ್ಯ ಅರಿಕೊಳ್ಳಬೇಕು. ಶಿವಪ್ರಕಾಶರು ವಿಶ್ವದ ಕಲ್ಪನಾ ಪರಂಪರೆಗಳ ಘಟನೆಗಳನ್ನು ಮತ್ತು ನಾಯಕರನ್ನು ಎತ್ತಿಕೊಂಡು ತಮ್ಮ ಕಾವ್ಯ ತಾತ್ವಿಕತೆಯನ್ನು ರೂಪಿಸಿಕೊಳ್ಳುತ್ತಾರೆ. ಹಾಗೆ ರೂಪಿಸಿಕೊಳ್ಳುವಾಗ ಬದುಕನ್ನು ಕೆಲವೊಮ್ಮೆ ವೇಗ, ಇನ್ನೂ ಕೆಲವು ಸಲ ತಡವಾಗಿ ಅವಲೋಕಿಸಿಕೊಳ್ಳುತ್ತಾರೆ. ಇದರ ಮೂಲಕವೇ ಅವರ ಕಾವ್ಯ ಮೀಮಾಂಸೆಯನ್ನು ಸಮಾನತೆಯ ಸಾಮಾಜಿಕ ಚೌಕಟ್ಟನ್ನು ರೂಪಿಸಿಬಿಡುತ್ತಾರೆ. ಇಂಥ ಸಂದರ್ಭದಲ್ಲಿಯೇ ಅವರು ಭಿನ್ನವಾಗುವುದು. ಇವರ ಕಾವ್ಯ ತತ್ವಜ್ಞಾನವನ್ನು ಬೇರೊಂದು ಆಯಾಮದಲ್ಲಿ ಸ್ವೀಕರಿಸಿದೆ ಎನಿಸುತ್ತದೆ. ವೇದ, ಉಪನಿಷತ್ತು ಮುಂತಾದ ಆರ್ಯ ಪರಂಪರೆಗಳಿಂದ ಮಾತ್ರವೇ ತತ್ವಜ್ಞಾನ ಹುಟ್ಟಿದೆ ಎಂಬುದು ಕೂಡ ಈಗ ಬದಲಾಗಿದೆ. ಶಿವ ಪರಂಪರೆಯನ್ನು ಅವರಲ್ಲ, ಕಾಪಾಲಿಕ, ಕಾಳಾಮುಖ, ನಾಥ, ಭೈರವ, ಇವುಗಳ ಮೂಲಕ ತಮ್ಮ ಕಾವ್ಯದಲ್ಲಿ ಬೇರೊಂದು ಮಟ್ಟದ ತಾತ್ವಿಕತೆಯನ್ನು ಬಿಂಬಿಸುತ್ತಾರೆ. ಇವುಗಳ ಮೂಲಕವೇ ಹರಿದು ಬಂದ ಅಲೆಮಾರಿ, ಅವಧೂತ, ಬಯಲುಬಡಿಕೆ ಇವುಗಳಲ್ಲಿಯೂ ಒಂದು ತತ್ವಜ್ಞಾನ ಅಡಗಿದೆ ಎಂಬುದು ಇವರ ಕಾವ್ಯ ಹೇಳುತ್ತದೆ. ಮೂಲಭೂತ ಆತ್ಮವನ್ನು ದೂರ ಇಟ್ಟು ತನ್ನದೇ ಪರಂಪರೆಯನ್ನು ರೂಪಿಸಿಕೊಂಡ ಸೂಫಿ ಮತ್ತು ಬೌದ್ಧ ಚಿಂತನೆಗಳು, ಜೈನ ಕಿರು ಕಥಾನಕಗಳು, ಜನಪದ ಕಥನಗಳು ಇವರ ಕಾವ್ಯವನ್ನು ವಿಶ್ವಾತ್ಮಕವಾಗಿ ಮುನ್ನಡೆಸಿವೆ ಎನ್ನಬಹುದು. ಇವುಗಳ ನಡುವೆ ಪ್ರೀತಿ ಮತ್ತು ವೈರಾಗ್ಯ/ ಸನ್ಯಾಸತ್ವ ಎರಡೂ ಮುಖಾಮುಖಿಗೊಂಡಾಗ ಯಾವುದು ಗೆಲ್ಲುವುದು ಎಂಬುದಕ್ಕೆ ಹಾಸವತ್ತೆ ಕವಿತೆಯನ್ನು ನೋಡಬಹುದು. ಇಲ್ಲಿನ ಲಯ ಮತ್ತು ಭಾಷೆ ಎರಡನ್ನು ಬಹಳ ಸೂಕ್ಷ್ಮದಿಂದ ಗಮನಿಸಿದರೆ ಬೌದ್ಧ ಪರಿಭಾಷೆಯೊಂದು ಇಲ್ಲಿ ಮೈತಾಳಿದೆ. ಅದು ಹೀಗೆ ಸಾಗುತ್ತದೆ :

ನಡುಹಗಲ ಹೊನ್ನೀಲಿ ಮೊಟ್ಟೆಯೊಡೆದು
ಚಿಮ್ಮಿದ ಕಪ್ಪು ಪಾರಿವಾಳದ ಹಾಗೆ ನಿನ್ನ
ಕೈ ಕಪ್ಪರ
ಹಸಿರು ಬೆರಸಿ ಕೂಗುವ ಕಾಗೆ
ಕೊರಳೊಡನೆ ಸರ ಬೆರಸಿ
'ಭಿಕ್ಷೆ' ಅಂದೆ
ಅನ್ನವನೊಲ್ಲೆ, ಹೊನ್ನಿನೊಡನೆ ನನ್ನನೊಲ್ಲೆ
ಪ್ರಾಣವನ್ನೇ ಕರಿಯ ಕಪ್ಪರದಲ್ಲಿ ಕೊಂಡು ಹೋದೆ

....

ಒಂದು ಸಲ ಉಪಗುಪ್ತ ಒಂದೇ ಒಂದು ಸಲ
ಸ್ವಂತ ಬಾಣಗಳನ್ನೆಸೆಯುವೆ ನಿನ್ನ ಕಡೆ
ಹೂವಿನಂಗಡಿಗಳಿಗೆ ಬೆಂಕಿ ತಗುಲಿದ ಹಾಗೆ
ತಾರಾಡುತ್ತಿರುವ ನಿನ್ನ ಕಡೆಗೆ (ವಾಸವದತ್ತೆ)

ವಾಸವದತ್ತೆ ಪ್ರೇಮ ಅರಸಿಕೊಂಡು ಹೋಗುತ್ತಾಳೆ. ಉಪಗುಪ್ತ ಆಕೆಯನ್ನು ತಿರಸ್ಕರಿಸಿದರೂ ವಾಸವದತ್ತೆ ಅವನ ನೆನಪು ಮತ್ತು ಕನಸುಗಳಲ್ಲೇ ಇರುತ್ತಾಳೆ. ಪ್ರೀತಿಗೆ ಆಶ್ರಯ ಇವೆರಡೇ ಅಲ್ಲವೆ: ಇದು ಒಂದು ಬಗೆಯ ಪ್ರೇಮವಾದರೆ ಶಂಸ್-ಇ-ತಬ್ರೀಜ್, ರೂಮಿಯದು ಮತ್ತೊಂದು ಆಯಾಮದ ಪ್ರೇಮ.

ಸೂಫಿ ಪ್ರೇಮಕಾವ್ಯವೇ ವಿಚಿತ್ರ ಬಗೆಯದು. ನನಗೆ ಈ ಕವಿತೆಯೂ ರೂಮಿ ಮತ್ತು ತಬ್ರೀಜ್‌ರನ್ನು ಒಳಗೊಂಡು ಒಂದು ಸೂಫಿ ಭಗ್ನ ಪ್ರೇಮಕವಿತೆಯಾಗಿ ಕಂಡಿದೆ. ಪ್ರೇಮವೇ ಇವುಗಳ ತತ್ವ. ಗುಲಾಬಿ ಹೂವು ಮುಸ್ಲಿಂರಿಗೆ ಪ್ರಿಯವಾದುದು. ಆದರೆ ಅದಕ್ಕೆ ಒದಗಿದ್ದು,

ಗುಲಾಬಿವನದ ಕಸಾಯಿಖಾನೆಗಾಳಗಿವೆ ಇಂದು
ಮಧುಶಾಲೆಯಲ್ಲಿ ಮತ್ತೊಬ್ಬ ಪ್ರೇಮಿ ವಧೆಯಾಗಿದ್ದಾನೆ

ಎಂದು ತಬ್ರೀಜ್ ಕೊಲೆಯ ಹಿನ್ನಲೆಯಿಂದ ಆರಂಭವಾಗುವ ಈ ಕವಿತೆ ರೂಮಿಯ ಸ್ವಗತಕ್ಕೆ ತಿರುಗಿ

ರೂಮಿ ಹುಚ್ಚ ಅನ್ನುವ ಜಗವೇ
ನಿನ್ನ ಪಾಲಿನ ನರಕ ಇನ್ನೂ ಉಳಿದಿದೆ
ನನ್ನ ಪಾಲಿನ ಸ್ವರ್ಗ ಕಳೆದು ಹೋಗಿದೆ
ಆ ಸ್ವರ್ಗ ಇತ್ತು ಶಂಸನ ಕಣ್ಣಲ್ಲಿ
ಅವನೇ ಗಂಡ ನನ್ನ ಪಾಲಿಗೆ
ಅವನೇ ಕೂಸಾಗಿ ತುಟಿಯಿಕ್ಕಿದ ನನ್ನದೆ ಹಾಲಿಗೆ
ಅವನೇ ನನ್ನ ಕನಸಿನ ನಾಲಗೆ (ಶಂಸ್-ಇ-ತಬ್ರೀಜ್)

ನಮ್ಮ ಭಕ್ತಿ ಸಾಹಿತ್ಯದಲ್ಲಿ ಅಕ್ಕನದು ಈ ಬಗೆಯ ಪ್ರೇಮವಾದರೂ ಅಲ್ಲಿ ಅಕ್ಕ ಹೆಣ್ಣು ಎಂಬುವ ಕಾರಣಕ್ಕೆ ಚರ್ಚೆ ಬೇರೊಂದು ಕಡೆಗೆ ತಿರುಗಿದೆ. ಇಲ್ಲಿ ಹಾಗಲ್ಲ ಇಬ್ಬರೂ ಗಂಡಸರೇ ಮುಸ್ಲಿಂರಿಗೆ ಉತ್ಕಟ ಬಯಕೆ ಇರುವುದು ಸ್ವರ್ಗ ಆದರೆ ತಬ್ರೀಜ್ ತನ್ನ ಗುರು ಪ್ರಿಯತಮ-ರೂಮಿಯಲ್ಲೇ ಇದನ್ನು ಕಂಡಿದ್ದಾನೆ. ಅವನ ಕೊಲೆಯ ನಂತರ ಸ್ವರ್ಗದ ಮೇಲಿನ ನಂಬಿಕೆ ಉಳಿಯುವುದಿಲ್ಲ. ಎಲ್ಲಾ ದೈಹಿಕ ಇಂದ್ರಿಯಗಳನ್ನು ಮೀರಿದ ಪ್ರೇಮ ಇವರದು. ಸೂಫಿ ಲೋಕಕ್ಕೆ ಯಾವುದು ಪ್ರೇಮಕ್ಕೆ ಸಂಕೇತವೋ ಅದಕ್ಕೆ ರಕ್ತ ಅಂಟಿಸಲಾಗಿದೆ, ಎನ್ನುವಾಗ ಸಮಕಾಲೀನ ಮೂಲಭೂತವಾದಿ ಮನೋಧರ್ಮಗಳು ನೆನಪಾಗುತ್ತವೆ. ಈ ಕವಿತೆ ಕೂಡ ಆಳವಾಗಿ ಅದನ್ನೇ ಶೋಧಿಸಿದೆ. 'ಗೊಂಬೆಕತೆ' ಈ ಪದ್ಯ ಒಂದು ಕ್ಯೂಬನ್ ಜನಪದ ಕತೆಯಿಂದ ಪ್ರೇರಿತವಾದದ್ದು ಎಂದು ಶಿವಪ್ರಕಾಶರೇ ಹೇಳಿಕೊಂಡಿದ್ದಾರೆ. ಸಂತೆಯ ಗೊಂಬೆಗೆ ರಾತ್ರಿ ವೇಳೆ ಜೀವ ಬಂದು ಕೊಂಡುಕೊಂಡು ಬಂದ ಹರೆಯದ ಯುವಕನನ್ನು ಪ್ರೀತಿಸುವುದು, ಅವನು ಎಲ್ಲರಿಗಿಂತ ಆ ಗೊಂಬೆಯನ್ನು ಇಷ್ಟಪಡುವುದು ಇದೆಯಲ್ಲಾ ಇದೊಂದು ಉತ್ಕಟ ಪ್ರೇಮಕಥೆ. ಈ ಪ್ರೀತಿ ವಿಫಲವಾದರೂ ಅದಕ್ಕೆ ಪ್ರೇಮ ಅಧ್ಯಾನವನ್ನು ಶಿವಪ್ರಕಾಶರು ರೂಪಿಸುತ್ತಾರೆ. ಇಬ್ಬರ ನಡುವೆ ಸಂವಹನಶೀಲತೆ ಇಲ್ಲದಿದ್ದರೂ ಪ್ರೇಮತತ್ವ ಅಲ್ಲಿ ಮೂಡಿ ಬಂದಿದೆ. ಆ ಹೈದ ಇಡೀ ಪ್ರಕೃತಿ ಲೋಕವನ್ನು ನಿಂದಿಸುತ್ತಾನೆ. ಬೆಳಕು ಆತನ ಪಾಲಿಗೆ ಶತ್ರುವಾದ ಮೇಲೆ

ನನಗಿನ್ನು ಕಲ್ಲುನಿದ್ದೆ
ಬೆಳಕು ಹರಿಯೋತಕ
ರೆಂಬೆ ಗೊಂಬೆಯ ಹಿಂಗೆ ಕೂಡಿಸಿದ ಜಕಣಾಚಾರಿ
ನಿನ್ನ ಕೈ ಮುರಿಯ
ಪ್ರಾಸ ಮಾಡಿದ ಬ್ರಹ್ಮ
ಥೂ ನಿನ್ನ ಹೆಂಡಿರು ಸಾಯ! (ಗೊಂಬೆಕತೆ)

ಎಂದು ಹೇಳುವಾಗ ಇಡೀ ಸೃಷ್ಟಿಲೋಕವನ್ನು ಎದುರು ಹಾಕಿಕೊಳ್ಳುತ್ತಾನೆ. ಕ್ಯೂಬಿಸ್ ಕತೆಯಲ್ಲಿ ಜಕಣಾಚಾರಿ ಎಲ್ಲಿ ಬರುವನು ಎಂದು ಆಶ್ಚರ್ಯ ಪಡಬಹುದು ಆದರೆ ಅವನು ಸೌಂದರ್ಯ ಸೃಷ್ಟಿಯ ಪ್ರತಿನಿಧಿ ಅಲ್ಲವೆ. ಶಿವಪ್ರಕಾಶರ ಬಹುಪಾಲು ಕವಿತೆಗಳಲ್ಲಿ ಹೀಗೆ ಮೊದಮೊದಲು ಅನುಭಾವಿಕ ನೆಲೆಯಲ್ಲಿ ಬಂದು ತದನಂತರದಲ್ಲಿ ಅದು ಸಮಕಾಲೀನ ಸ್ಪರ್ಶವನ್ನು ಪಡೆದುಕೊಳ್ಳುತ್ತವೆ. ಬಂಡಾಯದ ತಾತ್ವಿಕತೆಯನ್ನು ಪ್ರಖರ್ ಕಟ್ಟುವುದು ಇವರಿಗೆ ಮುಖ್ಯವಾಗುತ್ತದೆ. ಕೆಲವೊಮ್ಮೆ ಸ್ತ್ರೀ ದನಿಗಳು ಇದಕ್ಕೆ ಬೆಂಬಲ ಸೂಚಿಸುತ್ತವೆ. ಮದುರೆಯಂಥ ಕವಿತೆಯಲ್ಲಿ ಇದನ್ನು ಚೆನ್ನಾಗಿ ಕಾಣಬಹುದು. ಕೋವಲನ್‌ಗೆ ಎರಡು ರೀತಿಯಲ್ಲಿ ಬೆಂಬಲವಿದೆ. ಒಂದು ಹೆಂಡತಿ ತನಗಿಂತ ಹೆಚ್ಚು ಪ್ರೀತಿಸುವುದು, ಮತ್ತೊಂದು ಕಡೆ ಪೂಹಾರ್‌ನಲ್ಲಿ ಅವನ ಪ್ರೇಯಸಿ ಮಾಧವಿ ಇದ್ದಾಳೆ. ಕೋವಲನ್ ಕೊಲೆಯ ನಂತರ ಕಣ್ಣಗಿ ಮದುರೆಯನ್ನು ತನ್ನ ಪ್ರೀತಿ, ಪಾತಿವ್ರತ್ಯದಿಂದ ಸುಡುತ್ತಾಳೆ. ಈ ಪ್ರತೀಕ ಹೆಣ್ಣಿನ ಅಂತರಂಗವನ್ನು ಹಿಡಿಸಿದಾಗ ಬಂಡೆದ್ದ ನೋವು ಹೇಗೆ ಇರಬಹುದು ಎಂಬುದಕ್ಕೆ ಈ ಕವಿತೆ ಒಂದು ನಿದರ್ಶನ. ಕಣ್ಣಗಿ ಕೋಪಕ್ಕೆ ಒಳಪಟ್ಟರೂ ಪ್ರೀತಿಯ ಉತ್ಕಟತೆಯಿಂದ ಮದುರೆಯನ್ನು ನಾಶಪಡಿಸುತ್ತಾಳೆ.

ಬರಿದಾಗಿ ಹೋಗಿದೆ ಪುಣ್ಯಕರ್ಮದ ಮೂಟೆ
ಬಾರಿಸುತ್ತಿದೆ ಗಂಟೆ
ನ್ಯಾಯದ ಗಂಟೆ (ಮದುರೆ)

ಎಂದು ಪದ್ಯ ಮುಕ್ತಾಯ ಕಾಣುತ್ತದೆ. ಹೊನ್ನಾದೇವಿಯದು ಕೂಡ ಇದೇ ಉತ್ಕಟ ಕೋಪ, ಆವೇಶ, ಪ್ರೇಮ ಕಂಡು ಬರುತ್ತದೆ. ಮೇಲುನೋಟಕ್ಕೆ ಶೈವದ ಹಿನ್ನೆಲೆಯಲ್ಲಿದ್ದರೂ ಹೊನ್ನಾದೇವಿಯೂ ಸಾಮಾಜಿಕ ಹಂತದಲ್ಲಿದ್ದಾಳೆ.

ಎಲ್ಲಿ ಆ ತಿರುಕ
ಬುಡುಬುಡಿಕೆ ಬೂದಿಬುಡುಕ
ಬತ್ತಲಿಗೆ ಮನೆಮುರುಕ
ಸಂಜೆ ಕಣ್ಣಿಗೆ ಕಾಮನ ಬಿಲ್ಲು
ಹುಬ್ಬನೊಂದೇ ಕ್ಷಣ
ಬರೆದು ಮರುಕ್ಷಣ ಅಳಿಸಿ
ಕಸಿದುಕೊಂಡೋಡಿದವ (ಹೊನ್ನ ಗಂಗಾಧರ)

ಮತ್ತೆ ನೀ ಹುಟ್ಟುವುದು (ದಕ್ಷನ ಮಗಳು) ವಿಧವೆ ಹೊಟ್ಟೆಯಲ್ಲಿ ಸತ್ತು ಹುಟ್ಟಿದವನ ಬಾಲಲೀಲೆಯ ಕಬ್ಬ ಮುಂತಾದ ಕವಿತೆಗಳನ್ನು ಇದೇ ಸರಣಿಗೆ ಸೇರಿಸಬಹುದು. ಈ ದಿಕ್ಕಿನಲ್ಲಿ ತುಕಾರಾಮನ ಅಭಂಗಗಳ ಕತೆಯನ್ನು ಆಧರಿಸಿದ ಪದ್ಯವನ್ನು ವಿಶ್ಲೇಷಿಸುವುದು ಮುಖ್ಯವೆಂದು ಭಾವಿಸುವೆ. ಸಂಪ್ರದಾಯ ತುಕಾರಾಮನ ಜಾತಿ ಮತ್ತು ಅಭಂಗಗಳ ವಾಗ್ವಾದ ಮಾತ್ರವಲ್ಲದೆ ಅದರಲ್ಲಿ ಸಂಸ್ಕೃತ ಮತ್ತು ಮರಾಠಿ ಭಾಷೆಗಳ ವಾಗ್ವಾದವಿದೆ.

ಇದೊಂದು ರೀತಿಯ ಪ್ರಧಾನ ಭಾಷೆಯೊಂದನ್ನು ಅಧೀನಭಾಷೆ ಸಾಂಸ್ಕೃತಿಕವಾಗಿ ಎದುರುಗೊಳ್ಳುವ ಬಗೆ. ಸಂಸ್ಕೃತ ಸಂಪ್ರದಾಯವಾದಿಗಳ ಪರವಾದರೆ ಮರಾಠಿ ಅಭಂಗಗಳು ತುಕಾರಾಮನ ಪರ ವಹಿಸುತ್ತವೆ. ಶೂದ್ರನ ಅಭಂಗಗಳು ನಿಷಿದ್ಧವೆಂದು ಅವುಗಳು ನದಿಯಲ್ಲಿ ಮುಳುಗಿಸಲು ಹೋದಾಗ ಪವಾಡವೆಂಬಂತೆ ಹದಿಮೂರನೆ ರಾತ್ರಿ ಅವು ತೇಲುತ್ತವೆ. ಆಗ ತುಕಾರಾಮ ತನ್ನ ಅಭಂಗಗಳಲ್ಲಿ ಏನು ಅಡಗಿದೆ ಎಂಬುದನ್ನು ಹೇಳುತ್ತಾನೆ.

ಈ ಜಲಕ್ಷಾಮ ನೆಲಕ್ಷಾಮ ವಾಯುಕ್ಷಾಮ ಅಗ್ನಿಕ್ಷಾಮ
ಆಕಾಶಕ್ಷಾಮ ಕಳೆದು ಸರ್ವವನ್ನು ಸರ್ವರನೂ ಸಮ್ಮಿಳಿಗೊಳಿಸಲೆಂದು
ತೇಲಿ ಬರಲಿ ಹರಿವ ನೀರ ಮೇಲೆ ಶ್ರೀಹರಿಯೇ ಆ ಶಬ್ದಗಳು
ಆ ಶಬ್ದಗಳಿಂದ ನಿನಗಾಗಿ ನಾನು ಕಟ್ಟಿದ ಮಧು ಮಧುರ ಭಾವದ
ಹಾಡು-ಹಾರಗಳು (ತುಕಾರಾಮ ಅಭಂಗಗಳು)

ಎಂದು ಹೇಳುತ್ತಾನೆ. ಇದು ಸೌಮ್ಯವಾಗಿಯೇ ಪುರೋಹಿತಶಾಹಿ ವಿರುದ್ಧ ಬಂಡೆದ್ದ ತುಕಾರಾಮನ ನಿಲುವು. ಪ್ರಕೃತಿ ಮತ್ತು ಪ್ರತಿಭೆ ಸಕಲ ಜೀವರಾಶಿಗೂ ಸಲ್ಲುವ ವಸ್ತುಗಳು ಎಂಬುದನ್ನು ಅವನ ಅಭಂಗಗಳು ತಿಳಿಸುತ್ತವೆ. ತುಕಾರಾಮನದು ಒಂದು ರೀತಿಯ ಪಾಡಾದರೆ ಜ್ಞಾನದೇವನದು ಮತ್ತೊಂದು ರೀತಿಯದು. ಎಲ್ಲಾ ಜಾತಿಯವರೊಂದಿಗೆ ಬೆರೆತದ್ದೇ ಇವನ ತಪ್ಪು. ಈ ಕವಿತೆ ಅನುಭಾವದ ಗೂಢತೆಯಲ್ಲೇ, ಅದರ ಪರಿಭಾಷೆಯಲ್ಲೇ ಇಡೀ ಮನುಷ್ಯನ ಇಂದ್ರಿಯಗಳ ವಿಶ್ಲೇಷಣೆ ಇದೆ. ಅವುಗಳ ಮೂಲಕ ಸಾಮಾಜಿಕ ನ್ಯಾಯ ಅಡಗಿದೆ. ಈ ಕವಿತೆ ವಚನ, ದಾಸಪದ, ತತ್ವಪದ ಎಲ್ಲವೂ ಸೇರಿಕೊಂಡಂತೆ ರಚಿತಗೊಂಡಿದೆ. ಮುಕ್ತಾಬಾಯಿ ಅಣ್ಣ ಜ್ಞಾನದೇವನಿಗೆ ಹೀಗೆ ಹೇಳುತ್ತಾಳೆ:

ಸಿದ್ಧನ ಉಸಿರಾದಿ ಬ್ರಹ್ಮನಲ್ಲವೆ ಅಣ್ಣಾ
ಮಧ್ಯದ ಉಸಿರು ಶ್ರೀವಿಷ್ಣುವಲ್ಲವೆ ಅಣ್ಣಾ
ಉಸಿರಿನ ತುದಿ ಒಂದು ರುದ್ರನಲ್ಲವೆ ಅಣ್ಣಾ
ಚಿತ್ತ ವೃತ್ತಿಯೊಳಗೆ ದೇವದಾನವರೆಲ್ಲ
ಆದಿ ಅನಂತ ಮುಂದು ಹಿಂದುಗಳೆಲ್ಲ
ಒಂದಾಗಿ ಕೈ ಹಿಡಿದು ನಾಟ್ಯವಾಡದೆ ಅಣ್ಣಾ
ಈ ಕುಣಿತದ ಮೇಳದಂತೆ ನಿನ ನಿಂದಕರ
ಬೊಗಳು ನಿನ್ನಿಚ್ಛೆಯಂತೆ
ಗಳಹು ನಿನ್ನಿಚ್ಛೆಯಂತೆ
ಪ್ರಶಂಸಕರ ಈ ಕುಣಿತದ ಮೇಳದಂತೆ (ಬಾಗಿಲು ತೆರೆಯೊ)

ಜ್ಞಾನದೇವನ ತರದವರೂ ಸೂಫಿಗಳಲ್ಲಿ ಸಿಗುತ್ತಾರೆ. ಮೂಲಧರ್ಮಕ್ಕೆ ವಿರುದ್ಧವಾದ ಅನಲ್ ಹಖ್ ಎಂಬ ನುಡಿ ಮನ್ಸೂರ್ ಎಂಬ ಸೂಫಿಯನ್ನು ತುಂಡು ತುಂಡು ಮಾಡಿತು. ಆ ದೇಹದ ಚೂರುಗಳೇ ಮೂಲಭೂತವಾದಿ ಧರ್ಮದ ವ್ಯವಸ್ಥೆಯನ್ನು ವಿರೋಧಿಸುತ್ತವೆ. ಇವರ ಮೂಲಕವೇ ಶಿವಪ್ರಕಾಶ ಅವರು ಬಂಡಾಯದ ಪರ್ಯಾಯ ಚಿಂತನಾಕ್ರಮವನ್ನು ಕಟ್ಟುವುದಕ್ಕೆ ಹೋಗುತ್ತಾರೆ ಎನಿಸುತ್ತದೆ. ಅಲ್ಲದೇ ಸೂರ್ಯಜಲ ಸಂಕಲನಕ್ಕೆ ಬರುವ ವೇಳೆಗೆ ಬಂಡಾಯ ತಾತ್ವಿಕತೆಯನ್ನು ಮತ್ತಷ್ಟು ಪರೀಕ್ಷೆಗೆ ಒಳಪಡಿಸಿದರು ಎಂಬುದು ಮೇಲುನೋಟಕ್ಕೆ ತಿಳಿಯುತ್ತದೆ. ತಮ್ಮ ಹಳೆಯ ಜಾಡನ್ನೇ ಬಳಸಿಕೊಂಡು ಹೊಸರೀತಿಯ ಪದ್ಯಗಳನ್ನು ಇದಕ್ಕೆ ನೀಡಿದ್ದಾರೆ.

ಸೂರ್ಯಜಲದಲ್ಲಿ ಬಳಕೆಗೊಂಡ ಲಯಗಾರಿಕೆಯೇ ಆವೇಶದಿಂದ ಕೂಡಿದೆ. ತದ ನಂತರ ಇದೇ ಸಂಕಲನದ ಕೊನೆಯ ಕವಿತೆಗಳಲ್ಲಿ ಇದನ್ನು ಕಡಿಮೆ ಮಟ್ಟದಲ್ಲಿ ಕಾಣಬಹುದು. ಈ ಮೂಲಕ ಅವರು ಮಿತಿ ಮತ್ತು ಸಾಧ್ಯತೆಗಳನ್ನು ತೋರಿಸುತ್ತಾರೆ. ಉರಿಚಮ್ಮಾಳಿಗೆ ಮತ್ತು ಗಾಣದ ವಸ್ತುಗಳು ಪದ್ಯಗಳಲ್ಲಿ ಇದನ್ನು ಕಾಣಬಹುದು. ಒಂದನೇ ಸುತ್ತಿನಲ್ಲಿ ಬಾಲ್ಯ, ಗಾಂಧಿ ಶಿಷ್ಯನ ಶೌರ್ಯಗಳು ಬಂದರೆ ಎರಡನೇ ಸುತ್ತಿನಲ್ಲಿ ನೋವು ಸಂಕಟಗಳು ತತ್ವಪದಕ್ಕೆ ತಿರುಗಿ ವೇಗವೆಲ್ಲ ತಾಟಿಯೋ ಬಾಸುಂಡೆ ಬೆನ್ನಿಗೋ ಕಾಲುಗಳು ಕುಸಿಯುವವೋ ಎಂದು ಬರುತ್ತದೆ. ಮೂರು ಮತ್ತು ನಾಲ್ಕನೇ ಸುತ್ತುಗಳಲ್ಲಿ ಕವಿ ಬಸವಣ್ಣ, ಪ್ರಭುತ್ವದ ದುರ್ಬಲತೆಗಳು ಮೈಗೊಂಡಿವೆ. ದೇವತೆಗಳೇ ಅದೆಷ್ಟು ಯುಗಗಳಾಯ್ತು ಹಿಡಿದು ಮಲಗಿದ್ದೀರಿ ನೀವು ನಿಮ್ಮನ್ನೆಲ್ಲ ನಿಮ್ಮ ನಿಗೂಢ ಜಾಲಗಳ ಶೈಲಿನಲ್ಲಿ ಈಗ ನೀವೇ ಸರಿಯಾನುಗಳು ವಸ್ತುವಾಗ ದೇವತೆಗಳ ಹೆಸರಿನಲ್ಲಿ ಪ್ರಭುತ್ವದ ವಿಮರ್ಶೆಯನ್ನು ಸೂಕ್ಷ್ಮವಾಗಿ ಗಮನಿಸಬಹುದು. ಬಂಡಾಯ ಅನ್ನುವುದು ಅನುಭಾವಿಕ ನೆಲೆಯಲ್ಲಿ ಒಡಮೂಡಿದಾಗ ಹೇಗೆ ರೂಪಗೊಳ್ಳುತ್ತದೆ ಎಂಬುದಕ್ಕೆ ಭೂತನಾಥನ ಗೋಳು ಪದ್ಯವೇ ಸಾಕ್ಷಿ. ಈ ಕವಿ ಅವರನ್ನು ಮತ್ತೆ ಸಿದ್ಧಾಂತಗಳ ನಡುವೆ ಶಿವಪ್ರಕಾಶರನ್ನು ಕಟ್ಟಿ ಹಾಕುವ ಅಗತ್ಯ ನನ್ನದಲ್ಲ. ಆದರೆ ಬಂಡಾಯದೆಡೆ ತಾತ್ವಿಕತೆಗೆ ಅವರು ನೀಡುವ ಹೊಸತನ ಮತ್ತು ಪರ್ಯಾಯ ಕ್ರಮಗಳನ್ನು ಸೂಚಿಸುತ್ತಿರುವ ರೀತಿಗಷ್ಟೇ ಈ ಟಿಪ್ಪಣಿ. ತಾರೀಖಿಯವರು ಈ ಕವಿತೆಯನ್ನು ಇಪ್ಪತ್ತೊಂದನೆಯ ಶತಮಾನದ ಬಂಡಾಯ ಶಿಷ್ಯನಾದ ಬಸವನ್ನು ನೋಡುತ್ತಾ ಪ್ರಾಕೃತಗೊಂಡ ರುದ್ರ ಗೋಳಿನ ದನಿ ವರ್ತಮಾನಕ್ಕೆ ಸಂವಾದಿಯಾಗುವಂತೆ ಕಾಣುತ್ತಿರುವುದೇ ಪಕ್ಕಾ ಕಾಲದ ಸ್ಥಿತಿಯ ಸೂಚನೆ ಇರಬಹುದು ಎಂದು ಹೇಳುತ್ತಾರೆ(ಮುನ್ನುಡಿಯನ್ನು ನೋಡಿ) ಇಂತ ಬಂಡಾಯದ ಮೂಲ ಪ್ರವೃತ್ತಿಯಾದ ಬಂಡಾಯಗಾರಿಕೆ ವಿರೋಧಿ ನಿಲುವನ್ನು ಶಿವಪ್ರಕಾಶ ಅವರು ಅನುಭಾವಿ ನೆಲೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಮುಗಿಯದ ಪರಸ್ತು, ಬಾಲಿ ಕೈಬರಿ, ಕಾಯುವುದು, ರೊಟ್ಟಿ ಜೋಂಗಾಗಿ ಆ ಕವಿ, ಕಂಡಾಸುತ್ತೇನೆ ಎಂಬ ಕವಿತೆಗಳೂ ಕೂಡ ಅನಾಯಕತೆಯ ದನಿಯನ್ನು ಬೇರೊಂದು ಅಭಿವ್ಯಕ್ತಿ ಕ್ರಮದಲ್ಲಿ ಮಂಡಿಸಿದ ಪದ್ಯಗಳಾಗಿವೆ


೫

ಶಿವಪ್ರಕಾಶರು ಇಂಥ ಶಬ್ದಗಳೇ ಕಾವ್ಯವಾಗಬೇಕೆಂದು ಹಠ ಹಿಡಿದು ಬರೆದವರಲ್ಲ. ಕೆಲವೊಮ್ಮೆ ನಾವು ಮಾತನಾಡುವ ಧಾಟಿಯಲ್ಲೇ ಕವಿತೆಯನ್ನು ಕಟ್ಟಿದ್ದಾರೆ. ಆ ಧಾಟಿಗೆ ಅನುಭಾವದ ಆಲೋಚನೆ ಜಾಸ್ತಿಯಾದಾಗ ಅಮೂರ್ತವಾಗಿಯೇ ಉಳಿದು ಪದ್ಯ ಬೇಗ ನಮ್ಮ ತೆಕ್ಕೆಗೆ ಬರುವುದಿಲ್ಲ. ಅದು ಪ್ರಶ್ನಾತೀತವಾಗಿಯೇ ಉಳಿಯುತ್ತದೆ. ಸಂವಾದ/ ಸಂಭಾಷಣೆಯನ್ನು ಆಧರಿಸಿದ ಕವಿತೆಗಳಲ್ಲಿ ಇದನ್ನು ಹೆಚ್ಚು ಕಾಣಬಹುದು. ಇದು ನನಗನ್ನಿಸಿದ್ದು ಅಷ್ಟೆ. ಇದರಲ್ಲಿ ನನ್ನ ಮಿತಿಯೂ ಇರಬಹುದು. ಈಚಿನ ಸಂಕಲನಗಳಾದ 'ಮಳೆಯೇ ಮಂಟಪ', 'ಮಬ್ಬಿನ ಹಾಗೆ ಕಣಿವೆಯಾಸಿ'ಗಳಲ್ಲಿ ಪರಿಸರ ನಾಶ, ಮಾರುಕಟ್ಟೆ, ಜಾಗತೀಕರಣದ ಪ್ರಶ್ನೆಗಳನ್ನು ಎತ್ತಿಕೊಂಡಿದ್ದಾರೆ. ಮಳೆಯೇ ಮಂಟಪದಲ್ಲಿ ಅನುಭಾವದ ಮೂಲಕವೇ ಮಾರುಕಟ್ಟೆಯ ಸ್ಥಿತಿಗತಿಗಳನ್ನು ನೇಯುವುದು ನೀರಿನ ಜೋಗಿ ಕವಿತೆಯಲ್ಲಿ ಕಾಣಬಹುದು. ಇದು ಅಧುನಿಕೋತ್ತರ ಸಮಸ್ಯೆಗಳನ್ನು ಕೂಡ ತಮಗೆ ದಕ್ಕಿದ ಪರಿಕರಗಳ ಮೂಲಕವೇ ಶೋಧಿಸುವುದು ಇವರ ವೈಶಿಷ್ಟ್ಯವೆಂದೇ ಹೇಳಬಹುದು.

ಇವರ ಪದ್ಯಗಳನ್ನು ಸ್ಥೂಲ ಮಟ್ಟದಲ್ಲಿ ಓದಿಕೊಂಡರೆ ಇವರ ಕಾವ್ಯದ ಲಯಗಾರಿಕೆಯ ಪ್ರಪಂಚ ಚೆನ್ನಾಗಿ ಅರ್ಥವಾಗುತ್ತದೆ. ಶಿವಪ್ರಕಾಶರ ಲಯಗಾರಿಕೆ ಸ್ಫೂರ್ತಿಕೆಯನ್ನು ಪಡೆದುಕೊಂಡಿದ್ದರೆ ಅದು

ಮೌಖಿಕ ಕಾವ್ಯ ಪರಂಪರೆಯ ಮೂಲಕ. ಇದು ಮೂಲತಃ ದೇಸಿತನವನ್ನು ವಿಸ್ತರಿಸುವ ಕೆಲಸ. ದೇಸಿಯನ್ನು ಕೇವಲ ವಸ್ತುವಿನಿಂದ ಮಾತ್ರ ಗಟ್ಟಿಗೊಳಿಸುವುದರ ಬದಲಾಗಿ ಅದರ ರಚನಾ ವಿನ್ಯಾಸಗಳ ಮೂಲಕವೂ ನೋಡಬಹುದು. ಹಾಗೂ ಒಂದು ಸಂಸ್ಕೃತಿಯ ಆಯಾಮದಲ್ಲಿ ನೋಡಿ ಅದನ್ನು ಮುಂದುವರೆಸುವುದು ದೊಡ್ಡ ಸವಾಲು. ಅದನ್ನು ಬೇಂದ್ರೆಯವರ ನಂತರ ಶಿವಪ್ರಕಾಶ, ಝುಂಝುರವಾಡ, ಸಿದ್ಧರಾಮಯ್ಯ, ಸಿದ್ಧಪ್ಪ, ಎಸ್. ಮಂಜುನಾಥ ಮುಂತಾದವರೆಲ್ಲ ಮುಂದುವರೆಸಿದ್ದಾರೆ. ಇನ್ನು ಇವರ ಕೆಲವು ಪದ್ಯಗಳನ್ನು ಒಳಗೊಂಡಂತೆ ಇವರದೇ ರಚನೆಗಳಾಗಿರುವ ತತ್ವಪದಗಳು, ಮುಕ್ತಕಗಳಲ್ಲಿ ಬೆಡಗಿನ ಕಾವ್ಯ ಪರಂಪರೆಯನ್ನು ಮುಂದುವರೆಸಿದ್ದಾರೆ ಎನಿಸುತ್ತದೆ. ಅಲ್ಲಮ ಮತ್ತು ಉಳಿದ ಕೆಳಹಂತದ ವಚನಕಾರರು, ಕನಕ, ತತ್ವಪದಕಾರರು, ನವೋದಯ ಪರಂಪರೆಯಲ್ಲಿ ಬೇಂದ್ರೆ ಮತ್ತು ಮುಖ್ಯವಾಗಿ ಮಧುರಚೆನ್ನರು ಮುಂದುವರೆಸಿದ್ದಾರೆ. ತಮ್ಮ ಬದುಕಿನ ಅನುಭವಲೋಕವನ್ನು ಬೆಡಗಿನ ರಚನೆಗಳಲ್ಲಿ ಅವರು ಅನಾವರಣಗೊಳಿಸಿದ್ದಾರೆ. ಇವರ ನಂತರ ಶಿವಪ್ರಕಾಶ, ಲಕ್ಷ್ಮಪತಿ ಕೋಲಾರ ಮುಖ್ಯವಾಗುತ್ತಾರೆ. ಶಿವಪ್ರಕಾಶರ ತತ್ವಪದಗಳನ್ನು ಆಳವಾಗಿ ಶೋಧಿಸಿದರೆ, ಮೂಲ ತತ್ವಪದಕಾರರ ಪ್ರಭಾವದ ಜತೆಗೆ ಮಧುರಚೆನ್ನರು ಅವರಿಗೆ ಇಷ್ಟವಾಗಿದ್ದರು ಎಂಬುದು ಮೇಲುನೋಟಕ್ಕೆ ತಿಳಿಯುತ್ತದೆ. ಭಾಷೆಯ ಪ್ರಯೋಗದಲ್ಲೂ ಕೂಡ ಒಂದು ಮಾತನ್ನು ಹೇಳಬಹುದು. ಬೌದ್ಧ, ಸೂಫಿ, ಜನಪದ ಇವುಗಳ ಹಿನ್ನಲೆಯಲ್ಲಿ ಲಯಗಾರಿಕೆಯನ್ನು ಕಟ್ಟುವಾಗ ಈ ಪರಂಪರೆಗಳ ಪರಿಭಾಷೆಯನ್ನೇ ಬಳಸುತ್ತಾರೆ.

ಅಸಿಸ್ಟೆಂಟ್ ಪ್ರೊಫೆಸರ್, ವಿವೇಕಾನಂದ ಪದವಿ ಕಾಲೇಜು
ರಾಜ್‌ಕುಮಾರ ರಸ್ತೆ, ರಾಜಾಜಿನಗರ ೨ನೇ ಹಂತ,
ಬೆಂಗಳೂರು - ೫೬೦ ೦೧೦
ಮೊಬೈಲ್ : [illegible]



ಏಕೀಕರಣೋತ್ತರ ಕನ್ನಡ ಸಾಹಿತ್ಯ: ಸಂಘರ್ಷ ಮತ್ತು ಸಾಮರಸ್ಯ

ಟಿ.ಪಿ. ಅಶೋಕ

೧

ಏಕೀಕರಣೋತ್ತರ-ಅಂದರೆ ೧೯೫೬ರ ನಂತರದ- ಕನ್ನಡ ಸಾಹಿತ್ಯದ ಲಕ್ಷಣಗಳನ್ನು ಸಂಘರ್ಷ ಮತ್ತು ಸಾಮರಸ್ಯದ ನೆಲೆಗಳಲ್ಲಿ ನಲವತ್ತೈದು ನಿಮಿಷಗಳ ಭಾಷಣದಲ್ಲಿ ಅಡಕಗೊಳಿಸಿ ಮಾತನಾಡುವುದು ತುಸು ತೊಡಕಿನ ಸಂಗತಿಯೇ. ಅದಕ್ಕಿಂತ ಕಷ್ಟದ ಸಂಗತಿ ಎಂದರೆ ಏಕೀಕರಣೋತ್ತರ ಕನ್ನಡ ಸಾಹಿತ್ಯವನ್ನೆಲ್ಲ ಸಂಘರ್ಷ ಮತ್ತು ಸಾಮರಸ್ಯ ಎಂಬ ಚೌಕಟ್ಟಿನೊಳಗೆ ತರುವುದು. ಹಾಗಾಗಿ ಈ ಅವಧಿಯ ಸಾಹಿತ್ಯದ ಸಮಗ ಸಮೀಕ್ಷೆಯನ್ನಾಗಲೀ, ಎಲ್ಲವನ್ನೂ ಒಂದೇ ಚೌಕಟ್ಟಿಗೆ ತುರುಕುವ ದುಸ್ಸಾಹಸವನ್ನಾಗಲೀ ಮಾಡಹೊರಡದೆ ಕೆಲವು ಸೂತ್ರರೂಪೀ ಮಾತುಗಳಲ್ಲಿ ಮತ್ತು ಸಾಧಾರಣೀಕೃತ ಅವಲೋಕನದಲ್ಲಿ ಕೆಲವು ಮಾತುಗಳನ್ನು ಹೇಳಲು ಪ್ರಯತ್ನಿಸುತ್ತೇನೆ. ಸಹಜವಾಗಿಯೇ ಈ ಅವಧಿಯ ಎಲ್ಲ ಮುಖ್ಯ ಲೇಖಕರನ್ನು ಮತ್ತು ಕೃತಿಗಳನ್ನು ಇಲ್ಲಿ ಪ್ರಸ್ತಾಪಿಸಲು ಸಾಧ್ಯವಿಲ್ಲ. ಕೃತಿ ವಿಮರ್ಶೆ ಅಥವಾ ಸಮೀಕ್ಷೆಯ ಬದಲಾಗಿ, ಈ ಕಾಲದ ಸಾಹಿತ್ಯದಲ್ಲಿ ಸೂಚಿತವಾಗಿರುವಂಥ ಸಂಘರ್ಷ ಮತ್ತು ಸಾಮರಸ್ಯದ ಕೆಲವು ಮಾದರಿಗಳನ್ನು ಗುರುತಿಸಿಕೊಳ್ಳುವುದಷ್ಟೇ ನನ್ನ ಉದ್ದೇಶ.

೨

ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು, ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲ, ನಾವು ಮನುಜರು, ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಮುಂತಾಗಿ ಸ್ವಾತಂತ್ರ್ಯದ ಹಂಬಲವನ್ನೂ, ಹೊಸ ರಾಷ್ಟ್ರ ಕಟ್ಟುವ ಕನಸನ್ನೂ ಇಟ್ಟುಕೊಂಡಿದ್ದ ಸಮುದಾಯಗಳಿಗೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿತು. ಭಾರತವು

ಗಣರಾಜ್ಯವಾಯಿತು. ಒಂದು ರಾಷ್ಟ್ರಪ್ರಭುತ್ವವಾಯಿತು. ತನ್ನದೇ ಸಂವಿಧಾನ, ಧ್ವಜ, ಭೂಪಟಗಳನ್ನು ಪಡೆಯಿತು. ಮುಂದೆ ಭಾಷಾವಾರು ರಾಜ್ಯಗಳ ಸ್ಥಾಪನೆಯೂ ಆಗಿ ಕನ್ನಡವನ್ನು ಪ್ರಧಾನ ಭಾಷೆಯಾಗಿ ಹೊಂದಿದ ಕನ್ನಡನಾಡು ಮೊದಲು ವಿಶಾಲ ಮೈಸೂರು ರಾಜ್ಯವಾಗಿ ಅನಂತರ ಕರ್ನಾಟಕವೆಂದು ಮರುನಾಮಕರಣ ಪಡೆಯಿತು. ಅಂದರೆ ಮೂರು ಮಹತ್ವದ ವಿದ್ಯಮಾನಗಳು ಕೆಲವೇ ವರುಷಗಳ ಅವಧಿಯಲ್ಲಿ ಆಗಿ ಹೋದವು: ವಸಾಹತುಶಾಹಿಗಳಿಂದ ಬಿಡುಗಡೆ, ರಾಜಪ್ರಭುತ್ವ ಕೊನೆಯಾಗಿ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಹಲವು ಹತ್ತು ಸಣ್ಣಸಣ್ಣ ರಾಜ್ಯಗಳಲ್ಲಿ ಹರಿದುಹೋಗಿದ್ದ ಸಮಾನಭಾಷಿಕರು ಒಂದು ರಾಜ್ಯವಾಗಿ ಒಟ್ಟಿಗೇ ಬಂದದ್ದು. ಕರ್ನಾಟಕ ಏಕೀಕರಣವಾದ ನಂತರ ಒಂದು ಸಭೆಯಲ್ಲಿ ಯ ರೋ ಉದಯವಾಯಿತು ನಮ್ಮ ಚೆಲುವ ಕನ್ನಡನಾಡು ಎಂದು ಸಂಭ್ರಮದಲ್ಲಿ ಹಾಡಿದಾಗ ಬೇಂದ್ರೆಯವರು ಅವರನ್ನು ತಡೆದರಂತೆ. ಕವಿಯ ಕನಸಿನ ಚೆಲುವ ಕನ್ನಡನಾಡು ಇನ್ನೂ ಉದಯವಾಗಿಲ್ಲ ಎಂದು ಹೇಳಿ ಕವಿಯ ಸಾಲನ್ನು ಅವರು ಬರೆದ ಹಾಗೆಯೇ ಹಾಡಲು ತಾಕೀತು ಮಾಡಿದರಂತೆ. ಮುಂದೆ ಕವಿ ಸಿದ್ದಲಿಂಗಯ್ಯನವರು ತಮ್ಮ ಒಂದು ಕವಿತೆಯಲ್ಲಿ ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ? ಎಂದು ಝಳಪಿಸಿ ಕೇಳಿದರು. ಇನ್ನೂ ಮುಂದಿನ ಒಂದು ಹಂತದಲ್ಲಿ ಅನಂತಮೂರ್ತಿಯವರು ಒಂದು ಹೆಜ್ಜೆ ಮುಂದೆ ಹೋಗಿ ಅಧ್ವಾನಿಜೀಗೊಂದು ಕಿವಿಮಾತು ಹೇಳುತ್ತಾರೆ:

ಲಂಡನ್ ನಲ್ಲಿ ನೀನು ಯಾರು ಎಂದರೆ
ನಾನು ಭಾರತೀಯ, ಸಾರಿ,
ಪಾಕಿಯಲ್ಲ, ಎಂಬ ಗುರುತಿಗೆ
ಹಾಗೇ ದೆಹಲಿಯಲ್ಲಿ ಕನ್ನಡದವ
ಬೆಂಗಳೂರಲ್ಲಿ ಮಲೆನಾಡಿನವ
ಶಿವಮೊಗ್ಗೆಯಲ್ಲಿ ತೀರ್ಥಹಳ್ಳಿಯವ
ತೀರ್ಥಹಳ್ಳಿಯಲ್ಲಿ ಹುಟ್ಟೂರು ಮೇಳಿಗೆಯವ
ಮೇಳಿಗೆಯಲ್ಲಿ ಕೇಳುವುದೆ ಬೇಡ-
ಇಂಥ ಜಾತಿಯ ಇಂಥವರ ಮಗ
ಆಗಿದ್ದೇ ಮೇಲಿನ ಎಲ್ಲವ, ಅನಾಯಾಸವಾಗಿ

ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ, ಏಕೀಕರಣೋತ್ತರ ಕನ್ನಡ ಸಾಹಿತ್ಯದಲ್ಲಿ ನಾಡುನುಡಿಯನ್ನು ಕುರಿತ ಆವೇಶದ, ಸಂಭ್ರಮದ, ದೇಶಪ್ರೇಮದ, ದೇಶಭಕ್ತಿಯ ಆರಾಧನಾ ಗೀತೆಗಳಿಗೆ, ಗದ್ಯಬರಹಗಳಿಗೆ, ಭಾಷಣಗಳಿಗೆ ಬರವೇನೂ ಇಲ್ಲ. ಕನ್ನಡವೇ ಸತ್ಯ, ಹಿಂದೂ ಒಂದು ಎನ್ನುವ ವಾಗ್ವಿಲಾಸದ ನಡುವೆಯೂ ಮನುಷ್ಯರೆಲ್ಲ ಒಂದು ಎನ್ನುವ ಆದರ್ಶದ, ಕನಸಿನ ಮಾತುಗಳಿಗೂ ಬರವಿಲ್ಲ. ಏಕತೆ, ಸಮಾನತೆ, ಸಾಮರಸ್ಯಗಳ ಘೋಷಣೆ ಇಂದೂ ಕೇಳಿಬರುತ್ತಲೇ ಇದೆ. ಒಂದು ವ್ಯತ್ಯಾಸವೆಂದರೆ ಹಿಂದೆಲ್ಲ ಒಂದು ಘೋಷಿತ ಪೂರ್ವಪಕ್ಷ-ವಿರೋಧಪಕ್ಷದ ಸಮಕ್ಷಮದಲ್ಲಿ ಈ ಘೋಷಣೆಗಳಿಗೆ ಒಂದು ಸದ್ಯದ ತುರ್ತಿತ್ತು; ಹಲವು ನೆಲೆಗಳಲ್ಲಿ ಒಡೆದುಕೊಂಡಿದ್ದ ವ್ಯಕ್ತಿ-ಸಮುದಾಯಗಳನ್ನು ಯಾವುದಾದರೊಂದು ವೇದಿಕೆಯಡಿಯಲ್ಲಿ ಒಗ್ಗೂಡಿಸಿ ರಾಜಕೀಯ ಹೋರಾಟಕ್ಕೆ ಸಜ್ಜುಗೊಳಿಸುವ ಕಾರ್ಯಸೂಚಿಯಿತ್ತು. ಬಹುಕಾಲದಿಂದ ಮುಂದುವರೆದುಕೊಂಡು ಬಂದಿದ್ದ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೆ ಅವು ನಿರ್ಣಾಯಕ ಪರಿಹಾರಗಳನ್ನು ಸೂಚಿಸದೇ ಇದ್ದಾಗಲೂ ಹೊಸ ರಾಷ್ಟ್ರವೊಂದನ್ನು ಕಟ್ಟಿಕೊಳ್ಳುವ, ಸಮಾನಭಾಷಿಕರ ರಾಜ್ಯವೊಂದನ್ನು ಕಟ್ಟಿಕೊಳ್ಳುವ ಹಂಬಲದಲ್ಲಿ ಉಳಿದ ಜ್ವಲಂತ ಪ್ರಶ್ನೆಗಳು ಒಂದು ಕಾಲಘಟ್ಟದಲ್ಲಿ ಕೊಂಚ ಹಿಂದೆ ಸರಿದಿದ್ದರೆ ಆಶ್ಚರ್ಯವೇನೂ ಇಲ್ಲ. ಕೋಮು-ಜಾತಿ-ವರ್ಗ-ಲಿಂಗ ಭಾಷೆಗಳಿಗೆ ಸಂಬಂಧಪಟ್ಟ

ಪ್ರಶ್ನೆಗಳು ಯಾವಾಗಲೂ ಇದ್ದುವು. ಆದರೆ ರಾಷ್ಟ್ರನಿರ್ಮಾಣದ ದೊಡ್ಡ ಅಜೆಂಡಾದ ಎದುರು ಅವು ತುಸು ಮಸುಕಾಗಿದ್ದುವು. ಸ್ವತಂತ್ರ ಗಣರಾಜ್ಯ ಸ್ಥಾಪನೆಯಿಂದ, ಭಾಷಾ ಏಕೀಕರಣದಿಂದ ಹಲವು ಸಮಸ್ಯೆಗಳು ತ್ವರಿತಗತಿಯಲ್ಲಿ ಪರಿಹಾರ ಕಂಡುಕೊಂಡಾವು ಎಂಬ ನಿರೀಕ್ಷೆಯೂ ಇತ್ತು. ಅಂದರೆ ಸಾಮರಸ್ಯದ ನಿರೀಕ್ಷೆ, ಅಪೇಕ್ಷೆಗಳಲ್ಲಿ ಸಂಘರ್ಷವು ಹೆಚ್ಚಾಗಿ ಹೊರಗಿನ ಶಕ್ತಿಗಳೊಂದಿಗೆ ಇತ್ತು. ಸ್ವಾತಂತ್ರ್ಯಾನಂತರ, ಏಕೀಕರಣದ ನಂತರ ಕೆಲವು ಸಮಸ್ಯೆಗಳಿಗೆ ಅಲ್ಪ ಪರಿಹಾರ ಸಿಕ್ಕಿತು ಎಂದು ಭಾಸವಾಗುತ್ತಿರುವಾಗಲೇ ಹೊಸ ಸಮಸ್ಯೆಗಳು ಹುಟ್ಟಿಕೊಂಡವು. ಹಿಂದಿನ ಸಮಸ್ಯೆಗಳೊಂದಿಗೆ ಈ ಹೊಸ ಸಮಸ್ಯೆಗಳೂ ಸೇರಿಕೊಂಡು ಹೊಸ ಹೊಸ ಸಂಘರ್ಷಗಳು ಪ್ರಾರಂಭವಾದವು. ಈ ಸಂಘರ್ಷವು ಒಂದು ನಿಟ್ಟಿನಲ್ಲಿ ದೇಶದ ಹೊರಗಿದ್ದುಕೊಂಡೇ ನಮ್ಮ ದೇಶವನ್ನು ಪರೋಕ್ಷವಾಗಿ ನಿಯಂತ್ರಿಸಬಯಸುತ್ತಿರುವ ಶಕ್ತಿಗಳ ಜೊತೆ ಇದ್ದರೆ, ಇನ್ನೊಂದು ನಿಟ್ಟಿನಲ್ಲಿ ದೇಶದ ಒಳಗೇ ಇರುವ, ನಮ್ಮದು ಎಂದೇ ಬಿಂಬಿಸಲಾಗುತ್ತಿರುವ ಪ್ರಭುತ್ವದ ಕೇಂದ್ರಗಳ ಜೊತೆ ಇದೆ. ಸಾಮರಸ್ಯವೆಂಬುದು ಇನ್ನೂ ಒಂದು ಮರೀಚಿಕೆಯಾಗಿ ಸಂಘರ್ಷವೇ ವಾಸ್ತವವೆಂಬ ಸಂದರ್ಭದಲ್ಲಿ ಬದುಕುತ್ತಿರುವ ನಾವು ಇದರ ವೈವಿಧ್ಯಮಯ ಪ್ರತಿಬಿಂಬ-ಗತಿಬಿಂಬಗಳನ್ನು ನಮ್ಮ ಸಾಹಿತ್ಯದಲ್ಲಿ ಕಾಣುತ್ತಿದ್ದೇವೆ. ಗಮನಿಸಬೇಕಾದ ಸಂಗತಿ ಎಂದರೆ ಈ ಸಂಘರ್ಷದ ವಾಸ್ತವ ಮತ್ತು ಸಾಮರಸ್ಯದ ಹಂಬಲವು ಏಕರೂಪಿಯಾಗಿ ತೋರುತ್ತಿಲ್ಲ. ಅವುಗಳ ಬಹುತ್ವ-ಬಹುರೂಪಗಳ ಒಂದು ಸಂಕೀರ್ಣ ವಿನ್ಯಾಸವು ಸಾಹಿತ್ಯಲೋಕವನ್ನು ಕಟ್ಟಿದೆ.

೩

ವಸಾಹತುಶಾಹಿ ಆಳ್ವಿಕೆಯಿಂದ ಬಿಡಿಸಿಕೊಂಡು ಸ್ವತಂತ್ರರಾಗಿ, ಹೊಸ ರಾಷ್ಟ್ರವೊಂದರ ನಾಗರಿಕರಾಗಿ, ಏಕೀಕರಣದ ಫಲವಾಗಿ ವಿಶಾಲ ಕನ್ನಡನಾಡನ್ನು ಪಡೆದು ಕನ್ನಡಿಗರೆಂಬ ಹೊಸ ರಾಜಕೀಯ ಅಸ್ಮಿತೆಯನ್ನು ಪಡೆದ ಮೇಲೆ ಹಿಂದಿನ ಇತಿಹಾಸವನ್ನು-ಮುಖ್ಯವಾಗಿ ವಸಾಹತುಶಾಹಿ ಇತಿಹಾಸವನ್ನು ಕೊಂಚ ಕಾಲದ ದೂರದಲ್ಲಿ ಅರ್ಥೈಸಿಕೊಳ್ಳುವ ಎರಡು ಮಹತ್ವದ ಪ್ರಯತ್ನಗಳೆಂದರೆ ಮಾಸ್ತಿಯವರ ಚಿಕವೀರ ರಾಜೇಂದ್ರ ಮತ್ತು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು. ಈ ಎರಡೂ ಕಾದಂಬರಿಗಳು ಒಳಗೊಳ್ಳುವುದು ಏಕೀಕರಣೋತ್ತರ ಕನ್ನಡನಾಡಿನ ಬದುಕಿನ ಅನುಭವಗಳನ್ನಲ್ಲ. ಕೊಡಗು ರಾಜ್ಯವು ತನ್ನ ಅರಸೊತ್ತಿಗೆಯ ಕೊನೆಯ ರಾಜ ಚಿಕವೀರನ ಕಾಲದಲ್ಲಿ ಬ್ರಿಟಿಷರ ವಶವಾದ ಸಂದರ್ಭವನ್ನು ಚಿತ್ರಿಸುವ ಕಾದಂಬರಿ ಚಿಕವೀರರಾಜೇಂದ್ರ. ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ರಾಜಕಾರಣದ ಒಂದು ಮೂಲ ಮಾದರಿಯ ಕಥನವೆಂಬಂತೆ ಈ ಕಾದಂಬರಿಯನ್ನು ಓದಬಹುದಾಗಿದೆ. ದೇಶೀಯ ಸಂಸ್ಥಾನವೊಂದು ಏಕಕಾಲದಲ್ಲಿ ತನ್ನ ಆಂತರಿಕ ದೌರ್ಬಲ್ಯ ಮತ್ತು ವಸಾಹತುಶಾಹೀ ಆಕ್ರಮಣಗಳ ಫಲವಾಗಿ ವಸಾಹತೀಕರಣಕ್ಕೆ ಒಳಗಾದ ಕತೆಯನ್ನು ಈ ಕಾದಂಬರಿ ನಿರೂಪಿಸುತ್ತದೆ. ಇಲ್ಲಿ ಹಳೆಯದನ್ನು ಕುರಿತ ಹಳಹಳಿಕೆಯೂ ಇಲ್ಲ; ಹೊಸದನ್ನು ಕುರಿತ ಸಂಭ್ರಮವೂ ಇಲ್ಲ. ಚಿಕವೀರನ ಆಳ್ವಿಕೆಯನ್ನು ಕಾದಂಬರಿ ಉಗ್ರವಾಗಿ ಟೀಕಿಸುತ್ತದೆ. ಆದರೆ ಆ ಕಾರಣಕ್ಕಾಗಿ ಬ್ರಿಟಿಷರು ಅದನ್ನು ಕೈವಶ ಮಾಡಿಕೊಂಡ ರಾಜಕಾರಣವನ್ನು ಸಮರ್ಥಿಸುವುದಿಲ್ಲ. ಅದು ವಸಾಹತುಶಾಹೀ ಚಟುವಟಿಕೆಗಳನ್ನೂ ಅಷ್ಟೇ ಉಗ್ರವಾಗಿ ಟೀಕಿಸುತ್ತದೆ. ಹೆರವರು ಬಂದರೆ ದೇಶದಲ್ಲಿ ಅವ್ಯವಸ್ಥೆ. ಈಗ ಬಹು ವ್ಯವಸ್ಥೆಯಿದೆಯೆಂದಲ್ಲ. ಆದರೆ ಈಗ ಮಡಿಕೇರಿಯಲ್ಲಿ ಅರಮನೆಯ ಬದಿಯಲ್ಲಿ ನಡೆಯುವ ಅವಿವೇಕಕ್ಕೆ ಒಂದು ಎಲ್ಲೆ ಇದೆ. ನಾಡು ಒಟ್ಟಿನಲ್ಲಿ ಒಂದು ಬಾಳು ಬಾಳುತ್ತಿದೆ. ಹೆರವರು ಬಂದು ಮಾಡುವ ಅವ್ಯವಸ್ಥೆಯಲ್ಲಿ ಯಾರೂ ತಮ್ಮ ಮನೆಯಲ್ಲಿ ತಾವು ನಿಶ್ಚಿಂತೆಯಾಗಿದ್ದೇವೆ ಎನ್ನುವಂತಿಲ್ಲ ಎಂಬುದು ಈ ಕಾದಂಬರಿಯ ಪ್ರಬಂಧಧ್ವನಿಯಾಗಿದೆ. ಹೀಗಾಗಿ ಈ ಕೃತಿಯ ಸಂಘರ್ಷದ ನೆಲೆಗಳು

ಬಹುಮುಖಿಯಾಗಿವೆ. ಹಿಂದೂ ಸಮಾಜದ ಇಕ್ಕಟ್ಟುಗಳನ್ನು ಕಾದಂಬರಿ ಮರೆಮಾಚುವುದಿಲ್ಲ. ಆದರೆ ಮಿಶನರಿಗಳ ಮತಾಂತರದ ಚಟುವಟಿಕೆಗಳನ್ನು ಒಪ್ಪುವುದಿಲ್ಲ. ಕೊಡಗಿನ ಪರಿಸ್ಥಿತಿ ಚೆನ್ನಾಗಿಲ್ಲ. ಆದರೆ ಅದಕ್ಕೆ ವಸಾಹತೀಕರಣವು ಒಂದು ಪರಿಹಾರವಲ್ಲ ಎಂಬ ಧ್ವನಿ ಕಾದಂಬರಿಯಿಂದ ಹೊರಡುತ್ತದೆ. ದೇಶೀಯರೇ ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು; ಇಲ್ಲವಾದಲ್ಲಿ ಹೊರಗಿನ ಶಕ್ತಿಗಳು ಈ ಪರಿಸ್ಥಿತಿಯ ದುರ್ಲಾಭವನ್ನು ಪಡೆದುಕೊಳ್ಳುವರು ಎಂಬ ಎಚ್ಚರಿಕೆಯನ್ನೂ ಈ ಕಾದಂಬರಿ ನೀಡುತ್ತದೆ. ಹಾಗಾಗಿ ಚಿಕವೀರ ರಾಜೇಂದ್ರ ಗತಕಾಲದ ಇತಿಹಾಸವನ್ನು ಕೇವಲ ಕತೆಯ ರೂಪದಲ್ಲಿ ನಿರೂಪಿಸುವ ಕೃತಿಯಲ್ಲ. ವಸಾಹತುಶಾಹಿಗಳ ರಾಜಕೀಯ ಆಳ್ವಿಕೆಯಿಂದ ಅದೇ ತಾನೇ ಮುಕ್ತಗೊಂಡ ಸಮುದಾಯವೊಂದಕ್ಕೆ ತನ್ನ ಇತಿಹಾಸವನ್ನು ನೆನಪಿಸುವ, ಹೊಸ ರಾಜಕೀಯ ಸನ್ನಿವೇಶದಲ್ಲಿ ರೂಢಿಸಿಕೊಳ್ಳಬೇಕಾದ ಮೌಲ್ಯಗಳನ್ನು ಸೂಚಿಸುವ ಮಹತ್ವಾಕಾಂಕ್ಷೆ ಈ ಕಾದಂಬರಿಯಲ್ಲಿದೆ. ನವವಸಾಹತುಶಾಹಿ, ನವಸಾಮ್ರಾಜ್ಯಶಾಹಿ ಸಂದರ್ಭದ ಈ ನಮ್ಮ ಕಾಲಕ್ಕೆ ಮಾಸ್ತಿಯವರ ಕಾದಂಬರಿ ಹಿಂದೆಂದಿಗಿಂತ ಹೆಚ್ಚು ಪ್ರಸ್ತುತವಾಗಿದೆ ಎನಿಸುತ್ತದೆ. ವಸಾಹತುಶಾಹಿ ಅನುಭವ ನಿರ್ವಹಣೆಯನ್ನು ಮಾಡುವ ಜಗತ್ತಿನ ಅತ್ಯುತ್ತಮ ಕಾದಂಬರಿಗಳಲ್ಲಿ ಇದೂ ಒಂದು ಎಂದು ನಿಸ್ಸಂದೇಹವಾಗಿ ಹೇಳಬಹುದು.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯೂ ವಿಶ್ವದ ಶ್ರೇಷ್ಠ ಕೃತಿಗಳಲ್ಲಿ ಒಂದು. ಹತ್ತೊಂಭತ್ತನೆಯ ಶತಮಾನದ ಕೊನೆಯ ದಶಕಗಳ ಕಾಲಾವಧಿಯಲ್ಲಿ ಮಲೆನಾಡಿನ ಗ್ರಾಮೀಣ ಬದುಕಿನಲ್ಲಿ ಕಂಡುಬಂದ ಪಲ್ಲಟಗಳ ಕಥನ ಇಲ್ಲಿದೆ. ಮೇಲುನೋಟಕ್ಕೆ ನಿಶ್ಚಲವೆಂದು ತೋರುವ ಬದುಕಿನ ಒಳಗೇ ಅಂತರ್ಗತವಾಗಿರುವ ವರ್ಣಸಂಘರ್ಷ ಮತ್ತು ವರ್ಗಸಂಘರ್ಷ ಎರಡನ್ನೂ ಕಾದಂಬರಿ ಸ್ಪರ್ಶಿಸುತ್ತದೆ. ಒಂದು ಕಾಲದೇಶದ ಜೀವನಕ್ರಮದೊಳಗೇ ಇರುವ ಊಳಿಗಮಾನ್ಯ ಆರ್ಥಿಕವ್ಯವಸ್ಥೆ, ಜಾತಿಯ ಬಿಕ್ಕಟ್ಟುಗಳು, ಅಸಮಾನತೆ-ಶೋಷಣೆಗಳ ಹಲವು ರೂಪಗಳನ್ನು ಕಾದಂಬರಿ ದಟ್ಟವಾಗಿ ಚಿತ್ರಿಸುತ್ತದೆ. ಆದರೆ ಇದಕ್ಕೆ ವಸಾಹತುಶಾಹಿಯು ಒಂದು ಪರಿಹಾರವಲ್ಲ ಎಂದು ಕಾದಂಬರಿ ಪ್ರತಿಪಾದಿಸುತ್ತದೆ. ಮಿಶನರಿಗಳ ಮತಾಂತರದ ಚಟುವಟಿಕೆಗಳನ್ನು ಈ ಕಾದಂಬರಿಯು ಉಗ್ರವಾಗಿ ಟೀಕಿಸುತ್ತದೆ. ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸ್ವಪ್ನಬೇಕೆ? ಎಂದು ಕೇಳುವ ಕಾದಂಬರಿಯು, ದಿವಾನೆ ಕಾಡಾನೆಯನ್ನು ಆಕರ್ಷಿಸಿ ಖೆಡ್ಡಾಕ್ಕೆ ಕೆಡಹಲು ಪ್ರಯತ್ನಿಸುವಂತೆ ಪಾದ್ರಿ ಜೀವರತ್ನಯ್ಯ ಚಿನ್ನಪ್ಪನ ಕಾಯಿಲೆಯ ಕುರಿತು ಆಚಾರ ಮತ್ತು ಮೂಢನಂಬಿಕೆಗಳ ಭೂಮಿಯನ್ನು ಸಡಿಲಗೊಳಿಸಿ ಅಗೆದು ತೆಗೆದು ಕ್ರೈಸ್ತ ಮತದ ಬೀಜಾಂಕುರವನ್ನು ಮೆಲ್ಲಗೆ ನಿರ್ಮಿಸುತ್ತಿದ್ದನು ಎಂದು ನಿರೂಪಿಸಿ ಸ್ವ ಮತ್ತು ಅನ್ಯ ಎರಡನ್ನೂ ಏಕಕಾಲದಲ್ಲಿ ವಿಮರ್ಶೆಗೆ ಒಳಪಡಿಸುತ್ತದೆ. ಮಲೆನಾಡನ್ನು ಪ್ರವೇಶಿಸುತ್ತಿದ್ದ ಆಧುನಿಕತೆಯನ್ನೂ ಅದು ಹಿತವಾಗಿ ವಿಶ್ಲೇಷಿಸುತ್ತದೆ. ದೇವಯ್ಯ ಮತ್ತು ಮುಕುಂದಯ್ಯ ಇವರ ನಡುವೆ ವ್ಯತ್ಯಾಸವನ್ನು ಹೇಳುವ ಕಾದಂಬರಿಯು ತನ್ನ ಆದ್ಯತೆಯನ್ನು ಪ್ರತಿಪಾದಿಸುತ್ತದೆ. ಮಾಸ್ತಿಯವರ ಕಾದಂಬರಿಯು ಮಾಡುವಂತೆ ಇಲ್ಲಿನ ಮತಧರ್ಮವನ್ನು ಟೀಕಿಸುವಂತೆ ಹೊಸದಾಗಿ ಬಂದ ಮತಧರ್ಮವನ್ನೂ ಲೇವಡಿ ಮಾಡುತ್ತದೆ: ಯೇಸುಕ್ರಿಸ್ತನು ಮಾಡಿದ ಮಹಾಮಹತ್ತರವಾದ ಪವಾಡಗಳಲ್ಲಿ ಅವನಿಗೆ ಆದರಶ್ರದ್ಧೆಯಿದ್ದರೂ, ಕ್ರೈಸ್ತಪಾದ್ರಿಗಳಲ್ಲಿ ತೋರಿ ಬರುವ ಆ ಪವಾಡ ಶಕ್ತಿ ಎಂದಿಗೂ ಸೈತಾನನದೇ ಎಂಬುದು ಅವರ ಅಧಿಕಾರಿಕ ಮತಶ್ರದ್ಧೆಯಾಗಿತ್ತು ಎಂದು ನಿರೂಪಿಸುತ್ತ. ಆಂತರಿಕ ದೌರ್ಬಲ್ಯ ಮತ್ತು ಬಾಹ್ಯಶಕ್ತಿಗಳ ಆಕ್ರಮಣ ಎರಡೂ ಸಂಗಮಿಸಿದಾಗ ವಸಾಹತೀಕರಣದ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಎಂಬ ವೈಚಾರಿಕ ಆಕೃತಿಯೊಂದನ್ನು ಈ ಕಾದಂಬರಿಯೂ ಅನಾವರಣಗೊಳಿಸುತ್ತದೆ.

ಕನ್ನಡ ಮನಸ್ಸಿನ ಸಂಘರ್ಷ ಮತ್ತು ಸಾಮರಸ್ಯದ ನೆಲೆಗಳನ್ನು ಅಧ್ಯಯನ ಮಾಡಬಯಸುವವರಿಗೆ ಕುವೆಂಪು ಅವರ ಈ ಕಾದಂಬರಿಯು ಒಂದು ಪ್ರಾಥಮಿಕ, ಪ್ರಾತಿನಿಧಿಕ ಆಕರವಾಗಿ ಒದಗಿಬರುತ್ತದೆ.

ಬರ್ಕ್ ಬಳಗದ ವಿಮರ್ಶಕರಾಗಿ ಕುವೆಂಪು ಅವರಿಗೆ ನಮ್ಮ ಸಂಸ್ಕೃತಿ-ಸಮಾಜಗಳೊಂದಿಗೆ ಯಾವತ್ತೂ ಒಂದು ಜಗಳ ಇದ್ದೇ ಇದೆ. ಆದರೆ ಈ ಕಾದಂಬರಿಯಲ್ಲಿ ಗಮನಿಸಬಹುದಾದಂತೆ ಅವರು ತಾವು ಚಿತ್ರಿಸುವ ಗ್ರಾಮಸಮುದಾಯವನ್ನು ಕೇವಲ ಅವಿಚಾರಿಗಳ, ಮೂಢರ ಗುಂಪನ್ನಾಗಿ ಪರಿಗಣಿಸುವುದಿಲ್ಲ. ತಾನು ಚಿತ್ರಿಸುವ ಸಮುದಾಯದ ಬಹುತ್ವವನ್ನೂ, ವ್ಯಕ್ತಿಗಳ ವಿಕಾಸದ ಸಾಧ್ಯತೆಯನ್ನೂ ಅವರು ಕಾಣಿಸುತ್ತಾರೆ. ಅವುಗಳ ಸಹಜ ಅಭಿವ್ಯಕ್ತಿಗೆ ತೊಡಕಾಗಿರುವ ಆಂತರಿಕ ತೊಡಕುಗಳನ್ನೂ ಅವರು ಮನಗಾಣಿಸುತ್ತಾರೆ. ಹಾಗಾಗಿ ಪಾಶ್ಚಾತ್ಯ ನಾಗರಿಕತೆಯ ಆಕರ್ಷಣೆ ಇಲ್ಲಿ ಕಾಣುವುದಿಲ್ಲ. ನಮ್ಮ ನಾಗರಿಕತೆಗೆ ಒಂದು ಪರಿಹಾರವೆಂಬಂತೆ ಅಥವಾ ಪರ್ಯಾಯವೆಂಬಂತೆ ಅವರು ಆ ನಾಗರಿಕತೆಯನ್ನು ನೋಡುವುದಿಲ್ಲ. ಅದೇ ವೇಳೆಗೆ ಕುವೆಂಪು ಅವರು ಪಾಶ್ಚಾತ್ಯಮೂಲವಾದದ್ದನ್ನೆಲ್ಲ ಏಕಮುಖವಾಗಿ ತಿರಸ್ಕರಿಸುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಇಂಗ್ಲಿಷ್ ಭಾಷೆ, ಪಾಶ್ಚಾತ್ಯ ಸಾಹಿತ್ಯ, ತತ್ವಶಾಸ್ತ್ರ, ಮನೋವಿಜ್ಞಾನ, ಉದಾರವಾದ ಮತ್ತು ವಿಜ್ಞಾನಗಳು ಕುವೆಂಪು ಸಂವೇದನೆಯನ್ನು ರೂಪಿಸಿರುವ ಅಂಶಗಳಲ್ಲಿ ಮುಖ್ಯವಾದವು. ಅಂದರೆ ಇತಿಹಾಸದ ಒಂದು ಘಟ್ಟದಲ್ಲಿ ಪಾಶ್ಚಾತ್ಯರಿಗೆ ಹಲವು ನೆಲೆಗಳಲ್ಲಿ ಮುಖಾಮುಖಿಯಾದಾಗ ಯಾವುದನ್ನು ನಾವು ತಿರಸ್ಕರಿಸಬೇಕು, ಯಾವುದನ್ನು ಸ್ವೀಕರಿಸಬೇಕು ಎಂಬ ಆಯ್ಕೆಯ ಪ್ರಕ್ರಿಯೆಯೊಂದು ಕುವೆಂಪು ಕಾದಂಬರಿಯಲ್ಲಿ ನಡೆದಿದೆ. ಅಷ್ಟೇ ಅಲ್ಲ, ಈ ಆಯ್ಕೆಯು ನಮ್ಮ ಅಗತ್ಯ, ಆದ್ಯತೆಗಳನ್ನು ಆಧರಿಸಿರಬೇಕು ಎಂಬ ವಿವೇಕವನ್ನೂ ಕುವೆಂಪು ಕೃತಿ ಸೂಚಿಸುವಂತಿದೆ. ಮತಾಂತರ ಚಟುವಟಿಕೆಯು ಸಾಮಾಜಿಕ ಜೀವನವನ್ನು ಉತ್ತಮಗೊಳಿಸಲು ಮಾಡುವ ಕಾರ್ಯ ಎಂದು ಟೀಕಿಸುವ ಮುಕುಂದಯ್ಯನಿಗೆ ಮಿಶನರಿಗಳು ಸ್ಥಾಪಿಸುವ ಸ್ಕೂಲು, ಆಸ್ಪತ್ರೆಗಳ ಬಗ್ಗೆ ತಕರಾರೇನೂ ಇಲ್ಲ ಎಂಬುದನ್ನು ಗಮನಿಸಿದರೆ ಈ ಕಾದಂಬರಿಯ ಸಂಘರ್ಷ-ಸಾಮರಸ್ಯದ ಒಂದು ಮುಖ್ಯ ಮಾದರಿ ಸ್ಪಷ್ಟವಾಗುತ್ತದೆ. ಸಂಘರ್ಷದ ಬದಲು ಅನುಸಂಧಾನ, ಸುಧಾರಣೆಯ ಬದಲು ಸಾಮರಸ್ಯದ ಅಗತ್ಯವನ್ನು ಕುವೆಂಪು ಕಾದಂಬರಿ ಪ್ರತಿಪಾದಿಸುತ್ತಿರುವ ಹಾಗೆ ಕಾಣುತ್ತದೆ.

ವಸಾಹತೀಕರಣದ ಸ್ವರೂಪ ಮತ್ತು ಪರಿಣಾಮಗಳನ್ನು ಸಾಂಕೇತಿಕವಾಗಿ ಚಿತ್ರಿಸುವ ಕಂಬಾರರ ಹೇಳತೇನ ಕೇಳ ಏಕೀಕರಣೋತ್ತರ ಕನ್ನಡ ಸಾಹಿತ್ಯದ ಮತ್ತೊಂದು ಮುಖ್ಯ ಸಾಂಸ್ಕೃತಿಕ ಪಠ್ಯ. ಕಂಬಾರರ ಅಭಿವ್ಯಕ್ತಿ ವಿಧಾನವು ಕನ್ನಡದ ಇತರ ಪ್ರಮುಖ ಲೇಖಕರ ವಿಧಾನಕ್ಕಿಂತ ಭಿನ್ನವಾದದ್ದು ಎಂದು ಇಲ್ಲಿಯೇ ಗುರುತಿಸಿಕೊಳ್ಳಬಹುದು. ಪುರಾಣಗಳ ಮೂಲಕ ಇತಿಹಾಸವನ್ನು ಪ್ರವೇಶಿಸುವ ಕಂಬಾರ, ಆಧುನಿಕ ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟಿರುವ ವೈವಿಧ್ಯ ಗಮನಾರ್ಹವಾದದ್ದು. ಪಾಶ್ಚಾತ್ಯ ಸಾಹಿತ್ಯದ ರಾಚನಿಕ ಕ್ರಮಗಳನ್ನೂ, ಭಾರತದ ಅಧಿಕೃತ ಪುರಾಣಗಳನ್ನೂ ದೂರವಿಟ್ಟು ಕಂಬಾರರು ಜಾನಪದ ಸ್ಮೃತಿಗಳಿಗೆ, ಪುರಾಣಗಳಿಗೆ, ಕಥನದ ಮಾದರಿಗಳಿಗೆ ಎದುರಾಗಿದ್ದಾರೆ. ಅವರು ಪುರಾಣಗಳನ್ನು ಬಳಸುವವರಲ್ಲ; ಪುರಾಣಗಳನ್ನು ಕಟ್ಟುವವರು. ಹೇಳತೇನ ಕೇಳದಲ್ಲಿ ಕಂಬಾರರು ತಮ್ಮದೇ ಆದ ಪುರಾಣಲೋಕವೊಂದನ್ನು ಕಟ್ಟಿಕೊಂಡರು. ಊರ ಗೌಡನು ಕಾಡಿಗೆ ಹೋಗಿದ್ದಾಗ ರಾಕ್ಷಸನೊಬ್ಬನು ಹುಲಿಯ ವೇಷ ಧರಿಸಿ ಗೌಡನನ್ನು ಕೊಂದು ಅವನ ಹೆಣವನ್ನು ಪಾಳುಭಾವಿಯೊಂದಕ್ಕೆ ಎಸೆದು ಗೌಡನ ವೇಷ ತೊಟ್ಟು ಊರನ್ನು ಪ್ರವೇಶಿಸಿ ಗೌಡನ ಹೆಂಡತಿಯೊಂದಿಗೆ ಸಂಸಾರವನ್ನು ನಡೆಸುತ್ತಾನೆ. ಇದರಿಂದ ಗೌಡನ ಮಗನು ವಿಹ್ವಲನಾಗುತ್ತಾನೆ. ಗೌಡನ ವೇಷದ ರಾಕ್ಷಸನ ಆಗಮನದಿಂದಾದ ಪರಿಣಾಮಗಳನ್ನು ಕಂಬಾರರ ಕಾವ್ಯ ದಟ್ಟವಾದ ವಿವರಗಳಲ್ಲಿ ಕಟ್ಟಿಕೊಡುತ್ತದೆ. ಈ ಹೊಸ ಗೌಡನು ಹಳೆಯ ಗೌಡನ ಹಾಗೆಯೇ ಕಾಣುತ್ತಾನೆ ಮತ್ತು ಅವನ ಹಾಗೆಯೇ ಮಾತನಾಡುತ್ತಾನೆ ಎಂಬುದು ಮುಖ್ಯವಾದ ಸಂಗತಿ. ಈ ಹೊಸ ದಾಂಪತ್ಯದಿಂದ ಒಬ್ಬ ಮಗ ಹುಟ್ಟುತ್ತಾನೆ. ಅವನು ಬೇರೆ ಥರದ ಸವಾಲುಗಳನ್ನು ಎದುರಿಸುತ್ತಾನೆ. ಇನ್ನೂ ಒಂದು ಮುಖ್ಯ ಘಟನೆ ಈ ಕಾವ್ಯದಲ್ಲಿ ನಡೆಯುತ್ತದೆ. ಹಸಮುಕ್ಕ

ಸಲುವಾಗಿ ಗರಡೀಯ ಮನಿ ಕೆಡಿವಿ/ಹೊಸ ಸಾಲಿ ಕಟ್ಟೋಣ ಎಂದು ಗೌಡ ಹೇಳಿದಾಗ ಊರವರು ಸಂಭ್ರಮದಿಂದ ಒಪ್ಪಿಗೆಕೊಡುತ್ತಾರೆ. ಮನೆಗೊಂದು ಆಳು ಕೈಹಚ್ಚಿ ಶಾಲೆಯನ್ನು ಕಟ್ಟಲು ಮುಂದಾಗುತ್ತಾರೆ. ಶಾಲೆ ನಿರ್ಮಿಸಲು ಆಲದ ಬೇರ ಬಂದು ತೊಡರ್ಯಾವು ತೊಡಕ್ಯಾವು; ಆಲದಮರವನ್ನು ಕಡಿದು ಆ ಜಾಗದಲಿ ಶಾಲೆಯನ್ನು ಕಟ್ಟುತ್ತಾರೆ. ಇದರ ಸಾಂಕೇತಿಕ ಆಯಾಮವನ್ನು ವಿವರಿಸುವಾಗತ್ಯವಿಲ್ಲ. ತತ್‌ಕ್ಷಣದ ಪರಿಣಾಮವೆಂಬಂತೆ ಮರ ಕಡಿಯುವುದು ಬೇಡವೆಂದು ಕೈಮುಗಿದು ಬೇಡಿಕೊಂಡ ಕರಿಯಜ್ಜ ಶಾಲೆಯ ಪೂಜೆಯ ದಿನವೇ ತೀರಿಕೊಳ್ಳುತ್ತಾನೆ. ವಸಾಹತುಶಾಹಿ ಆಕ್ರಮಣ ಮತ್ತು ಆಧುನಿಕತೆಯ ಆಗಮನದ ಬಹುಮುಖಿ ಪರಿಣಾಮಗಳನ್ನು ಆಧುನಿಕ ಕನ್ನಡ ಸಾಹಿತ್ಯವು ಗಾಢವಾಗಿ ಕಥಿಸಿಕೊಂಡು ಬಂದಿದೆ. ಈ ಪರಿಣಾಮಗಳನ್ನು ಕಂಬಾರರು ತುಸು ಭಿನ್ನ ರೀತಿಯಲ್ಲಿ ಸಮಸ್ಯಾತ್ಮಕಗೊಳಿಸಿದ್ದಾರೆ. ಅಕ್ಷರಲೋಕದ ಧಾಳಿಯಿಂದ ಜಾನಪದ ಲೋಕ ನಾಶವಾಯಿತು ಎಂಬುದು ಕಂಬಾರರ ಒಂದು ಮುಖ್ಯ ಅವಲೋಕನ. ಅವರ ಸುಪ್ರಸಿದ್ಧ ಕವನ ಜನಪದ ಕಥೆಗಳ ರಾಕ್ಷಸದಲ್ಲಿ ಇದು ಇನ್ನೂ ಸ್ಪಷ್ಟವಾಗಿ ಮೂಡಿಬರುತ್ತದೆ. ಹಾಗೆಯೇ ಕರಿಮಾಯಿಯ ಲೋಕ ನಾಶವಾಗುವುದು ಆಧುನಿಕ ಪ್ರಜಾಪ್ರಭುತ್ವದ ಆಗಮನದಿಂದ. ಮೇಲು ನೋಟಕ್ಕೆ ಪ್ರತಿಗಾಮಿ ಎನ್ನಿಸುವ ಈ ನೋಟ ರಾಜಕೀಯವಾಗಿ ಸರಿ ಅನ್ನಿಸದಿದ್ದರೂ ಕಂಬಾರರ ಕೃತಿಗಳು ನಮ್ಮ ಪ್ರಧಾನಧಾರೆಯ ಗ್ರಹಿಕೆಗಳಿಗೆ ಮತ್ತು ಚಿಂತನೆಗಳಿಗೆ ಸವಾಲು ಹಾಕುವಂತಿವೆ. ಆದರೆ ಕಂಬಾರರು ಜಾನಪದ ಕವಿಸಮಯಗಳಲ್ಲೇ ಮುಳುಗಿಹೋಗಿರುವ ಲೇಖಕರಲ್ಲ. ಗ್ರಾಮೀಣ ಬದುಕಿನ ಎಲ್ಲ ಚೆಲುವನ್ನು ಅವರು ಸಮೃದ್ಧವಾಗಿ ಚಿತ್ರಿಸಿದ್ದಾರೆ. ಅಲ್ಲಿನ ಜೀವಶಕ್ತಿಯನ್ನು ಆರಾಧಿಸುವ ಹಲವು ಸಾರ್ಥಕ ಕೃತಿಗಳನ್ನು ಅವರು ರಚಿಸಿದ್ದಾರೆ. ಆದರೆ ಅಲ್ಲಿಯ ಬದುಕಿನಲ್ಲೇ ಅಂತರ್ಗತವಾಗಿರುವ ಕ್ರೌರ್ಯ, ಹಿಂಸೆ, ಅಸಮಾನತೆ, ಶೋಷಣೆಗಳ ಭೀಕರ ಚಿತ್ರಗಳೂ ಅವರ ಸಾಹಿತ್ಯದಲ್ಲಿ ದಾಖಲಾಗಿವೆ. ಅವರ ಅನೇಕ ಮುಖ್ಯಕೃತಿಗಳಾದ ಜೋಕುಮಾರಸ್ವಾಮಿ, ಜೈಸಿದ ನಾಯಕ, ಕರಿಮಾಯಿ, ಸಿಂಗಾರೆವ್ವ ಮತ್ತು ಅರಮನೆ, ನಾಯಿ ಕಥೆ, ತುಕ್ರನ ಕನಸು ಮುಂತಾದವುಗಳಲ್ಲಿ ಜಮೀನ್ದಾರಿ ವ್ಯವಸ್ಥೆಯ ಕರಾಳ ಮುಖಗಳ ವರ್ಣನವೇ ಇದೆ. ಮನುಷ್ಯನ ಪಜ್ಞೆಯಲ್ಲಿ, ಸಾಮಾಜಿಕ ಸಂಬಂಧಗಳಲ್ಲಿ, ಒಟ್ಟಾರೆ ಮನುಷ್ಯನ ನಾಗರೀಕತೆಯಲ್ಲಿ ಕಂಡುಬರುವ ಒಡಕುಗಳನ್ನು ಕಂಬಾರರ ಸಾಹಿತ್ಯ ಗಾಢವಾಗಿ ಧ್ವನಿಸಿದೆ.

ವಸಾಹತುಶಾಹಿ ತಂದ ಆಧುನಿಕತೆಯ ಬಹುಮುಖಿ ಪರಿಣಾಮಗಳನ್ನು ಅವುಗಳ ಸಾಧ್ಯತೆ - ವೈರುಧ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಮಾತ್ರ ನಮಗೆ ಕನ್ನಡ ಮನಸ್ಸಿನ ಸಂಘರ್ಷ - ಸಾಮರಸ್ಯಗಳ ಕಲ್ಪನೆ ಸ್ಪಷ್ಟವಾಗುವುದು. ಉದಾಹರಣೆಗೆ ತೇಜಸ್ವಿ ಅವರ ಕತೆಯಲ್ಲಿ ಅಬಚೂರಿಗೆ ಪೋಸ್ಟಾಫೀಸು ಬಂದು ಬೋಬಣ್ಣನ ವೈಯಕ್ತಿಕ ಜೀವನದಲ್ಲಿ ಬಿರುಗಾಳಿಯೇ ಏಳುತ್ತದೆ. ಹಳ್ಳಿಗೆ ಪಟ್ಟಣದ ಜೀವನದ ಹೊಸ ವಸ್ತುಗಳ ಪ್ರವೇಶದಿಂದಾಗಿ ಅಲನಹಳ್ಳಿ ಕೃಷ್ಣರ ಗಂಡಭೇರುಂಡನ ಬಾಳು ದುರಂತ ಅಂತ್ಯವನ್ನು ಕಾಣುತ್ತದೆ. ವೈದೇಹಿ ಅವರ ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಕತೆಯಲ್ಲಿ ಸಿನಿಮಾ ಟಾಕೀಸನ್ನು ಕಟ್ಟಲು ಧೂಪದ ಮರವನ್ನು ಕಡಿಯಬೇಕಾಗುತ್ತದೆ. ಆ ಊರಿನ ಸಾಮಾನ್ಯ ಮಹಿಳೆಯರ ಪ್ರಜ್ಞೆಯಲ್ಲಿ ನಡೆಯುವ ವೈದೇಹಿ ಕತೆ ಈ ಸಂಗತಿಯನ್ನು ಹೀಗೆ ನಿರ್ವಹಿಸುತ್ತದೆ: ಒಂದು ರೀತಿಯಲ್ಲಿ ಬಾಯಿಬಾರದ ಹೆಳಕೊಳ್ಳುತ್ತೆ ಶಾಂತವಾಗಿ, ನಿಯತಿಯಂತೆ ಇದ್ದ ಊರು ತುಸುವಾದರೂ ಅದುರಿದ್ದು ಮತ್ತು ಹೆಂಗಳೆಯರು ಸ್ವಂತ ಕಾಲುಗಳಿಂದ ಹೆಜ್ಜೆಯಿಡಲಾರಂಭಿಸಿದ್ದು ಊರ ನಡುವಿನ ಧೂಪದ ಮರದ ದಪ್ಪ ಕಾಂಡಕ್ಕೆ ಕೊಡಲಿ ಬಿದ್ದು ಬಿದ್ದ ಮೇಲೆಯೇ. ಈ ಪೆಟ್ಟು ಊರಿನ ಹೆಂಗಸರ ಪ್ರಪಂಚದಲ್ಲಿ ಸಣ್ಣಮಟ್ಟಿನ ಕ್ರಾಂತಿಯನ್ನೇ ಮಾಡಿತೆನ್ನಬಾರದೇ? ಆ ಲೋಕದಲ್ಲಿ ಎದ್ದ ಅಲೆ, ಚಿಕ್ಕದಾದರೂ ಅಲೆ ಮಾತ್ರ ಹೌದಷ್ಟೆ...ಆ ಧೂಪದ ಮರವನ್ನು ನೋಡಿನೋಡಿ ಸಾಕಾಗಿತ್ತು ಎಂದು ತಿಳಿದವರೇ ಅದನ್ನು ಕಡಿಯಲು ತೊಡಗಿದಾಗ. ದೇವನೂರಮಹಾದೇವ ಅವರ ದ್ಯಾವನೂರು ಒಂದು ಕತೆಯಲ್ಲಿ ಊರಿಗೆ

ಜಾರಾ ದೋಣಿ ಬಂದದ್ದೇ ನೆಪವಾಗಿ ಅಲ್ಲಿಯ ದಲಿತ ಹುಡುಗರು ಪಟೇಲರನ್ನೇ ಪಳಗಿಸುವ, ಅಂದರೆ ಬ್ರಾಹ್ಮಣ್ಯದ ಪ್ರಭುತ್ವದ ಕೇಂದ್ರಕ್ಕೇ ಸವಾಲು ಹಾಕುವ ಪ್ರಸಂಗ ದಾಖಲಾಗುತ್ತದೆ. ಹೀಗೆ ಹೊಸತರ ಆಗಮನವನ್ನು ಒಂದು ಜನಸಮುದಾಯದ ಮೇಲೆ ಮಾಡುವ ಪರಿಣಾಮಗಳನ್ನು ಅವುಗಳ ವಿಭಿನ್ನ ವೈವಿಧ್ಯದಲ್ಲಿ ಗಮನಿಸಿರುವ ಆಧುನಿಕ ಕನ್ನಡ ಸಾಹಿತ್ಯವು ಒಂದು ರೂಪಕಾತ್ಮಕ ಸಾಂಸ್ಕೃತಿಕ ಚರಿತ್ರೆಯನ್ನೇ ಲೇಖಿಸುತ್ತಿರುವ ಹಾಗೆ ಕಾಣುತ್ತದೆ.

ಕೆಲವೇ ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ ಕಂಬಾರರ ಬಹುಪಾಲು ಕೃತಿಗಳ ಆವರಣ ಶಿವಾಪುರವೇ. ಕಂಬಾರರ ಸಾಹಿತ್ಯದಲ್ಲಿ ಅದೊಂದು ನಿರ್ದಿಷ್ಟ, ವಾಸ್ತವಿಕ ಭೌಗೋಳಿಕ ಪ್ರದೇಶವಲ್ಲ. ಅದು ಒಂದು ಪಕ್ಕಾ ಬೆಳಗಾವಿ ಜಿಲ್ಲೆಯಲ್ಲಿನ ಒಂದು ಹಳ್ಳಿ ಎಂದು ಸೂಚಿತವಾದರೂ, ಯಾವುದೇ ಭೂಪಟದಲ್ಲಿ ಕಾಣಸಿಗದಂಥದ್ದು. ಅದೊಂದು ಕಾಲ್ಪನಿಕ ಗ್ರಾಮ. ಅದಕ್ಕೆ ತನ್ನದೇ ಪುರಾಣವೂ ಇದೆ. ಇತಿಹಾಸವೂ ಇದೆ. ವರ್ತಮಾನವೂ ಇದೆ. ಅದು ಕಂಬಾರರ ಸೊತ್ತೂ ಹೌದು. ಅವರ ಮುಟ್ಟಿಸಿಕೊಂಡಿದ್ದೂ ಹೌದು. ತಮ್ಮ ಎಲ್ಲ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆಧ್ಯಾತ್ಮಿಕ ಶೋಧಗಳಿಗೆ ಕಂಬಾರರು ಶಿವಾಪುರವನ್ನು ಒಂದು ಆವರಣವನ್ನಾಗಿ ಕಲ್ಪಿಸಿಕೊಂಡಿದ್ದಾರೆ. ಆರ್. ಕೆ. ನಾರಾಯಣರ ಮಾಲ್ಗುಡಿಯೂ ಇಂಥ ಒಂದು ಕಾಲ್ಪನಿಕ ಊರೇ ಆಗಿದ್ದರೂ ಅದಕ್ಕೆ ಶಿವಾಪುರಕ್ಕಿರುವಂಥ ಬಹು ಸ್ತರೀಯತೆಗಳಾಗಲೀ, ಸಮೃದ್ಧವಾದ ಪುರಾಣವಾಗಲೀ ಇಲ್ಲ. ಆದರೆ ಕಂಬಾರರ ಶಿವಾಪುರ ಒಂದು ಭೌತಿಕ ಪ್ರದೇಶಕ್ಕಿಂತ ಹೆಚ್ಚಿನದು. ವಾಸ್ತವ ಲೋಕದ ಅನೇಕ ಮಿತಿಗಳನ್ನೂ ಒಂದು ಕಾಲ್ಪನಿಕ ಜಗತ್ತನ್ನು ಸೃಷ್ಟಿಸಿ ಸಂಘರ್ಷ-ಸಾಮರಸ್ಯಗಳ ಜಟಿಲತೆಯನ್ನು ನಿಜಕಾಲ ನಿಯಮಗಳಿಂದ ಒಂದು ಅಂತರದಲ್ಲಿ ಕಾಯ್ದುಕೊಂಡು ನೋಡುವ ಅವಕಾಶ ಮತ್ತು ಸ್ವಾತಂತ್ರ್ಯಗಳನ್ನು ಕಂಬಾರರು ಸೃಷ್ಟಿಸಿಕೊಂಡಿದ್ದಾರೆ. ಚಕೋರಿ ಮತ್ತು ಶಿಖರ ಸೂರ್ಯಗಳಲ್ಲಿ ವಾಸ್ತವಲೋಕಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಫ್ಯಾಂಟಸಿಯ ಜಗತ್ತನ್ನು ಸೃಷ್ಟಿಸಿ ಕಂಬಾರರು ತಮ್ಮ ಶೋಧಕ್ಕೆ ಮುಂದಾಗಿದ್ದಾರೆ. ನವೋದಯದಿಂದ ನವ್ಯದವರೆಗಿನ ಕನ್ನಡ ಲೇಖಕರ ಕೇಂದ್ರದಲ್ಲಿ ಒಂದು ಬಗೆಯಲ್ಲಿ ಕಾಣಿಸಿಕೊಂಡಿದ್ದರೆ ನವೋದಯೋತ್ತರ ಸಂದರ್ಭವನ್ನು ಕಂಬಾರರ ಕೃತಿಗಳು ಈಗ ತುಂಬ ಭಿನ್ನವಾದ ರೀತಿಯಲ್ಲಿ ಗ್ರಹಿಸಿ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಿವೆ. ವಸಾಹತುಶಾಹಿಯಿಂದ ನಮ್ಮ ಆಲೋಚನಾ ಕ್ರಮಗಳು, ಗ್ರಹಿಕೆಯ ಮತ್ತು ಅಭಿವ್ಯಕ್ತಿಯ ಕ್ರಮಗಳು, ನಮ್ಮ ಸ್ಥಳೀಯ ಜ್ಞಾನ ಪರಂಪರೆಗಳು, ಸ್ಮೃತಿಗಳು ಕಣ್ಮರೆಯಾಗುತ್ತಿರುವ ಪರಿಯನ್ನು ಕಂಬಾರರ ಕೃತಿಗಳು ಭಿನ್ನ ನೆಲೆಯಲ್ಲಿ, ವಿಸ್ತಾರವಾಗಿ ಕಂಡರಿಸುತ್ತಿವೆ. ಚಕೋರಿ, ಶಿಖರ ಸೂರ್ಯದಂಥ ಕೃತಿಗಳ ಹಿಂದಿನ ಪ್ರೇರಣೆ ಸ್ವಲ್ಪಮಟ್ಟಿಗೆ ಇದೇ. ವಾಸ್ತವ ಲೋಕದಿಂದ ತುಂಬ ದೂರವೇ ಇರುವ ತಮ್ಮ ಪುರಾಣಗಳ ಸಮೃದ್ಧ ವಿವರ-ವರ್ಣನೆ-ಚಿತ್ರಣಗಳಲ್ಲಿಯೇ ನಿರ್ಬಂಧಿಸುವ ಮಹಾಕಾವ್ಯ ಸದೃಶ ಈ ಬರವಣಿಗೆಗಳಲ್ಲಿ ಕಂಬಾರರು ಮನುಷ್ಯನ ಮನಸ್ಸಿನ ಮೂಲ ಹಂಬಲಗಳನ್ನೂ ಅವು ಎರಡು ಭಿನ್ನ ನಾಗರಿಕತೆಗಳ ಮಾದರಿಗಳಾಗಿ ಬಿಡುಗಡೆಗೊಳ್ಳಬಹುದಾದ ಸಾಧ್ಯತೆಗಳನ್ನೂ ಶೋಧಿಸುವ ಪರಿ ಅನನ್ಯವಾದದ್ದು. ಸೂರ್ಯತತ್ತ್ವ-ಚಂದ್ರತತ್ತ್ವಗಳ ಸಂಘರ್ಷ ಅಮೂರ್ತವೂ ಹೌದು, ತೀರಾ ಸಮಕಾಲೀನವೂ ಹೌದು. ಈ ಅತ್ಯಾಧುನಿಕ ಕಾಲದಲ್ಲಿ ಕಂಬಾರರು ನಡೆಸುವ ಈ ಪ್ರಯೋಗಗಳು ಕೇವಲ ಸಾಹಿತ್ಯಕ ಪ್ರಯೋಗಗಳಲ್ಲ. ಹೊಸ ಸಾಂಸ್ಕೃತಿಕ, ತಾತ್ತ್ವಿಕ, ರಾಜಕೀಯ ಪರಿಕಲ್ಪನೆಯ ಮಾದರಿಗಳೆಂಬಂತೆ ಇವುಗಳನ್ನು ಗ್ರಹಿಸಿ ಅನುಸಂಧಾನ ಮಾಡಬೇಕಾಗಿದೆ.

೪

ಭೂತದೊಂದಿಗಿನ ಸಂಬಂಧದ ಪ್ರಶ್ನೆಯೂ ಏಕೀಕರಣೋತ್ತರ ಕನ್ನಡ ಸಾಹಿತ್ಯದಲ್ಲಿ ಮತ್ತೆಮತ್ತೆ ಕೇಳಿಬಂದಿದೆ. ನಮ್ಮ ಇತಿಹಾಸ, ಪರಂಪರೆ, ಆಚಾರ, ವಿಚಾರಗಳನ್ನು ಏಕಮುಖವಾಗಿ ಕೀರ್ತಿಸುವವರಿಗೆ

ಪಶ್ಚಿಮವು ಕೇವಲ ಆಕ್ರಮಣಶೀಲವಾಗಿ ಕಂಡಿದೆ. ಭೂತದೊಂದಿಗೆ ಸಂಘರ್ಷವಿರುವಂತೆ ಪಶ್ಚಿಮವೂ ಸಂದಿಗ್ಧವಾಗಿದೆ. ಪೂರ್ವದಿಂದ-ಅಂದರೆ ನಮ್ಮ ಪರಂಪರೆಯಿಂದ ಪಡೆಯಬೇಕಾದದ್ದನ್ನು ಪಡೆದು ಪಶ್ಚಿಮದಿಂದಲೂ ಪಡೆಯಬಹುದಾದದ್ದನ್ನು ಪಡೆದು ಇವೆರಡರ ಅರ್ಥಪೂರ್ಣ ಕೂಡುಕೊಳ್ಳುವಿಕೆಯಲ್ಲಿ ಹೊಸದೊಂದು ನಾಗರೀಕತೆಯನ್ನು ನಿರ್ಮಿಸಿಕೊಳ್ಳುವ ಹಂಬಲ ಬೇರೆಬೇರೆ ರೀತಿಯಲ್ಲಿ ಕಾಣಿಸಿಕೊಂಡಿದೆ. ಇದನ್ನು ಸರಳ ಸಮನ್ವಯದ ಸಾಧ್ಯತೆಯಾಗಿ ಭಾವಿಸಿದ ಕವಿಗಳ ಬಗ್ಗೆ ಉಗ್ರವಾದ ಟೀಕೆ-ವಿಡಂಬನೆಗಳೂ ವ್ಯಕ್ತವಾಗಿವೆ. ಪ್ರಾತಿನಿಧಿಕವೆಂಬಂತೆ ಬಿ.ಎಂ.ಶ್ರೀಯವರ ಪ್ರಯತ್ನಗಳನ್ನು ಪ್ರಶ್ನಿಸುವ ಅಡಿಗರ ಬಿ.ಎಂ.ಶ್ರೀ. ಅವರಿಗೆ ಮತ್ತು ಎ.ಕೆ.ರಾಮಾನುಜನ್ ಅವರ ಅವಳ ಇವಳ ಎಂಬ ಕವಿತೆಗಳನ್ನು ಗಮನಿಸಬಹುದು. ದೊಡ್ಡವರು ಮಾಡಿದರೆಂದು/ಅವಳ ತೊಡಿಗೆ ಇವಳಿಗಿಟ್ಟು/ಇವಳ ತೊಡಿಗೆ ಅವಳಿಗಿಟ್ಟು ನೋಡಬಯಸಿದೆ/ ಏನಾಯಿತು ಗೊತ್ತೆ?/ಅವಳ ಸೀರೆ ಇವಳು ಹರಿದು/ಇವಳ ಸೀರೆ ಅವಳು ಹರಿದು/[illegible] ಎಂದು ರಾಮಾನುಜನ್ ಕವಿತೆ ಈ ಜಿಜ್ಞಾಸೆಯನ್ನು ತುಸು ಲಘುಧಾಟಿಯಲ್ಲಿ ಮಂಡಿಸುತ್ತದೆ. ಶ್ರೀ ಅವರನ್ನು ಶೀರ್ಷರೂಪ, ಗುರು ಎಂದೆಲ್ಲ ಸಂಬೋಧಿಸುವ ಅಡಿಗರು ಅವರನ್ನು ಮಾತಿನಲ್ಲಿ ಕೃತಿಯಲ್ಲಿ ಪರಾವಲಂಬನೆಯ ಬಾಲ [illegible] ಇದ್ದ ಮಾದರಿಯಾಗಿ ನೋಡಿ, ಶ್ರೀ ಅವರಿಗೆ [illegible] [illegible] [illegible], [illegible] [illegible] [illegible] ಆರೋಪಿಸಿ ಅದನ್ನು ಮರೆಸಲು ಅವರು ಕನ್ನಡ [illegible] [illegible] [illegible] ಎಂದು ವ್ಯಾಖ್ಯಾನಿಸುತ್ತಾರೆ. ಹಾಗೆಯೇ ಕನ್ನಡದ ಭೂತಗನ್ನಡಿಯಲ್ಲಿ [illegible] [illegible] ಮಾಡುತ್ತಾರೆ. ಭಾವಗೀತಕ್ಕಷ್ಟೆ [illegible]/[illegible] [illegible] [illegible] ರುಚಿ ಪತ್ತಿತೇ?/ಅರ್ಥಗೌರವವಿರದ [illegible] [illegible] ದೇವ ಗುರುವೇ? ಎಂದು ಪ್ರಶ್ನಿಸುತ್ತಾರೆ. ಅಡಿಗರು ಶ್ರೀ ಅವರನ್ನು ದೊಡ್ಡವರು ನಿಜ ಎಂದು ಗೌರವಿಸುತ್ತಾರೆ. ಹಾಗೆಯೇ ನಾವೇನು ಕುಬ್ಜರಲ್ಲ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ಪೂರ್ವ-ಪಶ್ಚಿಮಗಳ, ಪ್ರಾಚೀನ-ನವೀನಗಳ ಸರಳ ಸಮನ್ವಯದಿಂದ [illegible] [illegible] [illegible] ಎಂದು ರಾಮಚಂದ್ರಶರ್ಮರ ಇದೇ ಹೆಸರಿನ ಕವಿತೆಯೊಂದು ಸೂಚಿಸುವ ಹಾಗೆ ಕಾಣುತ್ತದೆ. [illegible] [illegible] [illegible] ಪೂರ್ವ[illegible] [illegible] [illegible] ಎಂದು ಅಡಿಗರು ಭೂತ ದಲ್ಲಿ ಹೇಳುತ್ತಾರೆ. [illegible] [illegible] [illegible] [illegible] [illegible] [illegible] ಗೊತ್ತಿಲ್ಲವೇ ಇಲ್ಲ. ಪೂರ್ವ-ಪಶ್ಚಿಮಗಳ, ಹಳತು-ಹೊಸದರ, ಭೂತ-ವರ್ತಮಾನಗಳ ಸಂಬಂಧ ಕೇವಲ ಸಂಘರ್ಷಮಯವಾಗಿದ್ದರೆ ಅದು ಅರ್ಥಪೂರ್ಣವಾಗಲಾರದು. ಸರಳ ಸಮನ್ವಯ-ಸುಧಾರಣೆಗಳಿಂದ ನಿಜವಾದ ಸಾಮರಸ್ಯ ಸಾಧ್ಯವಾಗುವುದಿಲ್ಲ. ಹಾಗಿದ್ದರೆ ಯಾವ ಹದದಲ್ಲಿ, ಯಾವ [illegible] ಅದನ್ನು ಸಾಧಿಸಿಕೊಳ್ಳಬೇಕು? ಅಡಿಗರ ಪ್ರಕಾರ [illegible] [illegible] [illegible] [illegible] [illegible]. ಕೇವಲ ಸೇರಿದರೆ ಅರ್ಥಹೀನ ಸಂಕರವಾಗುತ್ತದೆ. [illegible] [illegible] ಸಾಮರಸ್ಯವಾಗುವುದಿಲ್ಲ; ಕೇವಲ ಶರಣಾಗತಿಯಾಗುತ್ತದೆ. ಎಂದು [illegible] ಸಮುದ್ರದಲ್ಲಿ ಅಡಿಗರು ಈ ಪ್ರಶ್ನೆಗೆ [illegible] [illegible] ಕವಿತೆಯಲ್ಲಿ ಹೀಗೆ ಎದುರಾಗುತ್ತಾರೆ:

[illegible]
ತಿಮಿಂಗಿಲ ತೊಡೆಯು ಕೂಡ ನುಂಗಿ ಕೊಳೆಸದ ಹಾಗೆ
ನಡೆಸು ಬಂದರಿನಿಂದ ಬಂದರಿಗೆ, ಆಮದು ರಫ್ತು
ಸಾಗುತ್ತಿರಲಿ ಕೊನೆವರೆಗೆ, ಆದರು
ಪರಂಗಿರೋಗ ತಗಲದ ಹಾಗೆ
ಉಳಿಸು ಪೂರ್ವಾರ್ಜಿತದ ರತಿವಿವೇಕದ ಶಿಖೆಯ

ಸಂಘರ್ಷ ಮತ್ತು ಸಾಮರಸ್ಯದ ದ್ವಂದ್ವ ಕಲ್ಪನೆಯನ್ನು ಇಷ್ಟು ಸಾಂದ್ರವಾಗಿ ಅಡಕವಾಗಿ, ಅರ್ಥಪೂರ್ಣವಾಗಿ, ಸಂಕೀರ್ಣವಾಗಿ ಕಟ್ಟಿಕೊಟ್ಟಿರುವ ಮತ್ತೊಂದು ಪ್ರತಿಮೆ ಸಮಕಾಲೀನ ಕನ್ನಡಸಾಹಿತ್ಯದಲ್ಲಿ ಇಲ್ಲವೆಂದೇ ಹೇಳಬೇಕು. ಅಡಿಗರ ಕವಿತೆ ಪ್ರಕಟಿಸುವ ಈ ವಿವೇಕವು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕೃತಿ- ಕೃತಿಕಾರರಲ್ಲಿ ಬೇರೆ ಬೇರೆ ಹದ ಮತ್ತು ವಿನ್ಯಾಸಗಳಲ್ಲಿ ಕಂಡುಬರುತ್ತದೆ.

ಕನ್ನಡದ ಅತ್ಯುತ್ತಮ ಸಾಹಿತ್ಯವು ತೀರ ಸರಳವಾದ ಮತ್ತು ಮೇಲ್ಪದರದ ಸಂಘರ್ಷ ಮತ್ತು ಸಾಮರಸ್ಯ ಎರಡನ್ನೂ ನಿರಾಕರಿಸುತ್ತದೆ ಮತ್ತು ಅನುಮಾನದಿಂದ ನೋಡುತ್ತದೆ. ಭೂತವು ಎಷ್ಟೇ ಆಕರ್ಷಕವಾಗಿರಲಿ, ಪರಂಪರೆಯು ಎಷ್ಟೇ ದೀರ್ಘವಾಗಿರಲಿ ಪ್ರತಿ ಕಾಲ ದೇಶಗಳ ಹೊಸ ಸಂದರ್ಭಗಳಲ್ಲಿ ಪ್ರತಿ ವ್ಯಕ್ತಿ, ಪ್ರತಿ ಸಮುದಾಯ ತನ್ನ ಆಯ್ಕೆಯನ್ನು ತಾನೇ ಮಾಡಬೇಕಾಗುತ್ತದೆ. ತನ್ನ ಆಯ್ಕೆಗೆ ತಾನೇ ಜವಾಬ್ದಾರನಾಗಿರಬೇಕಾಗುತ್ತದೆ. ಅದರ ಪರಿಣಾಮಗಳನ್ನು ತಾನೇ ಎದುರಿಸ ಬೇಕಾಗುತ್ತದೆ ಎನ್ನುವ ಸತ್ಯವನ್ನು ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯು ಹೊಳೆಯಿಸುತ್ತದೆ. ಮೇಲುನೋಟಕ್ಕೆ ಅಗ್ರಹಾರವೊಂದರ ಭ್ರಷ್ಟಾಚಾರ ಕತೆಯನ್ನು ಹೇಳುತ್ತಿದ್ದರೂ ಹೊಸ ರಾಷ್ಟ್ರವೊಂದರ ಆತಂಕ ದುಗುಡಗಳನ್ನು ಬಿಂಬಿಸುವ ಅನ್ಯೋಕ್ತಿಯಾಗಿ ಈ ಕಾದಂಬರಿಯನ್ನು ಓದಬಹುದಾಗಿದೆ. ಪ್ರಾಣೇಶಾಚಾರ್ಯರು, ಆತಂಕವನ್ನು ನಿರೀಕ್ಷಿಸುತ್ತ ಕಾದರು ಎಂಬ ವಾಕ್ಯದೊಂದಿಗೆ ಕಾದಂಬರಿ ಅಂತ್ಯವಾದಾಗ ಕಾಯುತ್ತಿರುವುದು ಕೇವಲ ಪ್ರಾಣೇಶಾಚಾರ್ಯರಲ್ಲ, ಇಡೀ ಇಂಡಿಯಾ ತನ್ನ ಹೊಸ ಆಯ್ಕೆಗಳ ಪರಿಣಾಮವನ್ನು ಆತಂಕದಿಂದ ನಿರೀಕ್ಷಿಸುತ್ತಿದೆ ಎಂಬ ಧ್ವನಿ ಕಾದಂಬರಿಯಿಂದ ಹೊರಡತೊಡಗುತ್ತದೆ. ಬದಲಾವಣೆಯ ಹೊಸ್ತಿಲಲ್ಲಿ ನಿಂತಿರುವ ಸಮಾಜವೊಂದರ ಬಹುಮುಖಿ ಸಂಘರ್ಷಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡಿರುವ ಈ ಕಾದಂಬರಿಯು ನೋಡ ನೋಡುತ್ತಿದ್ದಂತೆ ಒಂದು ಪುರಾಣವಾಗಿ ಬೆಳೆಯತೊಡಗುತ್ತದೆ. ಈ ಕಾದಂಬರಿಯ ಮೂಲವಿನ್ಯಾಸ ಮತ್ತು ಧ್ವನಿಕ ಆಕೃತಿಯು ಏಕೀಕರಣೋತ್ತರ ಸಾಹಿತ್ಯದ ಮೇಲೆ ಮಾಡಿರುವ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವ ಅಷ್ಟಿಷ್ಟಲ್ಲ.

ಅನಂತಮೂರ್ತಿ, ಲಂಕೇಶ, ತೇಜಸ್ವಿ, ದೇವನೂರ ಮಹಾದೇವ ಮುಂತಾದ ಲೇಖಕರ ಮೊದಲರ್ಧದ ಬರಹಗಳಲ್ಲಿ ಪಶ್ಚಿಮವು, ಪಶ್ಚಿಮವು ತಂದ ಆಧುನಿಕತೆಯು ಪೂರ್ವದ ಎಷ್ಟೋ ಸಮಸ್ಯೆಗಳಿಗೆ ಉತ್ತರವಾಗಬಹುದು ಎಂಬ ನಿರೀಕ್ಷೆ ಕಾಣುತ್ತದೆ. ಹಳತು-ಹೊಸತುಗಳ ಸಂಘರ್ಷದಲ್ಲಿ ಹೆಚ್ಚು ಮುಕ್ಕಾಗುವುದು ಹಳೆಯದೇ, ಪೂರ್ವವೇ. ಆಧುನಿಕತೆಯು ಅಷ್ಟು ಹಂತವಾದ ವಿಶ್ಲೇಷಣೆಗೆ ಒಳಗಾದಂತೆ ಕಾಣುವುದಿಲ್ಲ. ಆದರೆ ಈ ಲೇಖಕರ ದ್ವಿತೀಯಾರ್ಧದ ಬರವಣಿಗೆಯಲ್ಲಿ ಒಂದು ಮುಖ್ಯವಾದ ಪಲ್ಲಟವು ಕಂಡುಬರುತ್ತದೆ. ಕುವೆಂಪು ಅವರ ಕಾದಂಬರಿಗಳ ಬಗ್ಗೆಯೂ ಇದು ನಿಜ. ಮೂಢನಂಬಿಕೆಗಳ ಲೋಕವಾಗಿ ಕಾನೂರು ಹೆಗ್ಗಡಿತಿಯಲ್ಲಿ ಕಂಡ ಅದೇ ಮಲೆನಾಡು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ತುಸು ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಪಶ್ಚಿಮದ ಜೀವನಕ್ರಮಕ್ಕಿಂತ ಭಿನ್ನವಾದ ಒಂದು ಜೀವನಕ್ರಮ ಎಂಬ ಹದದಲ್ಲಿ ಈ ಲೋಕವನ್ನು ನೋಡಲಾಗಿದೆ. ಈ ಲೋಕದಲ್ಲಿ ಇಕ್ಕಟ್ಟುಗಳು-ಬಿಕ್ಕಟ್ಟುಗಳು ಇಲ್ಲವೆಂದಲ್ಲ. ಆದರೆ ಅವು ಯಾವುದೇ ಮನುಷ್ಯನಾಗರೀಕತೆಯಲ್ಲಿ ಕಂಡುಬರಬಹುದಾದ ಬಿಕ್ಕಟ್ಟುಗಳು. ಈ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳುವಷ್ಟು ಪಶ್ಚಿಮದ ವಿವೇಕವೂ ಬೇಕು. ಆದರೆ ಆಧುನಿಕತೆಯನ್ನು ವಿಮರ್ಶೆಗೆ ಒಳಪಡಿಸಿಯೇ ಅದರಲ್ಲಿ ಬೇಕಾದುದನ್ನು ಆಯ್ದುಕೊಳ್ಳುವ ಎಚ್ಚರ ಇಲ್ಲಿ ಕಾಣುತ್ತದೆ. ಹಿಂದೆ ಆ ಎಚ್ಚರ ಇರಲಿಲ್ಲವೆಂದಲ್ಲ. ಆದರೆ ಈ ಹಂತದಲ್ಲಿ ಅದು ಹೆಚ್ಚು ಪ್ರಜ್ಞಾಪೂರ್ವಕವಾಗಿದೆ ಮತ್ತು ನಿರ್ಣಾಯಕವಾಗಿದೆ. ಅನಂತಮೂರ್ತಿಯವರ ಘಟಶ್ರಾದ್ಧ, ಪ್ರಶ್ನೆ, ಸಂಸ್ಕಾರ ಮುಂತಾದ ಕೃತಿಗಳಿಗೂ ಅವರದೇ ಮುಂದಿನ ಹಂತದ ಕ್ಲಿಪ್ ಜಾಯಿಂಟ್, ಸೂರ್ಯನ ಕುದುರೆ, ಅಕ್ಕಯ್ಯ ದಂಥ ಕೃತಿಗಳಿಗೂ ಇರುವ ವ್ಯತ್ಯಾಸ ಇದೇ ಬಗೆಯದು. ಅನಂತಮೂರ್ತಿ

ಅವರ ವಿಮರ್ಶಾತ್ಮಕ ಲೇಖನಗಳ ಮತ್ತು ಪ್ರಬಂಧಗಳ ಬಗ್ಗೆಯೂ ಇದು ನಿಜ. ಪಶ್ಚಿಮದ ಕಣ್ಣುಗಳಿಂದ, ಆಧುನಿಕತೆಯ ಪ್ರಭಾವದಲ್ಲಿ, ಹೊಸಶಿಕ್ಷಣ ತಂದುಕೊಟ್ಟ ಬೌದ್ಧಿಕ ಅಹಂಕಾರದಲ್ಲಿ, ಪೂರ್ವವನ್ನು-ಭೂತವನ್ನು-ಹಳೆಯದನ್ನು-ಸ್ಥಳೀಯವಾದದ್ದನ್ನು ಪರಿಭಾವಿಸಿದಾಗ ಕಾಣುವ ಸತ್ಯಗಳಿಗೂ ಅವುಗಳಿಂದ ಬಿಡಿಸಿಕೊಂಡು ಮುಕ್ತವಾಗಿ, ಹೊಸ ಎಚ್ಚರದಲ್ಲಿ, ವಿನಯದಿಂದ ಪರಿಭಾವಿಸಿದಾಗ ಕಾಣುವ ಸತ್ಯಗಳಿಗೂ ಅರ್ಥಪೂರ್ಣವಾದ ವೈಪರೀತ್ಯವನ್ನು ಹೊಳೆಯಿಸಿ ಸಂಘರ್ಷ-ಸಾಮರಸ್ಯಗಳ ಜಿಜ್ಞಾಸೆಯನ್ನು ಬೇರೊಂದು ಮಜಲಿಗೆ ಕೊಂಡೊಯ್ಯುವ ಮಹತ್ವಾಕಾಂಕ್ಷೆ ಇಲ್ಲಿ ಕಾಣುತ್ತದೆ. 'ಬಿರುಕು' ಬರೆದ ಲಂಕೇಶ್ 'ಮುಸ್ಸಂಜೆಯ ಕಥಾ ಪ್ರಸಂಗ' ಬರೆಯುವುದು, 'ಅಬಚೂರಿನ ಪೋಸ್ಟಾಫೀಸು' ಸಂಕಲನವನ್ನು ಪ್ರಕಟಿಸಿದ ತೇಜಸ್ವಿ ಮುಂದೆ ಪರಿಸರದ ಕತೆಯನ್ನು ಪ್ರಕಟಿಸುವುದು, ವರ್ತಮಾನ, ಇತಿಹಾಸಗಳಿಂದ ದೇವನೂರರು ಪುರಾಣಗಳ ಕಡೆಗೆ ಚಲಿಸುವುದು ಇಂಥ ಉದಾಹರಣೆಗಳೇ. ಲಂಕೇಶರ ಗುಣಮುಖ, ತೇಜಸ್ವಿ ಅವರ ಕರ್ವಾಲೋ, ದೇವನೂರರ ಕುಸುಮಬಾಲೆ ಕೃತಿಗಳನ್ನು ಆಯಾ ಲೇಖಕರ ಪಲ್ಲಟಗೊಂಡ ಮನೋಧರ್ಮಗಳ ಹಿನ್ನೆಲೆಯಲ್ಲಿ ಗಮನಿಸಬೇಕು. ಕೆರೆಯ ನೀರನು ಕೆರೆಗೆ ಚೆಲ್ಲಿ, ನಾನಲ್ಲದ ಕಥೆಗಳಿಗೂ ಕಲ್ಲುಕರಗುವ ಸಮಯದ ಕಥೆಗಳಿಗೂ ಇರುವ ವ್ಯತ್ಯಾಸಗಳು ಇದೇ ಬಗೆಯವು. ಅನಂತಮೂರ್ತಿ ಅವರ ಕ್ಲಿಪ್ ಜಾಯಿಂಟ್‌ನಲ್ಲಿ ಇಂಡಿಯಾ ವಿಮರ್ಶೆಗೆ ಒಳಗಾಗುವಂತೆ ಇಂಗ್ಲೆಂಡ್ ಕೂಡ ವಿಮರ್ಶೆಗೆ ಒಳಗಾಗುತ್ತದೆ. ಕೇಶವ ತನ್ನ ಮಧ್ಯಮವರ್ಗದ ಬದುಕಿಗೆ ಹೇಸಿ ತನ್ನ ಸಮಸ್ಯೆಗಳಿಗೆ ಇಂಗ್ಲೆಂಡಿನಲ್ಲಿ ಉತ್ತರ ಹುಡುಕುತ್ತಿದ್ದರೆ ಸ್ಟೂಅರ್ಟ್‌ಗೆ ಇಂಗ್ಲೆಂಡಿನ ತನ್ನ ಜೀವನಕ್ರಮದಿಂದ ಬೇಸರವಾಗಿದೆ. ಸ್ಪಿರಿಚ್ಯುಯಲ್ಲಾದದ್ದು ಇಂಗ್ಲೆಂಡಿನಲ್ಲಿ ಏನೂ ಉಳಿದಿಲ್ಲವೆಂದು ಅವನು ತಿಳಿದಿದ್ದಾನೆ. ಇಂಡಿಯಾದತ್ತ ಬೆರಗುಗಣ್ಣಿನಲ್ಲಿ ಅವನು ನೋಡುತ್ತಿದ್ದಾನೆ. ಕೇಶವನ ಇಂಡಿಯಾ ಸ್ಟೂಅರ್ಟ್‌ನ ಸಮಸ್ಯೆಗಳಿಗೆ ಪರಿಹಾರವಾಗಲಾರದು. ಹಾಗೆಯೇ ಸ್ಟೂಅರ್ಟ್‌ನ ಇಂಗ್ಲೆಂಡ್ ಕೇಶವನ ಆತಂಕಗಳಿಗೆ ಉತ್ತರವಾಗಲಾರದು ಎಂದು ಅನಂತಮೂರ್ತಿಯವರ ಕೃತಿ ಸೂಚಿಸುತ್ತದೆ. ಎರಡೂ ಅಲ್ಲದ ಹೊಸದೊಂದೇ ಜೀವನಕ್ರಮದ, ನಾಗರಿಕತೆಯ ಹುಡುಕಾಟದಲ್ಲಿ [illegible] ಇವರಿಬ್ಬರೂ ಜೊತೆಗೂಡಿ ನಡೆಯಬೇಕು ಎಂಬ ದರ್ಶನ ಇಲ್ಲಿ ಮಿಂಚುತ್ತದೆ. ಸಂಘರ್ಷದಲ್ಲೇ ಇದ್ದ ಪೂರ್ವ-ಪಶ್ಚಿಮಗಳು ತಮ್ಮನ್ನು ವಿಸರ್ಜಿಸಿಕೊಂಡು ಒಟ್ಟುಗೂಡಿ ಹೊಸ ಸಂಸ್ಕೃತಿಯೊಂದನ್ನು ನಿರ್ಮಿಸಿಕೊಳ್ಳುವ ಕಾಲವನ್ನು, ಸಾಧ್ಯತೆಯನ್ನು ಅನಂತಮೂರ್ತಿ ಅವರ ಕೃತಿಯು ಎದುರುನೋಡುತ್ತದೆ. ಅಂದರೆ ಹೊಸ ಸಾಮರಸ್ಯದ ಸ್ಥಿತಿಯೊಂದನ್ನು ಅದು ನಿರೀಕ್ಷಿಸುತ್ತದೆ. ತೇಜಸ್ವಿ ಅವರ ಕರ್ವಾಲೋ ಕಾದಂಬರಿಯಲ್ಲಿ ಕರ್ವಾಲೋ ಪಾಶ್ಚಾತ್ಯ ಶಿಕ್ಷಣ ಪಡೆದ ವಿಜ್ಞಾನಿ, ಜೀವಶಾಸ್ತ್ರಜ್ಞ. ಒಂದು ರೀತಿಯಲ್ಲಿ ಅವನು ಪಶ್ಚಿಮದ ಅತ್ಯುತ್ತಮ ಪ್ರತಿನಿಧಿ. ಮಂದಣ್ಣ ಪೂರ್ವ ಹಳ್ಳಿಗಮಾರ. ಶಿಕ್ಷಣ-ಅಂತಸ್ತು-ಅಧಿಕಾರ ಎಲ್ಲದರಲ್ಲಿಯೂ ಅವನು ಕರ್ವಾಲೋಗಿಂತ ತುಂಬ ಕೆಳಗೆ. ಆದರೆ ಅವನು ಹುಟ್ಟಾ ನ್ಯಾಚುರಲಿಸ್ಟ್. ಕರ್ವಾಲೋ ಕಲಿಕೆಯಿಂದ ಜ್ಞಾನಿಯಾದರೆ ಮಂದಣ್ಣನಿಗೆ ಜ್ಞಾನವೆಂಬುದು ಅನುಭವಜನ್ಯ. ಇವರಿಬ್ಬರೂ ಜೊತೆಯಾಗದೆ ಕರ್ವಾಲೋನ ಸಂಶೋಧನೆ, ಜ್ಞಾನಯಾತ್ರೆ ಪೂರ್ಣಗೊಳ್ಳದು. ಇವರಿಬ್ಬರೂ ಕೂಡಿ ಹೊಸ ಸತ್ಯದೆಡೆಗೆ, ಜ್ಞಾನದೆಡೆಗೆ ಚಲಿಸುವ ದರ್ಶನವೊಂದನ್ನು ತೇಜಸ್ವಿ ಕಾದಂಬರಿ ಕಟ್ಟಿಕೊಡುತ್ತದೆ. ಜೇಂಕ ಮೊಸ್ಸು ಮತ್ತು ಅರಿಸ್ಟಾಟಲ್ ಎಂಬ ಬರಹದಲ್ಲಿ ಸ್ಥಳೀಯ ನಿರಕ್ಷರಕುಕ್ಷಿ, ಸುಮ್ಮನೇ ಕೂತು ಮೀನು ಹಿಡಿಯುವ ಜೇಂಕ ಮೊಸ್ಸು ಮತ್ತು ಪಶ್ಚಿಮದ ಜ್ಞಾನದ ಪಿತಾಮಹ ಅರಿಸ್ಟಾಟಲ್ ಇವರಿಬ್ಬರ ಹೆಸರುಗಳನ್ನು ಜತೆಗೆ ತರುವುದರಲ್ಲಿಯೇ ತೇಜಸ್ವಿಯವರ ಉದ್ದೇಶ ಸ್ಪಷ್ಟವಾಗುತ್ತದೆ. ಈ ಕತೆಯ ನಿರೂಪಕನು ಅರಿಸ್ಟಾಟಲನ ಪುಸ್ತಕದಲ್ಲಿ ಓದಿ ತಿಳಿದದ್ದನ್ನೇ ಅನಕ್ಷರಸ್ಥ ಜೇಂಕಮೊಸ್ಸುವು ತನ್ನ ಅನುಭವದಿಂದ ನಿರೂಪಿಸುತ್ತಾನೆ. ಯುಂಗ್ಲನ ಪುಂಗಿ ಎಂಬ ಕತೆಯಲ್ಲಿ ಯುಂಗ್ಲನ ಸ್ಥಳೀಯ ಜ್ಞಾನವು ಸಂಶೋಧನಾಕೇಂದ್ರದ ವಿಜ್ಞಾನಿಗಳ ಜ್ಞಾನಕ್ಕಿಂತ ಏನೂ ಕಡಿಮೆಯಲ್ಲ ಎಂಬ ಸತ್ಯವನ್ನು ನಿರೂಪಕ

ಮನಗಾಣುತ್ತಾನೆ. ಅವರಿಬ್ಬರ ಗ್ರಹಿಕೆಯ ಮತ್ತು ಅಭಿವ್ಯಕ್ತಿಯ ಮಾರ್ಗಗಳು ಮಾತ್ರ ಭಿನ್ನ ಎಂದು ಅವನು ಅರಿಯುತ್ತಾನೆ. ಪಾಶ್ಚಾತ್ಯ ಶಿಕ್ಷಣವನ್ನೇ ಅಂತಿಮ ಎಂದು ತಿಳಿದುಕೊಂಡ ಅಹಂಕಾರದ ಮನಸ್ಥಿತಿಯು ಯುಂಗ್ಸ್, ಮಂದಣ್ಣ, ಜೀಂಕ ಮೇಷ್ಟ್ರುಂಥವರನ್ನು ಜ್ಞಾನಿಗಳೆಂದು ಗುರುತಿಸುವ ವಿನಯ ಮತ್ತು ಔದಾರ್ಯಗಳನ್ನು ಕಳೆದುಕೊಂಡಿರುತ್ತವೆ ಎಂದು ಸೂಚಿಸುವ ತೇಜಸ್ವಿ ಇದರಿಂದ ಅವರಿಗೇನೂ ನಷ್ಟವಿಲ್ಲ, ನಷ್ಟವೆಲ್ಲ ಅವರನ್ನು ದೂರವಿಟ್ಟವರದು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಪೌರ್ವಾತ್ಯ-ಪಾಶ್ಚಿಮಾತ್ಯ ಎರಡೂ ಜ್ಞಾನಕ್ರಮಗಳು ತಮ್ಮತಮ್ಮ ಅಪೂರ್ಣತೆಗಳನ್ನು ಕಳಚಿಕೊಂಡು ಸಮಾನ ನೆಲೆಯಲ್ಲಿ ಒಟ್ಟುಗೂಡಿ ಪ್ರಪಂಚಕ್ಕೆ ಹೊಸಬೆಳಕನ್ನು ತರುವಂಥ ಸಾಧ್ಯತೆಗಾಗಿ ಹಂಬಲಿಸುತ್ತಾರೆ. ಸೂರ್ಯನ ಕುದುರೆಯಲ್ಲಿ ಅನಂತಮೂರ್ತಿ ಕಟ್ಟಿ ಬಯಸುವ ದರ್ಶನವೂ ಇದೇ ಬಗೆಯದು. ಏಕೀಕರಣ ಪೂರ್ವದಲ್ಲಿ ಒಂದು ಐತಿಹಾಸಿಕ ಘಟ್ಟದಲ್ಲಿ ಪ್ರಾರಂಭವಾದ ಪೂರ್ವ-ಪಶ್ಚಿಮಗಳ ಸಂಘರ್ಷವು ಏಕೀಕರಣೋತ್ತರ ಸಂದರ್ಭದಲ್ಲೂ ಮುಂದುವರೆದು ಒಂದು ಹೊಸ ಸಾಮರಸ್ಯಕ್ಕಾಗಿ ತುಡಿಯುತ್ತಿರುವ ಮನಸ್ಥಿತಿಯನ್ನು ಅನಂತಮೂರ್ತಿ, ತೇಜಸ್ವಿ ಮುಂತಾದವರ ಕೃತಿಗಳಲ್ಲಿ ಕಾಣುತ್ತೇವೆ.


೫

ರಾಷ್ಟ್ರಪ್ರಭುತ್ವವೊಂದರ ನಿರ್ಮಿತಿಯಲ್ಲೇ ಅಂತರ್ಗತವಾದ ವಿರೋಧಾಭಾಸ, ಹಿಂಸೆ, ಕ್ರೌರ್ಯ, ಸಾಮಾನ್ಯ ಜನರ ಮೇಲೆ ಪ್ರಭುತ್ವದ ದಬ್ಬಾಳಿಕೆಗಳ ಕಥನವೊಂದು ಏಕೀಕರಣೋತ್ತರ ಕನ್ನಡ ಸಾಹಿತ್ಯದುದ್ದಕ್ಕೂ ನಡೆದಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದವರು, ಆ ಕಾಲದಲ್ಲಿ ಸಾಹಿತ್ಯ ರಚಿಸಿದ್ದವರು, ಹೊಸ ರಾಷ್ಟ್ರ-ಸಮಾಜಗಳ ಕನಸು ಕಂಡಿದ್ದವರು ಅನುಭವಿಸಿದ ಭ್ರಮನಿರಸನ ಒಂದು ಮುಖ್ಯ ವಸ್ತುವಾಗಿದೆ. ಶಿವರಾಮ ಕಾರಂತರ ಕಾದಂಬರಿಗಳು, ಶ್ರೀರಂಗ, ಜಿ.ಬಿ.ಜೋಶಿ ಅವರ ಕೆಲವು ನಾಟಕಗಳು, ಗೋಪಾಲಕೃಷ್ಣ ಅಡಿಗರ ಕಾವ್ಯಗಳಲ್ಲಿ ಹೊಸವ್ಯವಸ್ಥೆಯನ್ನು ಕುರಿತ ಅಪಾರವಾದ ಅಸಹನೆ, ಉಗ್ರವಾದ ಟೀಕೆ ವ್ಯಕ್ತವಾಗಿದೆ. ಆದರ್ಶಗಳ ಪತನ, ಆದರ್ಶವಾದಿಗಳೆಂದು ಕಂಡಿದ್ದವರ ಢಾಂಭಿಕತೆ, ನಾಯಕಮಣಿಗಳ ವಂಚನೆ-ಹಗಲುದರೋಡೆಗಳು, ಹೊಸ ರಾಜಕೀಯ ವಿಕೃತಿಗಳು ನಮ್ಮ ಲೇಖಕರ ಸಿಟ್ಟು, ವ್ಯಂಗ್ಯ, ವಿಡಂಬನೆಗಳಿಗೆ ಗುರಿಯಾಗಿವೆ. ಆಧುನಿಕ ಕನ್ನಡ ಸಾಹಿತ್ಯ ಎಂದೂ ವ್ಯವಸ್ಥೆಯನ್ನು ಗುಮಾನಿಯಿಂದ, ಸಂದೇಹದಿಂದಲೇ ನೋಡುತ್ತ ಬಂದಿದೆ. ಪ್ರಭುತ್ವದೊಂದಿಗಿನ ಸಂಘರ್ಷ ನಮ್ಮ ಬಹುಪಾಲು ಸಾಹಿತ್ಯ ಕೃತಿಗಳ ವಸ್ತುವಿನ್ಯಾಸವನ್ನು, ರಾಚನಿಕ ವಿನ್ಯಾಸವನ್ನೂ ರೂಪಿಸಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬರೆಯಲು ಪ್ರಾರಂಭಿಸಿದ ಅನಂತಮೂರ್ತಿ, ಲಂಕೇಶ, ತೇಜಸ್ವಿ, ಚಂದ್ರಶೇಖರ ಕಂಬಾರ, ಚಿತ್ತಾಲ, ಮಹಾದೇವ, ಕುಂ.ವೀ., ಚನ್ನರಾಡಕ ರಾಮಣ್ಣ-ಹೀಗೆ ಯಾರನ್ನು ತೆಗೆದುಕೊಂಡರೂ ವಿವಿಧ ನೆಲೆಗಳಲ್ಲಿ ಪ್ರಭುತ್ವವನ್ನು ಪ್ರಶ್ನಿಸುವ, ವ್ಯವಸ್ಥೆಯನ್ನು ವಿಮರ್ಶಿಸುವ ಗುಣ ಪ್ರಧಾನವಾಗಿ ಕಾಣುತ್ತದೆ. ಸಾಂಸ್ಥಿಕ ಧರ್ಮ, ರಾಷ್ಟ್ರಪ್ರಭುತ್ವ- ಎರಡೂ ಕೇಂದ್ರಗಳನ್ನು ನಮ್ಮ ಸಾಹಿತ್ಯ ಅನುಮಾನದಿಂದಲೇ ನೋಡಿದೆ. ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತ ಮುಂತಾದ ನೈತಿಕ ನೆಲೆಗಳಿಂದ ಮಾತ್ರ ಪರಿಭಾವಿಸದೆ ಅದಕ್ಕೂ ಸೂಕ್ಷ್ಮವಾದ ಡೆವಲಪ್‌ಮೆಂಟ್ ರಾಜಕೀಯದ ಹಲವು ಮುಖಗಳನ್ನು ಆಧುನಿಕ ಸಾಹಿತ್ಯ ಬಯಲಿಗೆಳೆದಿದೆ. ಡೆವಲಪ್‌ಮೆಂಟ್ ಅಜೆಂಡಾ ಎಂಬುದು ಅಂತಿಮವಾಗಿ ಸ್ಥಳೀಯರನ್ನು ತಮ್ಮ ನೆಲದಿಂದ ಬೇರ್ಪಡಿಸುವುದು, ಪರಿಸರ ನಾಶ, ಜೀವಸಂಕುಲಗಳ, ಮೌಲ್ಯಗಳ ನಾಶದಲ್ಲಿ ಕೊನೆಗೊಳ್ಳುವ ದುರಂತವನ್ನು ನಮ್ಮ ಈಚಿನ ಸಾಹಿತ್ಯ ಚಿತ್ರಿಸುತ್ತಿದೆ. ಮುಕ್ತ ಮಾರುಕಟ್ಟೆ, ಜಾಗತೀಕರಣ, ನವ ಆರ್ಥಿಕ ನೀತಿ, ನವಸಾಮ್ರಾಜ್ಯಶಾಹಿ, ನವವಸಾಹತುಶಾಹಿಗಳ ಹುನ್ನಾರಗಳನ್ನು ನಮ್ಮ ಸಾಹಿತ್ಯವು ಆತಂಕದಲ್ಲಿ, ದುಗುಡದಲ್ಲಿ ಗಮನಿಸುತ್ತಿದೆ.

ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣವನ್ನು ಆದರ್ಶಗಳ ಪತನವೆಂದು ಮಾತ್ರ ಭಾವಿಸದೆ ಹೊಸ ರಾಜಕೀಯ ಶಕ್ತಿಗಳ, ಸಾಮಾಜಿಕ ಶಕ್ತಿಗಳ ಉದಯವೆಂದು ಗ್ರಹಿಸಿ ಅವುಗಳ ಸಂಕೀರ್ಣ ಮುಖಗಳನ್ನು ಚಿತ್ರಿಸುವ ಮಹತ್ವಾಕಾಂಕ್ಷೆಯನ್ನೂ ಹಲವಾರು ಲೇಖಕರು ತೋರಿದ್ದಾರೆ. ಅನಂತಮೂರ್ತಿಯವರ ಅವಸ್ಥೆ, ಬರ, ಆಕಾಶ ಮತ್ತು ಬೆಕ್ಕು, ಕಾಮರೂಪಿ ಮೊದಲಾದವರ ಕೃತಿಗಳಲ್ಲಿ ಇದನ್ನು ಗಮನಿಸಬಹುದು. ಕಾರ್ನಾಡರ 'ತುಘಲಖ್' ನೆಹರೂ ಯುಗದ ರಾಜಕಾರಣಕ್ಕೆ ಒಡ್ಡಿಕೊಂಡ ರೂಪಕವಾದರೆ ಅವರ 'ತಲೆದಂಡ' ಮಂಡಲ್-ಮಸೀದಿ ಸಂಘರ್ಷದ ರಾಜಕಾರಣವನ್ನು ಸೂಕ್ಷ್ಮವಾಗಿ ಧ್ವನಿಸುವಂತಿದೆ. ಇತಿಹಾಸ, ಪುರಾಣಗಳಿಂದ ತಮ್ಮ ವಸ್ತುವನ್ನು ತೆಗೆದುಕೊಂಡರೂ ಕಾರ್ನಾಡರು ಪ್ರತಿಕ್ರಿಯಿಸುತ್ತಿರುವುದು ಪ್ರತಿಸ್ಪಂದಿಸುತ್ತಿರುವುದು ಸಮಕಾಲೀನ ಸಂದರ್ಭಕ್ಕೇ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಅವರು ಬರೆದಿರುವುದು ಎರಡೇ ಕತೆಗಳು: ಅಳಿದ ಮೇಲೆ ಮತ್ತು ಮುಸಲ್ಮಾನ ಬಂದ, ಮುಸಲ್ಮಾನ ಬಂದ. ಈ ಎರಡೂ ಕತೆಗಳು ಸಮಕಾಲೀನ ಕೋಮುವಾದೀ ರಾಜಕಾರಣದ ಒಳ ಸಂಘರ್ಷಗಳನ್ನು ಮಾರ್ಮಿಕವಾಗಿ ಚಿತ್ರಿಸುತ್ತವೆ. ಕಂಬಾರರ ಹೆಚ್ಚು ಕಡಿಮೆ ಎಲ್ಲ ನಾಟಕಗಳೂ ವ್ಯವಸ್ಥೆಯನ್ನು, ಪ್ರಭುತ್ವವನ್ನು ಲೇವಡಿ ಮಾಡುವ ಬರಹಗಳೇ ಆಗಿವೆ. ಹಳೆಯ ವ್ಯವಸ್ಥೆಗಳು ತಮ್ಮ ಆಂತರಿಕ ಭಾರದಿಂದ ತಾವೇ ಕುಸಿಯುತ್ತ ಅವುಗಳ ಒಡಲಿನಿಂದ ಹೊಸ ರಾಜಕೀಯ ಶಕ್ತಿಗಳು ಚಿಮ್ಮಿ ಬರುವ ಪ್ರಕ್ರಿಯೆಯನ್ನು ಅವು ಚಿತ್ರಿಸುತ್ತವೆ. ಸಮಕಾಲೀನ ರಾಜಕಾರಣಕ್ಕೆ ತೀವ್ರವಾಗಿ ಸ್ಪಂದಿಸಿದ ಕವಿ ಎಂದರೆ ಗೋಪಾಲಕೃಷ್ಣ ಅಡಿಗರು. ಅವರ ನೆಹರೂ ನಿವೃತ್ತರಾಗುವುದಿಲ್ಲ ನೆಹರೂ ಯುಗವನ್ನು ವಿಡಂಬಿಸುವ ಒಂದು ಕುತೂಹಲಕಾರೀ ರಚನೆ. ಸ್ವಾತಂತ್ರ್ಯೋತ್ಸವದ ಹಾಡು, ಬರುತ್ತಾರೆ ಬರುತ್ತಾರೆ, ದೆಹಲಿಯಲ್ಲಿ, ಎಡ ಬಲ, ಗಜೇಂದ್ರಮೋಕ್ಷ ಮುಂತಾದ ಕವನಗಳು ನೇರವಾಗಿ ಸಮಕಾಲೀನ ರಾಜಕೀಯವನ್ನೇ ವಸ್ತುವಾಗಿ ಉಳ್ಳವು. ಬಂಡವಾಳಶಾಹಿ ವ್ಯವಸ್ಥೆಯೊಂದು ಅಮಾಯಕರನ್ನು ತನ್ನ ಶಿಕಾರಿಗೆ ಬಳಸಿಕೊಳ್ಳುವ ಕ್ರೌರ್ಯಕ್ಕೆ ಒಡ್ಡಿದ ರೂಪಕವೆಂಬಂತೆ ಯಶವಂತ ಚಿತ್ತಾಲರ ಶಿಕಾರಿ ಕಾದಂಬರಿಯನ್ನು ಗಮನಿಸಬೇಕು. ನಗರ ಜೀವನದ ಇಕ್ಕಟ್ಟುಗಳನ್ನೂ, ಅದರೊಳಗೆ ಸಿಕ್ಕ ಮನುಷ್ಯರು ಅಮಾನವೀಕರಣಕ್ಕೆ ಒಳಗಾಗುವ ಹಲವು ಮಾದರಿಗಳನ್ನು ಚಿತ್ತಾಲರ ಅನೇಕ ಕತೆ-ಕಾದಂಬರಿಗಳು ಸೂಕ್ಷ್ಮವಾಗಿ ಕಟ್ಟಿಕೊಡುತ್ತವೆ. ಆಧುನಿಕ ಸಾಹಿತ್ಯದ ಮಹತ್ವದ ಕೃತಿಗಳು ಎಂದೂ ಗ್ರಾಮವನ್ನು ನಗರಕ್ಕೆ ಬದಲಿ ಎಂದು ಅಥವಾ ನಗರವನ್ನು ಗ್ರಾಮಕ್ಕೆ ಬದಲಿ ಎಂದು ಸರಳೀಕರಿಸಿ ನೋಡಿಲ್ಲ. ಆ ಎರಡೂ ಜಗತ್ತುಗಳ ಒಳಗಿನ ಸಂಘರ್ಷದ ನೆಲೆಗಳನ್ನು ಅವುಗಳ ವೈದೃಶ್ಯದಲ್ಲಿ ಸೆರೆ ಹಿಡಿದಿವೆ.

ಉಳಿದದ್ದು ಮುಂದಿನ ಸಂಚಿಕೆಯಲ್ಲಿ...

ಅಗ್ರಹಾರ, ಸಾಗರ, ಶಿವಮೊಗ್ಗ ಜಿಲ್ಲೆ.
ಫೋನ್ : ೯೪೪೮೨ ೫೪೨೨೮



ಶ್ರೀಸಾಮಾನ್ಯಪರ ಧೋರಣೆಯ ಎಲ್. ಬಸವರಾಜು

ಡಾ. ಜಿ.ಆರ್. ತಿಪ್ಪೇಸ್ವಾಮಿ

ಇಡಗೂರು ಗೌರಿಬಿದನೂರು ತಾಲ್ಲೂಕಿಗೆ ಸೇರಿದ ಕಸಬಾ ಹೋಬಳಿಯ ಮುಖ್ಯ ಗ್ರಾಮ. ಭೀಮ ಹಿಡಿಂಬೆಯನ್ನು ಮದುವೆಯಾದ ನಂತರ ಸಂಹಾರ ಮಾಡಿದ ಜಾಗವಾದ್ದರಿಂದ ಇದಕ್ಕೆ ಹಿಡಿಂಬಾಪುರ ಎಂದು ಹೆಸರಾಯಿತೆಂದು ಹೇಳಲಾಗುತ್ತದೆ. ಈ ಪ್ರದೇಶ ಹಿಂದೆ ಪಲ್ಲವ, ಚೋಳ ಸಾಮ್ರಾಜ್ಯಗಳ ಅಧಿಪತ್ಯಕ್ಕೆ ಒಳಪಟ್ಟಿತ್ತೆಂಬುದಕ್ಕೆ ಅಲ್ಲಿ ದೊರೆತಿರುವ ಶಾಸನಗಳು ಸಾಕ್ಷಿಯಾಗಿವೆ. ಕನ್ನಡ ಮತ್ತು ತೆಲುಗಿನಲ್ಲಿ ಸಾಕಷ್ಟು ಕೃತಿಗಳನ್ನು ರಚಿಸಿರುವ ರುದ್ರಕವಿ ಇಲ್ಲಿಯವನು. ಅದೇ ರೀತಿ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾಗಿ ಕೃತಿ ರಚನೆ ಮಾಡಿದ ವಿಚಾರಶೀಲ ವಿದ್ವಾಂಸರಾದ ಎಲ್. ಬಸವರಾಜು ಅವರೂ ಸಹ ದ್ವಿಭಾಷಿಕ ಪ್ರದೇಶವಾದ ಇಡಗೂರಿನವರು.

ಎಲ್. ಬಸವರಾಜು ಅವರು ಹುಟ್ಟಿದ್ದು ೧೯೧೯ ಅಕ್ಟೋಬರ್ ೫ ರಂದು. ತಂದೆ ಲಿಂಗಪ್ಪ, ತಾಯಿ ಈರಮ್ಮ. ಬಸವರಾಜು ಅವರೇ ಹಿರಿಯ ಮಗ. ಇವರದು ಬಡತನದ ಕುಟುಂಬ. ತಂದೆ ಅರ್ಚಕ ವೃತ್ತಿಯನ್ನು ಅವಲಂಬಿಸಿದ್ದರು. ಭಕ್ತರು ತಂದುಕೊಟ್ಟುದರಲ್ಲಿಯೇ ಜೀವನ ಸಾಗಬೇಕಿತ್ತು. ಇಂಥ ಸ್ಥಿತಿಯ ನಡುವೆಯೂ ಎಲ್.ಬಿ. ಇಡಗೂರಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಹಲವಾರು ಉಪದ್ರವಗಳ ನಡುವೆಯೂ ತುಮಕೂರು ಬಳಿಯ ಸಿದ್ಧಗಂಗೆಯಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆದರು. ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಮುಂದುವರಿಸಿದರು. ಬಿ.ಎ. ಆನರ್ಸ್ (೧೯೪೬), ಕನ್ನಡ ಎಂ.ಎ. (೧೯೪೭) ಪದವಿಗಳನ್ನು ಅಲ್ಲಿ ಪಡೆದರು. ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಕೆ. ವೆಂಕಟರಾಮಪ್ಪ, ಕುವೆಂಪು, ಜಿ.ವೆಂಕಟಸುಬ್ಬಯ್ಯ, ಎಂ.ಎಚ್. ಕೃಷ್ಣ, ರಾಳ್ಲಪಲ್ಲಿ ಕೃಷ್ಣಶರ್ಮ - ಮುಂತಾದ ಸಾಹಿತ್ಯಲೋಕದ ಅಗ್ರಗಣ್ಯರು ಇವರಿಗೆ ಗುರುಗಳಾಗಿದ್ದರು. ಭಾಷೆ, ಸಾಹಿತ್ಯ, ಛಂದಸ್ಸು, ಚರಿತ್ರೆ - ಮುಂತಾದ ವಿಷಯಗಳನ್ನು ಬೋಧಿಸಿದವರಾಗಿದ್ದರು. ಇವರೆಲ್ಲರಿಂದ ಪಡೆದ ಸ್ಫೂರ್ತಿ ಅಪಾರ.

ಎಲ್.ಬಿ. ದಾವಣಗೆರೆ ಡಿ.ಆರ್.ಎಂ. ಕಾಲೇಜಿನಲ್ಲಿ ಮತ್ತು ಮೈಸೂರಿನ ಯುವರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದರು. ೧೯೬೭ರಲ್ಲಿ ಮೈಸೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯನ್ನು ಪ್ರವೇಶಿಸಿ ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೭೯ರಲ್ಲಿ ನಿವೃತ್ತರಾದರು.

೧೯೭೫-೭೭ರ ಅವಧಿಯಲ್ಲಿ ನಾನು ಕನ್ನಡ ಎಂ.ಎ. ವಿದ್ಯಾರ್ಥಿಯಾಗಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದೆ. ಆಗ ಎಲ್.ಬಿ. ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದರು. ಶ್ವೇತಧಾರಿ

ಜಂಗಮದಾರಿ ಎಂದು ಹೆಸರಿಗೆ ಬಾಜನರಾಗಿದ್ದ ಎಲ್.ಬಿ. ಕನ್ನಡ ಅಧ್ಯಯನ ಸಂಸ್ಥೆಯನ್ನು ಬೌದ್ಧಿಕವಾಗಿ ಕಟ್ಟುವಲ್ಲಿ ಗಮನಾರ್ಹ ಪಾತ್ರ ವಹಿಸಿದರು. ಸಂತನಂತೆ ಬದುಕುತ್ತಿದ್ದ ಅವರು ಬಸವಣ್ಣನ ತತ್ತ್ವಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಆಡಂಬರವಿಲ್ಲದೆ ಬದುಕನ್ನು ಕಟ್ಟಿಕೊಂಡವರು.

ಹಳಗನ್ನಡ, ನಡುಗನ್ನಡ ಯಾವುದೇ ವಿಷಯವಾಗಲಿ ವರ್ತಮಾನಕ್ಕೆ ತಂದು ನಿಲ್ಲಿಸುವ ಅವರ ವಿದ್ವತ್ತಿಗೆ, ಪಾಂಡಿತ್ಯಕ್ಕೆ ವಿದ್ಯಾರ್ಥಿಸಮೂಹ ತಲೆದೂಗುತ್ತಿತ್ತು. ವಿದ್ಯಾರ್ಥಿಗಳ ಬದುಕು ಹಸನಾಗಬೇಕೆಂಬ ಹಂಬಲ ಅವರ ಅಂತರಂಗದ ಬಯಕೆಯಾಗಿತ್ತು. ಪಠ್ಯದೊಂದಿಗೆ ಪಠ್ಯೇತರ ಸಂಗತಿಗಳನ್ನು, ಸಮಕಾಲೀನ ಸಂಗತಿಗಳನ್ನು ಮನವರಿಕೆ ಮಾಡುವ ರೀತಿಗೆ ವಿದ್ಯಾರ್ಥಿಗಳು ಮನಸೋತಿದ್ದರು. ದೇವನೂರು ಮಹದೇವ ಅವರ ಕುಸುಮಬಾಲೆಯನ್ನು ಲಿಯಾಕಾರವಿನ್ಯಾಸ ಎಂಬ ಪ್ರಕಾರದಲ್ಲಿ ಸುಧಾ ವಾರಪತ್ರಿಕೆಯಲ್ಲಿ ರೂಪಿಸಿಕೊಡುವುದರ ಮೂಲಕ ಎಲ್.ಬಿ. ಶಿಷ್ಯವತ್ಸಲರೆಂಬುದನ್ನು ಸಾಬೀತುಪಡಿಸಿದರು. ಅಸಮಾನತೆ ಅನ್ಯಾಯಗಳ ಬಗೆಗೆ ಕುದಿಯುತ್ತಿದ್ದ ಎಲ್.ಬಿ. ಹೊರನೋಟದಲ್ಲಿ ಕಠಿಣರಂತೆ ಕಂಡರೂ ಅವರ ಅಂತರಂಗ ಮಾತ್ರ ಮೃದುವಾದುದು. ಎಲ್.ಬಿ. ನಿಷ್ಠುರವಾದಿ, ಖಂಡಿತವಾದಿ ಎಂದೇ ಹೆಸರಾಗಿದ್ದವರು.

ಸಿ.ಪಿ. ಸಿದ್ಧಾಶ್ರಮ ಅವರು ಹೇಳುವಂತೆ ತಾವು ನಂಬಿದ ಮೌಲ್ಯ ಆದರ್ಶಗಳಿಗೆ ಚ್ಯುತಿ ಬಂದರೆ ಎಂತಹ ಲೌಕಿಕ ಲಾಭ, ಅವಕಾಶಗಳನ್ನು ಮುಲಾಜಿಲ್ಲದೆ ತಿರಸ್ಕರಿಸಿ ಸೃಷ್ಟಿಯಾಗಬಹುದಾದ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವ ಆತ್ಮಸ್ಥೈರ್ಯವುಳ್ಳ ಗಟ್ಟಿಗರು. ಇದಕ್ಕೆ ಉದಾಹರಣೆಯಾಗಿ ಪ್ರಸಂಗವೊಂದನ್ನು ಇಲ್ಲಿ ಸ್ಮರಿಸಬಹುದು. ಹತ್ತು ಹದಿನೈದು ವರ್ಷಗಳ ಹಿಂದೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಗುಂಡ್ಲುಪೇಟೆಯಲ್ಲಿ ನಡೆಯಿತು. ಆ ಸಮ್ಮೇಳನಕ್ಕೆ ಬಸವರಾಜು ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಒಪ್ಪಿಸಲಾಗಿತ್ತು. ಆದರೆ ಆಮಂತ್ರಣ ಪತ್ರಿಕೆಗಳಲ್ಲಿ ಸಾಹಿತಿಗಳಿಗೆ, ಸಮ್ಮೇಳನಾಧ್ಯಕ್ಷರಿಗೆ ಸೂಕ್ತ ಸ್ಥಾನಮಾನ ನೀಡದೆ, ಮಠಾಧಿಪತಿಗಳು ಮತ್ತು ರಾಜಕಾರಣಿಗಳಿಗೆ ಪ್ರಾಮುಖ್ಯ ನೀಡಲಾಗಿತ್ತು. ಇದನ್ನು ಕಂಡ ಬಸವರಾಜು ಅವರು ಸಮ್ಮೇಳನಾಧ್ಯಕ್ಷ ಗೌರವವನ್ನು ತಿರಸ್ಕರಿಸಿದರು. ಅನಂತರ ಅವರನ್ನು ಒಪ್ಪಿಸಲು ನಡೆಸಿದ ಪ್ರಯತ್ನಗಳೆಲ್ಲ ವಿಫಲಗೊಂಡವು. ಸಾಹಿತ್ಯ ಸಮ್ಮೇಳನದಂತಹ ಶುದ್ಧ ಸಾಹಿತ್ಯದ ವೇದಿಕೆಯಲ್ಲಿ ಸಾಹಿತಿಗಳಿಗೆ ಮಾನ್ಯತೆ ದೊರಕಬೇಕೆಂಬುದು ಬಸವರಾಜು ಅವರ ದೃಢ ನಿಲುವು ಆಗಿತ್ತು. ಹಾಗೆಯೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಒಪ್ಪಿಯೂ ಆ ಅಧ್ಯಕ್ಷ ಪಟ್ಟದ ಮೆರವಣಿಗೆಯನ್ನು ಬಸವರಾಜು ಅವರು ನಿರಾಕರಿಸಿ ತಮ್ಮ ಸರಳತೆಯನ್ನು ಮೆರೆಯುತ್ತಾರೆ.

ಒಮ್ಮೆ ಅಧ್ಯಯನ ಸಂಸ್ಥೆಯ ಆವರಣದ ಮುಂದಿನ ಪಾರ್ಕಿನಲ್ಲಿ ಸಂಶೋಧನಾ ವಿದ್ಯಾರ್ಥಿಯೊಬ್ಬ ಸಿಗರೇಟು ಸೇದುತ್ತಿದ್ದ. ಇದ್ದಕ್ಕಿದ್ದಂತೆ ಎಲ್.ಬಿ. ಸಂಸ್ಥೆಯ ಒಳಗಿನಿಂದ ಹೊರಬಂದರು. ಅವರನ್ನು ನೋಡುತ್ತಿದ್ದಂತೆಯೇ ಆ ವಿದ್ಯಾರ್ಥಿ ಗಾಬರಿಗೊಂಡು ಬಾಯಲ್ಲಿದ್ದ ಸಿಗರೇಟನ್ನು ಸ್ವಲ್ಪ ದೂರಕ್ಕೆ ಎಸೆದುಬಿಟ್ಟ. ಆ ದೃಶ್ಯವನ್ನು ಗಮನಿಸಿದ ಎಲ್.ಬಿ. ಬಾಗಿಹೋಗಿದ್ದ ಗರಿಕೆಹುಲ್ಲಿನ ಒಳಗಡೆಯಿಂದ ಹೊಗೆಯಾಡುತ್ತಿದ್ದ ಜಾಗಕ್ಕೆ ಹೋಗಿ ಸಿಗರೇಟಿನ ತುಂಡನ್ನು ಎತ್ತಿಕೊಂಡು ಬಂದು ಆ ವಿದ್ಯಾರ್ಥಿಯ ಬಾಯಿಗಿಟ್ಟು, ಸೇದು, ಸೇದು ಸಿಗರೇಟು ನಿನ್ನದು, ನನ್ನನ್ನು ನೋಡಿ ನೀನು ಯಾಕೆ ಬಿಸಾಕಬೇಕು ಬಿಸಾಕಬಾರದು, ಸೇದು ಎಂದು ಹೇಳಿ ಆ ಹುಡುಗ ಒಂದೆರಡು ಸಲ ಸೇದಿ ಹೊಗೆ ಬಿಡುವ ತನಕ ಎಲ್.ಬಿ. ಅವನ ಮುಂದೆಯೇ ನಿಂತಿದ್ದರು. ಆಮೇಲೆ ತಮ್ಮ ಪಾಡಿಗೆ ತಾವು ಹೊರಟರು. ಚಿಕ್ಕವರೇ ಆಗಲಿ, ದೊಡ್ಡವರೇ ಆಗಲಿ ಎಲ್.ಬಿ. ವ್ಯಕ್ತಿಸ್ವಾತಂತ್ರ್ಯಕ್ಕೆ ಬೆಲೆ ಕೊಡುತ್ತಿದ್ದರು ಎಂಬುದಕ್ಕೆ ಈ ಪ್ರಸಂಗ ಒಂದು ಉದಾಹರಣೆ.

ಸಾಹಿತ್ಯಲೋಕದಲ್ಲಿ ಎಲ್.ಬಿ. ಆರಿಸಿಕೊಂಡದ್ದು ಸುಗಮಮಾರ್ಗಕ್ಕಿಂತ ಕಲ್ಲುಮುಳ್ಳಿನ ಹಾದಿಯನ್ನು. ಆ ಹಾದಿಯಲ್ಲಿ ಸಾಹಿತ್ಯಲೋಕದ ಒಂಟಿಸಲಗದಂತೆ ಗೋಚರವಾದವರು. ಗ್ರಂಥ ಸಂಪಾದನೆ, ಕಾವ್ಯಾನುವಾದ, ಸಂಶೋಧನ ಬರಹ, ಸರಳ ಗದ್ಯಾನುವಾದ- ಇತ್ಯಾದಿಗಳನ್ನು ಗಮನಿಸಿದರೆ ಅವರೊಳಗೆ ವಿದ್ವತ್ ಲೋಕದ

ಸೀಮಾಪುರುಷನೇ ಅಡಗಿತ್ತು ಎನಿಸುತ್ತದೆ. ತಮ್ಮ ಶೋಧನ ಪಥದಲ್ಲಿ ಸತ್ಯವನ್ನು ನೇರವಾಗಿ ಹೇಳುವ ಅವರ ವ್ಯಕ್ತಿತ್ವದಿಂದಾಗಿ ಅನೇಕರಲ್ಲಿ ಇರಿಸುಮುರಿಸು ಉಂಟಾಗಿತ್ತು. ಅದೇನೇ ಇರಲಿ ಭಿನ್ನಾಭಿಪ್ರಾಯಗಳ ನಡುವೆಯೂ ಅವರ ಕೆಲಸ ಅತ್ಯಂತ ಗಮನಾರ್ಹವಾಗಿ ಕಂಡಿತು.

ಪಂಪ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ದೇವರದಾಸಿಮಯ್ಯ, ಸರ್ವಜ್ಞ, ನಿಜಗುಣ ಶಿವಯೋಗಿ- ಮುಂತಾದವರ ಬಗ್ಗೆ ಎಲ್.ಬಿ. ಗಂಭೀರವಾದ ಸಾಹಿತ್ಯ ಕೃಷಿ ನಡೆಸಿದ್ದಾರೆ. ಹಿಂದಿನವರು ಮಾಡಿದ ಕೆಲಸಗಳನ್ನು ಗಮನಿಸಿ ಪುನರ್ ಪರಿಷ್ಕರಣ ಮಾಡಿ ಮೌಲ್ಯಮಾಪನ ಮಾಡಿದ್ದಾರೆ. ಮತ್ತೆ ಮತ್ತೆ ಪರಿಷ್ಕರಿಸುವ ಕೆಲಸದ ಬಗ್ಗೆ ಎಲ್.ಬಿ. ಅಭಿಪ್ರಾಯ ಹೀಗಿದೆ : ''ವಚನಸಾಹಿತ್ಯ ಮೊದಲುಗೊಂಡು ಅಥವಾ ಅದೇ ರೀತಿಯಾಗಿ ಪ್ರಮುಖವಾಗಿ ಇಲ್ಲಿಯವರೆಗೆ ಏನೆಲ್ಲ ಗ್ರಂಥಗಳ ಸಂಪಾದನೆಯಾಗಿದೆಯೋ ಅವೆಲ್ಲ ಪುನರ್ ಪರಿಷ್ಕರಣಗೊಳ್ಳಬೇಕು. ಹೊಸ ಶತಮಾನದ ಆಗುಹೋಗುಗಳ ಹಿನ್ನೆಲೆಯಲ್ಲಿ ಪುನರ್‌ವಿಮರ್ಶೆ, ಪುನರ್‌ಮೌಲ್ಯೀಕರಣ ನಡೆಯಬೇಕು. ಇಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಹಳಗನ್ನಡ ಸಾಹಿತ್ಯವನ್ನೂ ಆಳವಾಗಿ ಅಧ್ಯಯನ ಮಾಡಿದವರಾಗಿರಬೇಕು. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರು ಕೂಲಿ ಆಳಾಗಿ ಬರಬಾರದು. ತಮ್ಮನ್ನು ತೆತ್ತುಕೊಂಡು ತಮ್ಮನ್ನು ಅರ್ಪಿಸಿಕೊಂಡು ಕೆಲಸ ಮಾಡುವವರು ಬರಬೇಕು. ಪಾಂಡಿತ್ಯ ಸಂಸ್ಕೃತಿಯ ಬಗ್ಗೆ ಅಭಿಮಾನ, ಕಠಿಣ ವಿಮರ್ಶೆಗೆ ಹಿಂಜರಿಯದಂಥ ವ್ಯಕ್ತಿಗಳು ಸಂಶೋಧನೆ ಮುಂದುವರಿಸಿ ಹಳೆಯ ಗ್ರಂಥಗಳನ್ನು ಜನರಿಗೆ ಅರ್ಪಿಸಬೇಕು. ಅದೇ ನಾವು ಅವರಿಗೆ ಮಾಡುವ ಸೇವೆ.''

ಎಲ್.ಬಿ. ಅವರು ಗ್ರಂಥಸಂಪಾದನಾ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳಿಗೆ ಕಾರಣರಾದರು. ಅವರ ಗ್ರಂಥ ಸಂಪಾದನೆಯ ಕೆಲಸವೆಂದರೆ ಪ್ರವಾಹದ ವಿರುದ್ಧ ಈಜಿದಂತೆ. ಲಭ್ಯವಿರುವ ಗ್ರಂಥಗಳ ಪಾಠಾಂತರಗಳನ್ನು ಶೋಧಿಸಿ ಯಾವುದು ಮೂಲಪಾಠ ಎಂಬುದನ್ನು ನಿರ್ಣಯಿಸಿ ಹೇಳುವ ಜವಾಬ್ದಾರಿಯುತ ಕೆಲಸ. ಅದ್ದರಿಂದ ಇದೊಂದು ರೀತಿಯ ಸಿ.ಐ.ಡಿ. ಕೆಲಸದಂತೆ. ಇಂಥದ್ದರಲ್ಲಿ ಎಲ್.ಬಿ. ನಿಷ್ಣಾತರಾಗಿದ್ದರು. ಅದರಲ್ಲೂ ಜೈನಕಾವ್ಯಗಳನ್ನು, ವೀರಶೈವ ಸಾಹಿತ್ಯವನ್ನು, ಶಾಸ್ತ್ರಗ್ರಂಥಗಳನ್ನು ಸಂಪಾದಿಸುವಲ್ಲಿ ತಮ್ಮ ವಿದ್ವತ್ತನ್ನು ಮೆರೆದರು. ಜಾತ್ಯತೀತ ಧೋರಣೆಯನ್ನು ಪ್ರತಿಪಾದಿಸಿದ ಆದಿಪುರಾಣದಂತಹ ಜೈನಕೃತಿಯಾಗಲಿ, ಬುದ್ಧಚರಿತದಂತಹ ಬೌದ್ಧಕೃತಿಯಾಗಲಿ ಎಲ್.ಬಿ. ಅವರ ಪಾಂಡಿತ್ಯ, ವಿದ್ವತ್ತಿನ ಆಗರಗಳಾಗಿವೆ. ಇಂಥವುಗಳ ನಡುವೆ ತೊರವೆ ರಾಮಾಯಣವನ್ನಾಗಲಿ, ಶಬ್ದಮಣಿದರ್ಪಣವನ್ನಾಗಲೀ ಅವಜ್ಞೆಯಿಂದ ಕಾಣಲಿಲ್ಲ. ಮುನ್ನುಡಿಗಳಲ್ಲದೆ ಟಿಪ್ಪಣಿಗಳನ್ನು ವ್ಯಕ್ತಪಡಿಸುತ್ತ ಬಂದರು. ಆ ಕಾರಣಕ್ಕಾಗಿಯೇ ಅವರು ಸಂಪಾದಿಸಿದ ಗ್ರಂಥಗಳಲ್ಲಿ ಬಸವೇಶ್ವರ ವಚನಗಳು, ಅಲ್ಲಮನ ವಚನಚಂದ್ರಿಕೆ, ಶಿವದಾಸಗೀತಾಂಜಲಿ, ಬಸವ ವಚನಾಮೃತ, ಅಕ್ಕನ ವಚನಗಳು- ಮುಂತಾದ ಹಲವು ಕೃತಿಗಳು ಓದುಗರ ಮನದಲ್ಲಿವೆ.

ಸಾಹಿತ್ಯ ಪಂಡಿತರಿಗಷ್ಟೇ ಸೀಮಿತವಾಗಬಾರದು ಪಾಮರರಿಗೂ ತಲುಪಬೇಕು, ಪರಂಪರೆಯ ತಿಳುವಳಿಕೆ ಅವರಿಗೂ ಆಗಬೇಕು ಎಂಬ ಸದುದ್ದೇಶ ಎಲ್.ಬಿ. ಅವರಲ್ಲಿ ಬಲವಾಗಿತ್ತು. ಆ ಕಾರಣದಿಂದಲೇ ಅವರು ಹಲವಾರು ಮಹಾಕಾವ್ಯ, ಸರಳಗದ್ಯರೂಪಗಳನ್ನು ಹೊರತಂದರು. ಸರಳ ಆದಿಪುರಾಣ, ಪಂಪನ ಆದಿಪುರಾಣ ಕಥಾಮೃತ, ಸರಳ ಹರಿಶ್ಚಂದ್ರ ಚರಿತೆ, ಸರಳ ಶೂನ್ಯಸಂಪಾದನೆ, ಭಾಸನ ರಾಮಾಯಣ ನಾಟಕ ಹಾಗೂ ಬಾರತ ರೂಪಕಗಳು- ಮುಂತಾದ ಕೃತಿಗಳನ್ನು ಹೆಸರಿಸಬಹುದಾಗಿದೆ.

ವಚನಗಳನ್ನು ಸಂಪಾದಿಸುವಲ್ಲಿ ಹಲವಾರು ಸಮಸ್ಯೆಗಳೇ ಎದುರಾಗಿದ್ದವು. ಇದರ ಅರಿವಿದ್ದ ಎಲ್ .ಬಿ. ಸಂಬಂಧಿಸಿದ ಹಸ್ತಪ್ರತಿಗಳನ್ನು ಶೋಧಿಸಿ ಆಗಿರುವ ಪರಿಷ್ಕರಣ ಕಾರ್ಯವನ್ನು ತಾಳೆ ನೋಡಿ ಶುದ್ಧ ಪಾಠ ನಿರ್ಣಯ ಮಾಡುವ ಕೆಲಸದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡದ್ದು ಮಹತ್ವದ ಸಂಗತಿ. ಪ್ರಮುಖವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಬಸವಣ್ಣ, ಅಲ್ಲಮಪ್ರಭು, ದೇವರದಾಸಿಮಯ್ಯ, ಅಕ್ಕಮಹಾದೇವಿ ಮುಂತಾದವರ ವಚನಗಳನ್ನು ಶುದ್ಧ ರೂಪದಲ್ಲಿ ಪ್ರಕಟಿಸುವ ಕೆಲಸದಲ್ಲಿ ಎಲ್.ಬಿ.

ತೊಡಗಿದ್ದುಂಟು. ಬಸವಪೂರ್ವ ವಚನಕಾರರು, ದೇವರದಾಸಿಮಯ್ಯನ ವಚನಗಳು, ಬಸವಣ್ಣನವರ ಷಟ್ಸ್ಥಲ ವಚನಗಳು, ಅಕ್ಕನ ವಚನಗಳು, ಸೊನ್ನಲಾಪುರದ ಸಿದ್ಧರಾಮನ ನಿಜವಚನಗಳು, ನೂರಾರು ಶರಣರ ಸಾವಿರ ವಚನಗಳು- ಹೀಗೆ ಅನೇಕ ಕೃತಿಗಳು ಎಲ್.ಬಿ. ಅವರ ವಿದ್ವತ್ತಿಗೆ ಸಾಕ್ಷಿಯಾದವು.


ಶಿವದಾಸ ಗೀತಾಂಜಲಿಯಂತೂ ಎಲ್.ಬಿ. ಅವರ ಗ್ರಂಥಸಂಪಾದನಾ ಕೃತಿಗಳಲ್ಲಿಯೇ ಮಹತ್ವದ್ದಾಗಿದೆ. ಹರಿದಾಸರಿಗಿಂತ ಮೊದಲೇ ಶಿವದಾಸರು ಹಾಡುಗಳನ್ನು ರಚನೆ ಮಾಡಿದ್ದರು ಎಂಬ ಸಂಗತಿಯನ್ನು ಇವರಲ್ಲಿ ತೋರಿಸಿಕೊಟ್ಟರು.

ಈ ಕೃತಿಯಲ್ಲಿ ೨೭ ಜನ ಶಿವದಾಸರ ಹಾಡುಗಳನ್ನು ಸಂಕಲಿಸಲಾಗಿದೆ. ಬಸವನ ಸಮಕಾಲೀನರಾದ ಅಲ್ಲಮಪ್ರಭು, ಬಸವ, ಚನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ, ಸೊಡ್ಡಳ ಬಾಚರಸ, ಹಾವಿನಾಳ ಕಲ್ಲಯ್ಯ, ಅಮುಗಿದೇವಯ್ಯ, ಗುರುಪುರದ ಮಲ್ಲಯ್ಯ, ಆದಯ್ಯ, ಬಹುರೂಪಿ ಚೌಡಯ್ಯ, ಅಗ್ಗಣಿ ಹೊನ್ನಯ್ಯ ಮತ್ತು ಬಸವನ ನಂತರದವರಾದ ಕರಸ್ಥಲ ನಾಗಿದೇವ, ಗುರುಬಸವ, ನಿರ್ವಾಣ ಜೋಳೇಶ ಶಂಕರದೇವ, ಚಿತ್ತಲೇಶ್ವರ, ಚಿಕ್ಕಯ್ಯ ಹಾಗೂ ಕಾಲದ ವಿವರ ಸರಿಯಾಗಿ ತಿಳಿಯದ ಪುಷ್ಪರಹೊನ್ನಯ್ಯ, ಅಗ್ಗಣಿ ಹಂಪಯ್ಯ- ಮುಂತಾದವರ ಹಾಡುಗಳನ್ನು ಇಲ್ಲಿ ಮೊದಲಬಾರಿಗೆ ಸಂಕಲಿಸಿ ಕೊಡಲಾಗಿದೆ. ಅನುಬಂಧದಲ್ಲಿ ಪಲ್ಲವಿಗಳ ಅಕಾರಾದಿ, ಗಮನಾರ್ಹ ಪದಸೂಚಿ, ಹಾಡುಗಳ ಅಂಕಿತ ಮತ್ತು ಕರ್ತೃಗಳು, ರಾಗ-ತಾಳಗಳ ಅಕಾರಾದಿ, ರಾಗಲಕ್ಷಣಗಳು, ವಚನಾಂಕಿತಗಳು ಮತ್ತು ವಚನಕಾರರು, ಹಾಡುಗಳ ವ್ಯಾಖ್ಯಾನ, ಕಠಿಣ ಪದಕೋಶದಂತಹ ತುಂಬ ಉಪಯುಕ್ತವಾದ ಮಾಹಿತಿಗಳನ್ನು ನೀಡಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. (ಪಾರಂಗತ, ಪುಟ ೬೯)

ಮಹಾದೇವಯ್ಯನ ಮೂಲಕೃತಿಗೆ ಸಮೀಪವಾದ ಉತ್ತಮ ಪರಿಷ್ಕರಣವನ್ನು ಎಲ್.ಬಿ. ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ ಎಂಬ ಹೆಸರಿನಲ್ಲಿ ಹೊರತಂದರು. ಇದು ಒಂದು ಶೂನ್ಯ ಸಂಪಾದನೆಯ ಮೈಯಗೆಡಲೀಯದೇ ಸಂಗಟಿಸಿದ ವಸ್ತು ಶರೀರ ಎಂದರು. ಛಂದಸ್ಸು, ವ್ಯಾಕರಣ ಮತ್ತು ನಿಘಂಟು ಕ್ಷೇತ್ರದಲ್ಲಿ ಎಲ್.ಬಿ. ಗಮನಾರ್ಹ ಕೆಲಸ ಮಾಡಿದರು. ಕನ್ನಡ ಛಂದಸ್ಸಂಪುಟ, ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಹಳಗನ್ನಡ ವಿಶೇಷ ಶಬ್ದಕೋಶ- ಮುಂತಾದವು ಉಲ್ಲೇಖಿಸಬಹುದಾದ ಗ್ರಂಥಗಳು. ಶಾಪಾಂತರ, ಜಾಲಾರಿ, ಡೊಂಕುಬಾಲದ ನಾಯಕರು- ಸಂಕಲನಗಳನ್ನು ಹೊರತರುವುದರ ಮೂಲಕ ಕಾವ್ಯರಚನೆಗೂ ತಮ್ಮನ್ನು ತೊಡಗಿಸಿಕೊಂಡು ಸಮರ್ಥ ಕವಿ ಎನಿಸಿದರು. ಅವರ ಸಾಮಾಜಿಕ ಪ್ರಜ್ಞೆ ಸ್ಫೋಟಗೊಳ್ಳಲು ಕಾವ್ಯ ಸಮರ್ಥ ವೇದಿಕೆಯಾಯಿತು. ಸಮಾಜಮುಖಿ ಚಿಂತನೆ, ದಲಿತರ ಕಾಳಜಿ ಕವಿತೆಗಳಲ್ಲಿ ವ್ಯಕ್ತವಾಯಿತು.

ಎಲ್.ಬಿ. ಅವರ ಅಪಾರವಾದ ವಿದ್ವತ್ತು, ಪಾಂಡಿತ್ಯ ಮತ್ತು ನಿರಂತರ ಸಾಹಿತ್ಯಿಕ ಚಟುವಟಿಕೆಗಳನ್ನು ಗಮನಿಸಿ ಬಂದ ಪ್ರಶಸ್ತಿಗಳು, ಗೌರವಗಳು ಹಲವಾರು. ಪಂಪಪ್ರಶಸ್ತಿ, ಬಸವಪುರಸ್ಕಾರ ರಾಷ್ಟ್ರೀಯ ಸಮ್ಮಾನ, ಕೇಂದ್ರಸಾಹಿತ್ಯ ಅಕಾಡೆಮಿ ಭಾಷಾಸಮ್ಮಾನ, ರಾಷ್ಟ್ರಕವಿ ಗೋವಿಂದ ಪೈ ರಾಷ್ಟ್ರೀಯ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ, ಚಾವುಂಡರಾಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚಿದಾನಂದ ಪ್ರಶಸ್ತಿ, ಭೂಸನೂರಮಠ ಪ್ರತಿಷ್ಠಾನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಚಿತ್ರದುರ್ಗದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ- ಹೀಗೆ ಹಲವಾರು ಮನ್ನಣೆಗಳು, ಗೌರವಗಳು ಸಂದಿವೆ. ಎಲ್.ಬಿ. ಅವರಿಗೆ ಇವು ದೊರಕಿದ್ದರಿಂದ ಪ್ರಶಸ್ತಿಗಳ ಮೌಲ್ಯವೂ ಹೆಚ್ಚಾಯಿತು. ಕನ್ನಡ ಸಂಶೋಧನೆಯ ಇತಿಹಾಸದಲ್ಲಿ ಎಲ್.ಬಿ. ಅವರ ಸಾಧನೆ ಅತ್ಯಂತ ಗಮನಾರ್ಹವಾದುದು. ಒಂದು ಸಂಸ್ಥೆ ಮಾಡಬೇಕಾದ ಕೆಲಸವನ್ನು ವ್ಯಕ್ತಿಯೊಬ್ಬರು ಮಾಡಿತೋರಿಸಿದ್ದು ಮಹತ್ವದ ಸಂಗತಿ.

ಕನ್ನಡ ಪ್ರಾಧ್ಯಾಪಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬



ಅನುವಾದಿತ ಕವಿತೆಗಳು

ಚಂದ್ರಕಾಂತ ದೇವತಾಲೆಯವರ ಕಾವ್ಯದ ಬಗ್ಗೆ

ಹರಿಶಂಕರ ಪರಸಾಯಿ ಸ್ಮೃತಿ ಸಭೆಯಲ್ಲಿ ಭಾಗವಹಿಸಲು ಭೋಪಾಲ್‌ಗೆ ಹೋಗಿದ್ದೆ. ಚಂದ್ರಕಾಂತ ದೇವತಾಲೆಯವರೂ ಕೂಡ ಆಗಮಿಸಿದ್ದರು. ಒಂದು ಬೆಳಿಗ್ಗೆ ಅವರಿಗೆ, ತಮ್ಮ ಕವಿತೆಗಳನ್ನು ವಾಚಿಸಲು ಕೇಳಿಕೊಂಡೆ. ತಮ್ಮದೇ ಗಂಭೀರ ಶೈಲಿಯಲ್ಲಿ ಅವರು ವಾಚಿಸಿದರು. ನಾನು ಬೆರಗಾದೆ. ಸಂಕ್ಷಿಪ್ತ ವಸ್ತುವಿಗೆ ಪ್ರಾಣ ತುಂಬುವ ಅವರ ಕಲೆಗಾರಿಕೆಯನ್ನು ಹೇಗೆ ಹೊಗಳುವುದೋ ನನಗೆ ಗೊತ್ತಿಲ್ಲ. ಅವನ್ನೆಲ್ಲ ಪ್ರತಿ ಮಾಡಿಸಿಕೊಂಡು 'ಭಾಷಾ ಬಂಧನ್'ನಲ್ಲಿ ಪ್ರಕಟಿಸಿದೆ. ಬಂಗಾಳಿ ಓದುಗರ ಪ್ರತಿಕ್ರಿಯೆ ನನ್ನ ಊಹೆಯನ್ನೂ ಸೋಲಿಸಿತ್ತು. ಆ ಎಲ್ಲ ಕವಿತೆಗಳು ಬಂಗಾಳಿಗೆ ಹೊಸದಾಗಿತ್ತು.

ದೇವತಾಲೆಯವರು ಸುಮಾರು 50 ವರ್ಷಗಳಿಂದ ಬರೆಯುತ್ತ ಬಂದಿದ್ದಾರೆ. ಬರೆಯುತ್ತ ಬರೆಯುತ್ತ ಅವರ ಬದುಕೂ ಮತ್ತು ಅವರ ಕವಿತೆ ಎರಡೂ ಪರಸ್ಪರ ಪ್ರಭಾವಿಸಿಕೊಂಡಿವೆ ಹಾಗೂ ಪ್ರಕಾಶಮಾನವಾಗಿದೆ.

ಕವಿಯು ವೈಯಕ್ತಿಕ, ಸಾಂಸಾರಿಕ ಹಾಗೂ ಸಾಮಾಜಿಕ ಜೀವನದ ವರ್ಣನೆ ಮಾಡುವಾಗ ಇಡೀ ಭಾರತದ ಸಮಾಜದ ಚೆಲ್ಲಿಹೋದ ಮೌಲ್ಯಗಳ, ವಿಡಂಬನೆಗಳ ಅಭಿವ್ಯಕ್ತಿಯೇ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಅವರ ರಚನೆಗಳಲ್ಲಿ ಒಂದು ಮೌಲಿಕತೆಯಿದೆ, ಸ್ವಂತಿಕೆಯಿದೆ. ಅದ್ದರಿಂದ ಎದ್ದು ಕಾಣುತ್ತದೆ. ಕಾವ್ಯಕ್ಕೆ ಕವಿಯು ತನ್ನನ್ನು ತಾನು ಹೆಚ್ಚು ಅರ್ಪಣೆ ಮಾಡಿಕೊಂಡಿರುವುದರಿಂದ ಇದು ಸಾಧ್ಯವಾಗಿದೆ.

ಅವರ ಪ್ರತಿಬದ್ಧತೆ ಪ್ರಬುದ್ಧವಾಗಿದೆ. ಈ ಪ್ರತಿಬದ್ಧತೆಯು ಸಾಮಾನ್ಯ ಜನರ, ನಿಮ್ನ ವರ್ಗದವರ, ಕೂಲಿಕಾರ್ಮಿಕರ, ರೈತರ ಜೀವನವನ್ನು ಅವರು ಹೆಚ್ಚು ಹತ್ತಿರದಿಂದ ನೋಡುವುದರಿಂದ ಮತ್ತು ಅದಕ್ಕೆ ಬೇಕಾದ ಮುತ್ತುರತ್ನಗಳನ್ನು ಆರಿಸಿಕೊಳ್ಳುವ ಕಲೆಗಾರಿಕೆಯಿಂದ ಬಿದ್ದಿದೆ.

ಅವರ ಕಾವ್ಯದಲ್ಲಿ ಬೆಂಕಿಯಿದೆ. ಬೆಂಕಿ ಬಗ್ಗೆ ಬರೆದ ಅವರ ಲೇಖನಿಯ ಬಾಯಿಯೇ ಸುಡುತ್ತಿದೆಯೇನೋ ಅನ್ನಿಸುತ್ತದೆ. ಆ ಬೆಂಕಿಯೇ ಜೀವನವನ್ನು ಸುಡುತ್ತಿದೆ. ಇದು ಸ್ಪಷ್ಟವಾಗಿ ಗೋಚರಿಸುತ್ತದೆ.

ಅವರ ಸೃಜನಾತ್ಮಕ ವ್ಯಕ್ತಿತ್ವವನ್ನು ಅರಿಯಬೇಕಾದರೆ, ಜೀವನವರ್ಣನೆಯ ಚಮತ್ಕಾರಗಳಲ್ಲಿ ಅರಿಯಬೇಕು. ಜೀವನ ಕವಿತೆಗಳು ಜೀವನವನ್ನು ಹೆಚ್ಚೆಚ್ಚು ಅಲಂಕೃತಗೊಳಿಸುತ್ತವೆ.

ಇಡೀ ಪೃಥ್ವಿಯ ವಿಸ್ತಾರವೇ ಅವರ ಕವಿತೆಗಳಲ್ಲಿದೆ ಎಂದು ನನಗನ್ನಿಸುತ್ತದೆ. ಕವಿಯ ನೋಟ ಇಡೀ ವಿಶ್ವದ ಮೇಲಿದೆ. ಆದ್ದರಿಂದ ಅವರು ವಿಖ್ಯಾತ ಕವಿಯಾಗಿದ್ದಾರೆ.

ಇವರ ಕಾವ್ಯಕ್ಕೆ ಮುಖಾಮುಖಿಯಾಗದ ಹೊರತು ಸಾಂಪ್ರದಾಯಿಕ ಹಿಂದೀ ಕಾವ್ಯದ ಸ್ವಭಾವ ಅರಿಯುವುದು ಅಸಾಧ್ಯ ಎಂಬುದೇ ನನ್ನ ಅಭಿಪ್ರಾಯ.

ಮಹಾಶ್ವೇತಾದೇವಿ

ಹಿಂದಿ ಮೂಲ : **ಚಂದ್ರಕಾಂತ್ ದೇವತಾಲೆ**
ಪತ್ಥರ್ ಫೇಂಕ್ ರಹಾ ಹೂಂ ಹಿಂದಿಯ ಕವನಸಂಕಲನದಿಂದ
ಕನ್ನಡಕ್ಕೆ : **ಸಿ.ವಿ. ಶೇಷಾದ್ರಿ ಹೊಳವನಹಳ್ಳಿ**

ನಮ್ಮ ಗೊಬ್ಬರವೇ ಬೇರೆಯಾಗಿದೆ

ಆಕಾಶ ಗಂಗೆಯಲ್ಲಿ ಮೀಯುತ್ತಿರುವ ನೀವು
ಎಂದಾದರೂ ಇಣುಕಿ ನೋಡಿರುವಿರೇನು
ನಮ್ಮ ಪ್ರಪಂಚದಲ್ಲಿ?
ನಮ್ಮ ಗಡಿ, ಬೆಂಕಿಯ ನದಿ

ನಮ್ಮ ಗೊಬ್ಬರವೇ ಬೇರೆಯಾಗಿದೆ
ಮುತ್ತಾತನ ಕೂಗಿನವರೆಗೂ ಇದೆ
ನೀರಿನ ಸತ್ವದಂತೆ ನಮ್ಮ ಬೇರುಗಳಲ್ಲಿ

ನಮ್ಮ ಮೌನದಲ್ಲಿ ಧಗಧಗಿಸುತ್ತಿವೆ ಒಲೆಗಳು
ನಮ್ಮ ಧ್ಯಾನದಲ್ಲಿ ಜ್ವಲಿಸುತ್ತಿವೆ ಜ್ವಾಲಾಮುಖಿಗಳು
ನಮ್ಮ ಪುಪ್ಪುಸಗಳಲ್ಲಿ
ದೃಶ್ಯಗಳನ್ನು ಹಿಂಡುತ್ತೇವೆ
ಜನಜೀವನದ ಹುಲ್ಲನ್ನು ಚೆನ್ನಾಗಿ ಅರಗಿಸಿಕೊಳ್ಳುವ
ಶಬ್ದಗಳನ್ನು ಕುರುಬನಂತೆ ಕೂಗುತ್ತೇವೆ

ಸ್ವಪ್ನಗಳ ಮುಳ್ಳು ದೊಡ್ಡಿಯಿಂದ
ಮುಖಗಳು ಕತ್ತಲಿಗಿಳಿಯುತ್ತವೆ
ಜೀವನದ ಕಾಲುಗಳನ್ನು ತೊಳೆಯಲು
[illegible] ನದಿ-ಸಮುದ್ರ-ಹೊಲ-ಮೈದಾನಗಳಿಗೆ ಹೋಗುತ್ತೇವೆ
ಶತ್ರುವಿನಿಂದ ತಪ್ಪಿಸಿಕೊಳ್ಳುವಂತೆ
ಎಚ್ಚರಿಕೆಯಿಂದ ಸಂಯಮದಿಂದಿರುತ್ತೇವೆ
ಸಾವಿಗೆ ಹೆದರುವುದಿಲ್ಲ

ಇರುವೆಗಳಂತೆ ಈ ನೆಲಕ್ಕೆ
ಅಂಟಿಕೊಂಡು ತೆವಳುವ
ಕಲ್ಲುಗಳ ಕಣ್ಣುಗಳಲ್ಲಿ ಇಣುಕುವ
ಈ ಮಹಾದೇಶದಸ ಕೋಟಿಗಟ್ಟಳೆ ನಾವುಗಳು
ಗಾಳಿಯ ಕೈ ಹಿಡಿದು
ಮರಗಳಂತೆ ನಿಲ್ಲಲೇ ಇಲ್ಲ

ಮಬ್ಬು ಮಬ್ಬಾದ, ನೀರಿನ ಗುಳ್ಳೆಯಂತಹ
ಧರ್ಮದಿಂದ ನೀವು ನಮ್ಮನ್ನು
ಹೊಡೆಯಬಯಸುತ್ತಿರುವಿರಿ
ಅಂತಿಮ ನಿರ್ಣಯದಲ್ಲಿ ನಮಗೆ ದೃಢ ನಂಬಿಕೆಯಿದೆ

ನಿಮ್ಮದೇ ವ್ಯರ್ಥ ಸುಭಾಷಿತ ನಿಮಗೇ
ಮೋಸ ಮಾಡುವುದೆಂದು
ತಮ್ಮ ಬೆನ್ನಿನ ಮೇಲೆ ಒಂದಲ್ಲ ಒಂದು
ರಾಕ್ಷಸನ ಕೈಯಿರುವ-
ಸಂತೆಯ ಜನಜಂಗುಳಿಯಲ್ಲಿ ಅಲಂಕರಿಸಿಕೊಂಡು
ಕೂತಿರುವ-
ನಿಮ್ಮ ಅನೇಕ ದೇವತೆಗಳು ಕೂಡ
ಸಹಾಯಕ್ಕೆ ಬರುವುದಿಲ್ಲವೆಂದು.



ಅದೃಶ್ಯವಾದ ನಂತರವೂ

ಗತಿಸಿ ಹೋದ ನಂತರವೂ
ಉಪದೇಶ ನೀಡುತ್ತಿರುತ್ತಾರೆ ಪೂರ್ವಜರು
ಅನೇಕ ಸಾರಿ ನಮ್ಮ ನಿದ್ದೆಯವರೆಗೂ...
ಕಂಬನಿಯಂತೆ ಜಿನುಗುವ
ಅವರ ಧ್ವನಿ ಕೂಡ ಕೇಳಿಸುತ್ತಿರುತ್ತದೆ

ಇದೇ ರೀತಿ ಕೆಲವು ಕವಿಗಳು
ಬೆಂಕಿಯ ಜ್ವಾಲೆಗಳಲ್ಲಿ ಅಥವಾ ಮಣ್ಣಿನಲ್ಲಿ
ಕಾಣೆಯಾದ ನಂತರವೂ ಕೂಡ
ಸುತ್ತುತ್ತಿರುತ್ತಾರೆ ಎಚ್ಚರಿಕೆಯಂತೆ... ಮತ್ತು
ರಚಿಸುತ್ತಿರುತ್ತಾರೆ ಕವಿತೆ

ಅವರ ಶಬ್ದಗಳ ನಡುವೆ ಬಿಟ್ಟಿರುತ್ತದೆ ಜಾಗ
ಅದರಲ್ಲಿ...
ಭೂಮಿಯು ಬೀಸೋಕಲ್ಲು ಬೀಸುವ ಶಬ್ದದ ಜೊತೆಗೆ
ರಾಕ್ಷಸರ ಪೇಟೆ ಮತ್ತು ಕೊಲೆಗಾರರ ಪುಣ್ಯವನ್ನು
ಹಂಚುತ್ತಿರುವ ಮುಖವಾಡಗಳ ವಿರುದ್ಧ
ನಿರಂತರವಾಗಿ ಮೊಳಗುತ್ತಿರುವ ಅಪಾಯದ ಘಂಟೆಗಳು...
ಎಚ್ಚರಿಕೆ, ನಮ್ಮ ನಾಲಿಗೆಗೆ ಕರೆಂಟ್ ಹೊಡೆಯುತ್ತಿರುತ್ತದೆ

ವಿಶೇಷಣಗಳ ಗೂಳಿ ಕಾಳಗ

ಸಮಾಜ ಸೇವಕರ ಹವ್ಯಾಸ ಮತ್ತು ಕೆಲಸದಂತೆ
ದೀಪಗಳ ಬೆಳಗುಬಿಕೆ ಮತ್ತು
ವೇದಿಕೆ ಮೇಲೆ ತುಂಬಿ ತುಳುಕುತ್ತಿರುವ ಜನಜಂಗುಳಿ
ಹೂ ಹಾರಗಳ ಅರ್ಪಣೆ
ವೈದಿಕ ಋಕ್ಕುಗಳ ಮಂತ್ರಘೋಷ

ಅಭಿನಂದನೆಗಾಗಿ ಹೇಳಿದ ಮೊದಲ ವಾಕ್ಯದ ನಂತರವೇ
ವಿಗ್ರಹ ಮೆರುಗೊಳಿಸುವ ವಿಶೇಷಣಗಳ
ಹಗ್ಗಬಿಚ್ಚಿದ ಗೂಳಿಗಳಂತೆ ತಾಂಡವ

ಭೀಕರವಾದ ಕೆಂಪು ಬಟ್ಟೆಯಂತೆ
ಅವನ ಜೀವನ ಹಾರಾಡತೊಡಗಿತು

ಅದರ ವರ್ಣನೆಗೆ ನಿರೂಪಣೆಗಾರರು
ಪ್ರಮುಖ, ಪ್ರತಿಷ್ಠಿತ ಎಂಬ ಮುಖವಾಡ ಹಾಕಿ
ಸುಭಾಷಿತವನ್ನೂ ಬಿಡಲಿಲ್ಲ ಹಾಳುಮಾಡುತ್ತಿದ್ದರು

ಒಂದು ರೀತಿಯ...
ಪಿಕಾಸೋನ ಗೂಳಿ ಕಾಳಗವಂತಹ ದೃಶ್ಯ
ಸ್ಪೇನಿನ ಹಳೆಯ ದಿನಗಳು ನೆನಪಾದವು
ಆ... ಏರಿನಾ... ಮತ್ತು ಅದರಲ್ಲಿ
ಗೂಳಿ ಗೆಲ್ಲುವ ಯತ್ನದಲ್ಲಿ ರಕ್ತಸಿಕ್ತ ವೀರರ ಸಾವು

ಆದರೂ...
ಪ್ರೇಕ್ಷಕರ ಚಪ್ಪಾಳೆ...
ಕ್ಲಿಕ್... ಕ್ಲಿಕ್...

ಪತ್ರಕರ್ತರ, ಫೋಟೋಗ್ರಾಫರ್‌ರ ನೂಕುನುಗ್ಗಾಟ
ತನ್ನ ಕಳ್ಳತನದ, ಮನೆಹಾಳ ಇತಿಹಾಸ ಮರೆತು
ಗದ್ಗದಗೊಂಡ ಸಮ್ಮಾನಿತ ಅಮೃತಪುರುಷ
ಗುಣಗಾನದಾಯುಧದಿಂದ ತನ್ನ
ಸಾವನ್ನು ಅರಿಯಲೇ ಇಲ್ಲ

ಆದಾಗ್ಯೂ... ಅಪರಾಧದ ಡಾಯರಿಯಲ್ಲಿ ಬರೆದಿರುವ
ಅವನ ಇತಿಹಾಸದ ಕರಪತ್ರ ಕದ್ದು ಮುಚ್ಚಿ
ಹಂಚಲಾಯಿತು

ಆದರೂ... ಸಮೃದ್ಧಿ ಮತ್ತು ಜನಗಳ ಕಾಂತಿಯಲ್ಲಿ
ಹೊಳೆಹೊಳೆಯುತ್ತ ಆತ ಹೇಳುತ್ತಿದ್ದಾನೆ...
ತನ್ನ ಆಚರಣೆಯ ಒಣಗಿದ ನದಿ ಕುರಿತು
ಭ್ರಷ್ಟಾಚಾರದ ಗೊಬ್ಬರದಿಂದ ಕಂಗೊಳಿಸುತ್ತಿರುವ
ಸಿರಿವಂತಿಕೆಯ ಪಸಲ ಕುರಿತು

ಚಪ್ಪಾಳೆ... ಚಪ್ಪಾಳೆ...
ಕ್ಲಿಕ್... ಕ್ಲಿಕ್...

ಬೆಂಕಿ

ಯಾವ ಬೆಂಕಿಯಿಂದ ಹುಟ್ಟಿದೆನೋ...
ಅದೇ ತಿನ್ನುವುದು ಒಂದು ದಿನ ನನ್ನನ್ನು
ಕವಿತೆ, ಪ್ರೇಮ, ಜೀವನ ಸಂಘರ್ಷ
ಎಲ್ಲವೂ ಬೆಂಕಿಯ ರುಚಿಯೇ...
ಮತ್ತು ಮೃತ್ಯುವಿನ ಪ್ರವೇಶ ದ್ವಾರ
ಅಲ್ಲಿ ಬರೆಯಲಾಗಿದೆ
ಅಳುತ್ತಾ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ

ಬೆಂಕಿಯ ಬೆಳಕಿನಲ್ಲಿ ಮತ್ತು ಸುವಾಸನೆಯಲ್ಲಿ
ಹೊಳೆಯುತ್ತಿರುವ, ಘಮಗುಡುತ್ತಿರುವ, ನಗುತ್ತಿರುವ
ಬೆಂಕಿಯ ಚಾಕು ಹಾಗೂ ಬೆಂಕಿಯ ಹೂ
ಎರಡೂ ಆಗಿದ್ದೇನೆ ಒಟ್ಟಿಗೆ

ಜೀವನ ಪರ್ಯಂತ ಧಗಧಗಿಸುವಾಸೆಗಳ
ಪಕ್ಕಾರರಾಗಿದ್ದ ನಮ್ಮ ಅನೇಕ ಪೂರ್ವಜರ ನೆನಪಿದೆ ನನಗೆ
ಕವಿತೆಗಳ ಹೊಡೆತಗಳಲ್ಲಿ ಅವರು ಇಂದೂ ಜೀವಂತವಿದ್ದಾರೆ
ಬೆಂಕಿಯ ಸ್ಮಾರಕಗಳಂತೆ

ಜ್ವಾಲೆಗಳ ಬೆವರು ಇವರ ಮೇಲೆ ಹರಿದುರುಳುತ್ತ
ಪ್ರಶ್ನೆಗಳ ಕಿಡಿಗಳನ್ನು
ಬದುಕಿರುವವರೆಡೆ ಎಸೆಯುತ್ತಿವೆ



ೀರಿನ ಬೆಳಕಿನ, ಕಂಪಿಸುತ್ತಿರುವ
ೇತುವೆ ಮೇಲೆ

ಕೂಗಬೇಡ
ನಿನ್ನ ಮೌನದಲ್ಲಿ ಸ್ವಲ್ಪ ಜಾಗ ಕೊಡು ಸಾಕು
ನಿನ್ನ ನಿದ್ದೆಯಲ್ಲಿ ನನ್ನನ್ನು ಮಲಗಿಸಿಕೋ

ಹಕ್ಕಿಗಳ ಚಿಲಿಪಿಲಿಯಿಂದ ಆವರಿಸಿಕೊಂಡ
ನೆನಪುಗಳ ಯಾತ್ರಿಕರ ಗುಂಪು... ನೋಡಲ್ಲಿ... ಹೊರಟಿದೆ
ನಮ್ಮ ಹಿಂದೆ ಮುಂದೆ

ಆದಿ ಅಂತ್ಯಗಳ ಸಂಗಮವಿದು
ನಾವು ನಿಂತಿದ್ದೇವೆ
ನೀರಿನ ಬೆಳಕಿನ, ಕಂಪಿಸುತ್ತಿರುವ ಸೇತುವೆ ಮೇಲೆ

ಶಿಶಿರದ ಈ ನೀಲಿಯಾಗುತ್ತಿರುವ ಬೆಳಕಿನಲ್ಲಿ
ನೀನು ವಸಂತದ ನೆರಳು
ನಾನು ಮಬ್ಬುಗತ್ತಲ ಪ್ರಪಾತದಲ್ಲಿ
ಬೀಳುತ್ತಿರುವ ಆಸೆ

ಸ್ವಪ್ನದಲ್ಲಿ ರಿಯಾಯಿತಿ ಬಯಸುವುದಿಲ್ಲ
ಕಿವಿಮಾತಿನಂತೆ ಪರಸ್ಪರ
ನೋಡುವುದು ಜಾಸ್ತಿಯಾಯಿತು
ಈಗ ನಿನ್ನ ನೋಟದಲ್ಲಿ
ನನ್ನ ಕಣ್ಣುಗಳನ್ನು ಬೆರೆಸಿಕೋ...

ನಿಜವಾಗಿಯೂ ಈ ಸಂಜೆ ಸುಂದರವಾಗಿದೆ
ಇಲ್ಲಿಗೇ ಅರ್ಥಕ್ಕೆ ನಿಲ್ಲಿಸು ಮಾತನ್ನು
ಸೂರ್ಯಾಸ್ತದ ಕಿಡಿಗಳನ್ನು ನೋಡೋಣವಿನ್ನು
ಕೊನೆಯ ಸುಡುವಿಕೆಯನ್ನು.

ಮಾತೃಮಂದಿರ, ತಾಲ್ಲೂಕು ಕಛೇರಿ ಹಿಂದೆ
ಕೊರಟಗೆರೆ - ೫೭೨ ೧೨೮, ತುಮಕೂರು ಜಿಲ್ಲೆ
೯೪೪೯೩ ೦೫೪೦೨

ದಿವಾನಿ ಶಂಸ್ ಇ ತಬ್ರಿಜ್ ನಿಂದ

ಮೂಲ : **ಫೈಜ್ ಅಹ್ಮದ್ ಫೈಜ್**
ಕನ್ನಡಕ್ಕೆ : **ಆರ್.ವಿಜಯರಾಘವನ್**

ನನ್ನ ಹೃದಯವೇ ನಿನ್ನ ಬಲ್ಲವರ,
ನಿನ್ನ ಅರಿತವರ ಬಳಿ ಮಾತ್ರ ಕೂರು
ಮೈತುಂಬ ಹೂ ಹೊತ್ತ
ಮರದಡಿಯಲಿ ಮಾತ್ರವೇ ಕೂರು

ಮೂಲಿಕೆ ಕಷಾಯಗಳ ಬಜಾರಿನಲ್ಲಿ

ವೃಥಾ ಅಲೆಯಬೇಡ
ಸಿಹಿಯಾದ ಷರಬತ್ತಿನ ಅಂಗಡಿಯ ಹುಡುಕು
ನಿಷ್ಕರ್ಷಿಸಲು ತಿಳಿಯದಿದ್ದರೆ
ಅನತಿಕಾಲದಲ್ಲೇ ಮಂದಿ ನಿನ್ನ ಮೋಜಿಬಿಡುತ್ತಾರೆ
ನೀನು ನಡೆಯದ ರೂಪಾಯಿ ಬಿಲ್ಲೆಗಳ
ನಿಜವೆಂದು ನಂಬಿ ಜೇಬು ತುಂಬಿಕೊಳ್ಳುತ್ತೀಯ
ನಿನ್ನ ತುತ್ತಿನ ಬಟ್ಟಲನ್ನು ಒಲೆಯ ಮೇಲಿರುವ
ಕಂಡಕಂಡ ಪಾತ್ರೆಗಳಿಂದ ತುಂಬಿಕೊಳ್ಳದಿರು
ಎಲ್ಲ ವಿನೋದಗಳೂ ಹಾಸ್ಯವಲ್ಲ
ಅರ್ಥವಿಲ್ಲದೆಡೆ ಅರ್ಥಕ್ಕಾಗಿ ಅರಸಬೇಡ
ಎಲ್ಲ ಕಣ್ಣುಗಳೂ ಕಾಣಲಾರವು
ಎಲ್ಲ ಸಮುದ್ರಗಳಲ್ಲೂ ಮುತ್ತು ತುಂಬಿರುವುದಿಲ್ಲ
ನನ್ನ ಎದೆಯ ಜಂಕೆಯೇ ಹಾಡು
ನೈಟಿಂಗೇಲಿನಂತೆ ವಿರಹದ ನಿರೀಕ್ಷೆಯ ಹಾಡನ್ನು
ನಿನ್ನ ಸ್ವರ ತಾನು ತಲುಪುವ ಕಲ್ಲು ಮುಳ್ಳುಗಳ ಮೇಲೂ
ತನ್ನ ಮಾಯೆಯ ತೆರೆಯನ್ನು ಕವುಚಬಲ್ಲುದು

ಮೊದಲು ತಲೆಬಾಗು

ಚಂಚಲತೆಗಳೆಲ್ಲವೂ ಅಳಿದುಹೋಗಲಿ
ದಿವ್ಯ ಪ್ರಭೆಯನ್ನು ಅಪ್ಪು
ಅದು ನಿನಗೆ ದಾರಿತೋರಲಿ
ಕರೆದೊಯ್ಯಲಿ ವಾಂಛೆಗಳ
ಸುಂಟರಗಾಳಿಯ ಸೆಳೆತದಿಂದ ದೂರ
ನಿನಗೆ ಅಲ್ಲಿ ಕಾಣುವುದೊಂದು ಚಿಲುಮೆ
ಅದರ ಸಿಹಿನೀರು ನಿನ್ನ ಪೋಷಿಸಿ

ನೀನು ಮರವಾಗುವೆ

★



ಇರುಳಿನಲ್ಲೊಬ್ಬ ಕಳ್ಳ
ಥಟ್ಟನೆ, ಅನಿರೀಕ್ಷಿತವಾಗಿ
ಅವನು ಬಂದುಬಿಟ್ಟ ಅತಿಥಿ
ಎದೆಯೊಳಗೆ ನೆಲ್ಲು ಕುಟ್ಟುತ್ತಿತ್ತು
ಯಾರಲ್ಲಿ?
ಆತ್ಮ ಪ್ರತ್ಯುತ್ತರಿಸಿತು
ಚಂದಿರ
ಮನೆಯೊಳಕ್ಕೇ ಬಂದುಬಿಟ್ಟಿತು
ನಾವು ತಿಕ್ಕಲರು
ಚಂದಿರನ ಹುಡುಕಿಕೊಂಡು
ಬೀದಿಗೆ ಓಡಿದೆವು
ನಿರುಕಿಸಿದೆವು
ಚಂದಿರನ ಅರಸುತ್ತಾ
ಆ ಕ್ಷಣ ಅವನು ಮನೆಯೊಳಗೆ ಕೂಗಿಕೊಂಡ
ಹೋಯ್ ನಾನಿಲ್ಲಿದ್ದೀನಿ
ನಾವು ಕೂಗಳತೆಗಿಂತ ದೂರ ಹೋಗಿಬಿಟ್ಟಿದ್ದೆವು

ಅವನಿಗಾಗಿ ಅರಸುತ್ತಾ, ಅರಚುತ್ತಾ, ಅಳುತ್ತಾ

ಆತ ನಮ್ಮ ತೋಟದಲ್ಲಿ ಬಂಧಿಯಾಗಿ
ಶೋಕಿಸುತ್ತಿರುವ ಮಧುಮತ್ತ ನೈಟಿಂಗೇಲಿಗಾಗಿ
ನಾವೂ ಸಹ ಶೋಕಿಸುತ್ತಿರುವ

ಕಪ್ಪುಪಟ್ಟೆಯ ಪಾರಿವಾಳಗಳು
ಪಿಸುಗುಟ್ಟಿಕೊಂಡೆವು, ಎಲ್ಲಿ? ಎಲ್ಲಿ?
ನಿದ್ರಾವಶರು ನಟ್ಟಿರುಳಿನಲ್ಲಿ
ಕಳ್ಳ ಮನೆಗೆ ನುಗ್ಗುವುದ ಕೇಳಿ
ಹಾಸಿಗೆಯಲ್ಲಿ ಧಿಗ್ಗನೆದ್ದು
ಏನೇನನ್ನೋ ತಡವಿ ಎಡವಿ
ಕಳ್ಳ ಕಳ್ಳ ಎಂದು ಸಹಾಯಕ್ಕೆ ಅರಚಿದಂತೆ
ಆದರೆ ಆ ಗಲಭೆಯಲ್ಲಿ ಭ್ರಾಂತನಾದ ಚೋರ
ಅವರು ಅರಚುವುದನ್ನೇ ತಾನೂ ಅರಚುತ್ತಾನೆ
ಕಳ್ಳ ಕಳ್ಳ ಎಂದು
ಒಬ್ಬನ ಅರಚುವಿಕೆ ಇನ್ನೊಬ್ಬನ ಅರಚುವಿಕೆಯಲ್ಲಿ
ಕರಗಿಹೋಗುವವರೆಗೂ

★

ಅವನು ನಿನ್ನೊಳಗಿದ್ದಾನೆ,
ನಿನ್ನೊಳಗೆ, ನಿನ್ನ ತಲಾಶಿನಲ್ಲಿ, Qur'an 4:57
ನೀನವನನ್ನು ಹುಡುಕುತ್ತಿರುವಾಗ
ಅವನನ್ನು ಹುಡುಕು,
ಹುಡುಕುತ್ತ ಅವನೆಲ್ಲಿರುವನೆಂಬುದನ್ನು
ನಿನ್ನೊಳಗೇ, ನಿನಗೆ ನಿನಗಿಂತಲೂ
ಅದೆಷ್ಟು ಹತ್ತಿರವಿರುವುದನ್ನು
ಹೊರಗೇಕೆ ಹೋಗುತ್ತೀಯ?
ಹಿಮದಂತೆ ಏಕೆ ಕರಗುತ್ತೀಯ
ತೊಳೆದುಕೋ ನಿನ್ನಾತ್ಮವನ್ನು ನಿನ್ನಾತ್ಮದಿಂದ
ಪ್ರೀತಿಯ ಒತ್ತಾಯದಲ್ಲಿ
ಆತ್ಮದಿಂದ ನಾಲಗೆಗಳು
ತಾವರೆಯಲ್ಲಿ ಕುಸುಮಾಗ್ರಗಳು
ಹೊಡೆಚಾಚುವಂತೆ ಮೊಳೆಯುತ್ತವೆ
ಆದರೆ ಇದೊಂದು ರಿವಾಜನ್ನು
ಹೂವಿನಿಂದ ನೀನು ಅರಿಯಬೇಕಿದೆ
ನಿನ್ನ ನಾಲಗೆ ಸದ್ದು ಮಾಡದೆ
ಇರುವಂತೆ ಮಾಡುವುದನ್ನು

★

ನನ್ನ ಬಳಿಯಿರು

ನನ್ನ ಬಳಿಯಿರು ನೀನು ಈ ಕ್ಷಣದಿಂದಲೇ,
ನನ್ನ ಚಿತ್ರಹಿಂಸೆಗೆ ಈಡುಮಾಡಿದವಳೇ
ಓ ನನ್ನ ಒಲವೇ
ನನ್ನ ಬಳಿಯಿರು ನೀನು

ಈ ಕ್ಷಣ, ಇರುಳಿಳಿದು ಬರುವಾಗ
ಸೂರ್ಯಾಸ್ತವ ಕಡಿದಿಷ್ಟಿಷ್ಟೇ ಕುಡಿದಿರುವಾಗ
ಕತ್ತಲೆ ತನ್ನ ಕೈಯಲಿ ಕಸ್ತೂರಿಯ ಮುಲಾಮನ್ನು
ಹಿಡಿದು ಬರುತ್ತದೆ
ಅದರ ಹೊಳೆವ ವಜ್ರದ ಗೋಲವನ್ನೂ
ಅದು ದುಃಖದಲಿ ಗೋಳಿಡುತ್ತ ಬಂದಾಗ
ಹರ್ಷದಲಿ ನಕ್ಕು ಹಾಡುತ್ತ ಬಂದಾಗ
ಅದರ ಒಂದೊಂದೂ ಹೆಜ್ಜೆಯೊಡನೆ
ನೋವಿನ ನೀಲಿ ಬೂದು ಕಾಲ್ಗೆಜ್ಜೆಗಳು ಕಿಂಕಿಣಿಸುತ್ತವೆ
ಈ ಹೊತ್ತಿನಲ್ಲಿ ತಮ್ಮ ಆಳದಲ್ಲಿ ಹೃದಯಗಳು
ಮತ್ತೆ ಆಶೆಗಳನ್ನು ಮುಡಿಯಲು ಶುರುವಿಟ್ಟವೆ
ಅವು ತಮ್ಮ ಪಹರೆಯನ್ನು ಶುರುಮಾಡಿದಾಗ
ಇನ್ನೂ ಅಂಗಿಯ ತೋಳಿನಲ್ಲಿ
ಮುಚ್ಚಿದ ಕೈಗಳು ವೈನನ್ನು ಸುರಿದಾಗ
ಸಂತೈಸಲಾಗದ ಮಕ್ಕಳು ಅಳುವಂತೆ ಸದ್ದು
ಮನಗಂಡ ಏನೇನು ಮಾಡಿದರೂ ಸಂತೈಸಲಾಗದ ಅಳು
ನೀನು ಮಾಡಬೇಕಿರುವ ಯಾವುದನ್ನೂ ಮಾಡಲಾಗದೇ ಹೋದಾಗ
ಯಾವುದೂ ಯಾತಕ್ಕೂ ಬಾರದೆ ಹೋದಾಗ
ಆ ಘಳಿಗೆಯಲ್ಲಿ ಕತ್ತಲಿಳಿದು ಬರುತ್ತದೆ
ಆ ಕತ್ತಲು ಶೋಕದ ವಸ್ತ್ರಗಳ ತೊಟ್ಟು
ತನ್ನ ಉದ್ದದ ಮುಖವನ್ನು ಎಳೆಯುತ್ತ ಬರುವಾಗ
ನನ್ನೊಡನಿರು ನೀನು,
ನನ್ನ ಚಿತ್ರಹಿಂಸೆಗೆ ಈಡುಮಾಡಿದವಳೇ,

ಓ ನನ್ನ ಒಲವೇ, ನನ್ನ ಬಳಿಯಿರು ನೀನು

ಸೀನಿಯರ್ ಮ್ಯಾನೇಜರ್, ಪ್ರಗತಿ ಗ್ರಾಮೀಣ ಬ್ಯಾಂಕ್, ಪ್ರಧಾನ ಕಛೇರಿ, ಬಳ್ಳಾರಿ

ಕನ್ನಡಿಯ ಸೂರ್ಯ

ಎಚ್.ಎಸ್. ವೆಂಕಟೇಶಮೂರ್ತಿಯವರ ಕವನ ಸಂಕಲನ

ಮಾಧವ ಕುಲಕರ್ಣಿ

ಆಧುನಿಕ ಕನ್ನಡ ಕಾವ್ಯದ ಮಹತ್ವದ ಕವನ ಸಂಕಲನಗಳಲ್ಲಿ ಒಂದಾದ 'ಉತ್ತರಾಯಣ'ದ ನಂತರ ಎಚ್.ಎಸ್. ವೆಂಕಟೇಶಮೂರ್ತಿಯವರ 'ಕನ್ನಡಿಯ ಸೂರ್ಯ' ಕವನ ಸಂಕಲನವು ಪ್ರಕಟವಾಗಿದೆ. ಹಲವಾರು ದೃಷ್ಟಿಯಿಂದ ವೆಂಕಟೇಶಮೂರ್ತಿಯವರ ಕಾವ್ಯಜೀವನದ ಬೆಳವಣಿಗೆಯ ದೃಷ್ಟಿಯಿಂದ ಮತ್ತು ಕನ್ನಡ ಕಾವ್ಯದ ಹೊಸದೊಂದು ಆಯಾಮದ ದೃಷ್ಟಿಯಿಂದ ಈ ಕವನ ಸಂಕಲನವು ಬಹು ಮಹತ್ವದ್ದಾಗಿದ್ದರೂ, ಇದು ಹೆಚ್ಚು ಚರ್ಚೆಗೆ ಒಳಗಾಗಲಿಲ್ಲ. ಇದು ನನ್ನಲ್ಲಿ ಆಶ್ಚರ್ಯವನ್ನುಂಟು ಮಾಡಿದೆ. ಒಂದೋ ಕವಿಯು ಅಲ್ಲಿಯವರೆಗಿನ ಕಾವ್ಯಶೈಲಿಗೆ ಹೊಂದಿಕೊಂಡಿದ್ದ ಮನಸ್ಸುಗಳು ಈ ಸಂಕಲನಕ್ಕೆ ಸ್ಪಂದಿಸಲು ಇಷ್ಟಪಟ್ಟಿಲ್ಲ ಅಥವಾ ಇಲ್ಲಿಯ ಕವನಗಳು ಈ ಕವಿಯ ಮೊದಲಿನ ಕವನಗಳಷ್ಟು ಸುಲಭದಲ್ಲಿ ಅರ್ಥ ಬಿಟ್ಟುಕೊಡುವುದಿಲ್ಲವಾದ್ದರಿಂದ ಪ್ರತಿಕ್ರಿಯೆಯು ಮಾಗುವುದಕ್ಕೆ ತನ್ನದೇ ಆದ ಕಾಲವನ್ನು ತೆಗೆದುಕೊಳ್ಳುತ್ತದೆ. ನನ್ನ ದೃಷ್ಟಿಯಲ್ಲಿ ಈ ಸಂಕಲನವು ಮಾರ್ಗ ಸೃಷ್ಟಿಸುವ ಕೃತಿಯಂತೆ ಕಂಡಿರುವುದರಿಂದ ಸಾಹಿತ್ಯಿಕವಾಗಿ ಇದಕ್ಕೊಂದು ವಿಶಿಷ್ಟವಾದ ಸ್ಥಾನ ದಕ್ಕಲೇಬೇಕು.



ಉತ್ತರಾಯಣ ಸಂಕಲನವನ್ನು ಕುರಿತು ನಾನು ಬರೆದ ಲೇಖನದಲ್ಲಿ ತ್ಯಜಿಸಿದ ಮಾರ್ಗ ಎಂಬ ಪದಪ್ರಯೋಗ ಮಾಡಿದ್ದೆ. ಅದು ಕವಿಗೂ ಮತ್ತು ನನಗೆ ಗೊತ್ತಿರುವ ಕೆಲವು ಸಹೃದಯ ಕಾವ್ಯಪ್ರಿಯರಿಗೆ ಅರ್ಥವಾದದ್ದು ನನಗೆ ಸಮಾಧಾನತಂದಿತು. ಕವಿಯು ತನ್ನ ಮಾರ್ಗವನ್ನು ತಾನೇ ಕಂಡುಕೊಳ್ಳಬೇಕೆಂಬ ಇಂಗಿತವಿರುವ ಹಲವು ಮಾತುಗಳನ್ನು ಕನ್ನಡಿಯ ಸೂರ್ಯ ಸಂಕಲನದ ಪ್ರಾರಂಭದಲ್ಲಿ ಕವಿಯು ಹಿಮಾಲಯದಲ್ಲಿ ಹಾದಿಗಳಿಲ್ಲ; ಒಂದು ಸ್ವಗತ ಲಹರಿ ಎಂದು ಬರೆದಿರುವ ಮಾತುಗಳಲ್ಲಿ ಹೇಳಿದ್ದಾರೆ. ಈ ಮಾತುಗಳಲ್ಲಿ ನನಗೆ ಕಂಡಿರುವ ಅಂಶವೆಂದರೆ ಕವಿಯ ಒಂಟಿತನ. ಮಹಾಪರಂಪರೆಯನ್ನು ಹೊಂದಿದ ಭಾಷೆಯಲ್ಲಿ ಹೊಸತನ್ನು ರಚಿಸುವಾಗ ಅವನೊಡನೆ ಇನ್ನಾರೂ

ಬರಲಾರರು, ಯಾರೂ ಕಂಪನಿ ಕೊಡಲಾರರು. ಇದು ಸಾಹಿತ್ಯದಲ್ಲಿ ಪ್ರತಿಯೊಬ್ಬ ಸಾಹಿತಿಯೂ ಸೃಜನಶೀಲ ಸಮಯದಲ್ಲಿ ಕಂಡುಕೊಳ್ಳಬೇಕಾದ ಸತ್ಯ. ಹೀಗಾಗಿಯೇ ಈ ಮಾತುಗಳ ಬೆಳಕಿನಲ್ಲಿ ಪ್ರಕಾಶಕರ ನಾಲ್ಕು ಮಾತುಗಳು ಎಂಬಲ್ಲಿ ರಾಘವೇಂದ್ರ ಪಾಟೀಲರು ಮಿದುಳಿನ ಎಡ, ಬಲ ಭಾಗಗಳ ಮಾತನಾಡುತ್ತ ನವ್ಯದ ಸಂದರ್ಭದಲ್ಲಿ ಮತ್ತು ಆ ನಂತರದ ಬಂಡಾಯದ ಸಂದರ್ಭದಲ್ಲಿಯಂತೂ ಸೆರೆಬ್ರಮ್ಮೇ ಪರಬ್ರಹ್ಮ! ಎಂದು ಹೇಳಿರುವುದು, ಇಡೀ ಸೃಜನಕ್ರಿಯೆಯ ಪ್ರಕ್ರಿಯೆಯನ್ನು ಸರಳ ದೃಷ್ಟಿಯಿಂದ ನೋಡಿದಂತಾಗಿದೆ. ವೆಂಕಟೇಶಮೂರ್ತಿಯವರು ಸ್ವಂತಿಕೆಯ ಅಭಿವ್ಯಕ್ತಿಗಾಗಿ ಕವಿಯು ಪಡಬೇಕಾದ ಸಂಕಟದ ಬಗ್ಗೆ ಹೇಳಿದ ತೂಕದ ಮಾತುಗಳ ಬೆಳಕಿನಲ್ಲಿ ಪಾಟೀಲರ ಮಾತು ಸರಳವಾಗಿದೆ, ಅಷ್ಟೆ. ಹಕ್ಕಿ ಹಿಡಿಯುವ ಕಾಯಕ ಎಂಬ ಶಿರೋನಾಮೆಯಲ್ಲಿ ಮುನ್ನುಡಿ ಬರೆಯುತ್ತ ಕವಿ ಸುಬ್ರಾಯ ಚೊಕ್ಕಾಡಿಯವರು ಹೀಗೆ ಹೇಳಿದ್ದಾರೆ : "ಎಚ್ಚೆಸ್ವಿ ಮುಖ್ಯವಾಗಿ ಕವಿತೆಯನ್ನು ಓದಿ ಚಿಂತಿಸುವ ಕಾವ್ಯ ರಸಿಕನಿಗಿಂತ, ಕರಗುವ ಕಾವ್ಯ ರಸಿಕನತ್ತ ಹೆಚ್ಚಿನ ಒಲವನ್ನು ಇಟ್ಟುಕೊಂಡಿರುವ ಕವಿ ಎಂದು ನಾನು ಭಾವಿಸುತ್ತೇನೆ." ವೆಂಕಟೇಶಮೂರ್ತಿಯವರ ಇಲ್ಲಿಯವರೆಗಿನ ಕಾವ್ಯದ ಬಗ್ಗೆ ಈ ಮಾತು ಅಂಶತಃ ನಿಜವಿರಬಹುದು, ಆದರೆ ಕನ್ನಡಿಯ ಸೂರ್ಯ ಸಂಕಲನದ ಬಗ್ಗೆ ಚೊಕ್ಕಾಡಿಯವರ ಈ ಮಾತು ಅಷ್ಟೊಂದು ನಿಜವಿರಲಾರದು. ಮಿದುಳು ಮತ್ತು ಹೃದಯಗಳೆಂಬ ವಿಭಾಗೀಕರಣವಾಗಲಿ ಅಥವ ಹೃದಯ ಚಿಂತನೆ ಮತ್ತು ಚಿಂತನಾಪರ ಹೃದಯ ಎಂಬ ವ್ಯಾಖ್ಯೆಯಾಗಲಿ ಉತ್ತಮ ಕಾವ್ಯಕ್ಕೆ ಪೂರ್ತಿಯಾಗಿ ಅನ್ವಯಿಸುವುದಿಲ್ಲ. ತಾರ್ಕಿಕ ಜಗತ್ತಿನೊಡನೆ ಸಂಪರ್ಕವಿಟ್ಟುಕೊಂಡೇ ಕಾವ್ಯವು ಅನಿರ್ವಚನೀಯವಾದುದನ್ನು ಧ್ವನಿಸಲು ಪ್ರಯತ್ನಿಸುತ್ತಿರುತ್ತದೆ.

ಈ ಸಂಕಲನಕ್ಕೆ ಹಿಮಾಲಯದಲ್ಲಿ ಹಾದಿಗಳಿಲ್ಲ ಒಂದು ಸ್ವಗತ ಲಹರಿ ಎಂಬ ಲೇಖಕನ ಮಾತಿನಲ್ಲಿ ಹಲವಾರು ಮಹತ್ವದ ವಿಷಯಗಳನ್ನು ಹೇಳಿದ್ದಾರೆ. ಸಾಹಿತ್ಯವೆನ್ನುವುದು, ಅಡಿಗರು ಹೇಳಿದಂತೆ, ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಗಾಡಿ ಬಿಡುವುದಲ್ಲ. ತಮ್ಮ ತಮ್ಮ ದಾರಿಯನ್ನು ತಾವೇ ಕಡಿದುಕೊಳ್ಳುವುದು. ತಮ್ಮ ತಮ್ಮ ಅನುಭೂತಿಯನ್ನು ತಾವೇ ಕಂಡುಕೊಳ್ಳುವುದು. ಈ ಮಾತು ನವ್ಯದ ಸಂದರ್ಭದಲ್ಲಿ ಸ್ವಲ್ಪ ನೆಮ್ಮದಿಯನ್ನು ತರುತ್ತದೆ. ಇದರೊಡನೆಯೇ ಅವರು ಸ್ವಾನುಭೂತಿಯ ಮಾತನ್ನು ಸೇರಿಸಿದ್ದಾರೆ. ಅವರು ತಮ್ಮ ಮುಂದಿರುವ ಕವಿ ಸಮಸ್ಯೆಯಲ್ಲಿ ಹೀಗೆ ವಿವರಿಸಿದ್ದಾರೆ. ಸಾವಿರ ವರ್ಷಗಳಿಂದ ಹರಳುಗಟ್ಟುತ್ತಾ ಬಂದಿರುವ ಈ ಕನ್ನಡ ಭಾಷೆಯನ್ನು ಹಿಡಿಯುವುದು ಹೇಗೆ, ಅರಿಸುವುದು ಹೇಗೆ ಕುದಿಸುವುದು ಹೇಗೆ, ನಮ್ಮನ್ನು ನಾವೇ ಬಗೆಯುವುದು ಹೇಗೆ, ಸಂಬಂಧಿಸುವುದು ಹೇಗೆ? ಇದನ್ನೆಲ್ಲ ಪಂಪ, ಬಸವಣ್ಣ, ಅಲ್ಲಮ, ಕುಮಾರವ್ಯಾಸ, ಪುರಂದರ ದಾಸರಂಥ ಜೀವನ ವಿಜ್ಞಾನಿಗಳು ನಮಗೆ ಕಲಿಸಿಕೊಡುತ್ತಾರೆ. ಉಳುಮೆಯ ಕಲೆ ನಮಗೆ ಪರಂಪರೆಯಿಂದ ಪ್ರಾಪ್ತವಾಗುವ ಪೂರ್ವಾರ್ಜಿತ ಆಸ್ತಿ. ಅದು ಪ್ರಾಪ್ತಿಯಾಗಬೇಕಾದರೆ ನಮ್ಮ ನೆಲವನ್ನು ನಾವೇ ಉಳಬೇಕು. ನಮ್ಮ ನೆಲದಲ್ಲಿ ನಾವೇ ಬೆಳೆ ತೆಗೆಯಬೇಕು ಎಲ್ಲ ಭಾಷೆಗಳಲ್ಲಿ ಹೊಸ ಕವಿತೆ ಬರೆಯುತ್ತಿರುವ ಕವಿಗೂ ಅನ್ವಯಿಸುವ ಮಾತಿದು. ಇತ್ತೀಚೆಗೆ ಯು.ಆರ್. ಅನಂತಮೂರ್ತಿಯವರು ಟ್ಯಾಗೋರರಿಗೆ ಬಂಗಾಲಿ ಭಾಷೆಯಲ್ಲಿ ಈ ಪರಂಪರೆಯ ತೊಡಕು ಇರಲಿಲ್ಲ ಎಂದು ಹೇಳಿದ್ದಾರೆ. ಪರಂಪರೆ ಇದ್ದೆಡೆಯೆಲ್ಲ ತಮ್ಮ ಹಿಂದಿನ ಸಾಹಿತಿಗಳ ಶ್ರಾದ್ಧ ಮಾಡಿಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ ಎನ್ನುವ ಅರ್ಥದಲ್ಲಿ ಬರೆದಿದ್ದಾರೆ. ವೆಂಕಟೇಶಮೂರ್ತಿಯವರ ಮಾತು ಇದಕ್ಕಿಂತ ಸ್ವಲ್ಪ ಭಿನ್ನವಾದುದು. ಅವರು ಪರಂಪರೆಯ ಪ್ರಭಾವದಿಂದ ಮುಕ್ತರಾಗಲು ಮತ್ತು ಸ್ವಂತಿಕೆಯನ್ನು ಕಂಡುಕೊಳ್ಳಲು ಹಿಂದಿನವರು ಅಸ್ತಂಗತರಾಗಬೇಕು ಎನ್ನುವುದಕ್ಕಿಂತ ಉಳುಮೆಯ ಕಲೆ ಬಗ್ಗೆ ಮಾತನಾಡುತ್ತಾರೆ. ಇವರಿಬ್ಬರಿಗೂ ವರ್ತಮಾನ ಸಾಹಿತ್ಯದಲ್ಲಿ ಭಾಷೆಯ ಉಪಯೋಗದ ಬಗ್ಗೆ ತೀವ್ರತರವಾದ ಆಸಕ್ತಿ ಇದೆ. ಆದರೆ ಅವರು ತಳೆಯುವ ನಿಲುವುಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಭಾಷೆಯ ಬಳಕೆಯ ಬಗ್ಗೆ ಕವಿದೃಷ್ಟಿಗೂ, ಗದ್ಯ ಲೇಖಕನ ದೃಷ್ಟಿಗೂ ಇರುವ ವ್ಯತ್ಯಾಸವೂ ಇದಾಗಿರಬಹುದು.

ಜಗತ್ತಿನ ಎಲ್ಲ ಮಹಾಕಥನಗಳೂ ಸಿದ್ಧ ಮಾರ್ಗವಿಲ್ಲದ ಸಮುದ್ರದಲ್ಲಿ, ಕಾಡಿನಲ್ಲಿ ಅಥವ ಪರ್ವತ ಶಿಖರಗಳಲ್ಲಿ ಸಂಭವಿಸಿವೆ ಎಂಬುದನ್ನು ನಾವು ಮರೆಯುವಂತಿಲ್ಲ ಎನ್ನುತ್ತಾರೆ ವೆಂಕಟೇಶಮೂರ್ತಿಯವರು. ಕವಿಗೆ ಇಂಥ ಮಾತುಗಳನ್ನು ಕೂಡ ರೂಪಕಗಳಲ್ಲಿಯೇ ಹೇಳಬೇಕಾದ ಅವಶ್ಯಕತೆ ಉಂಟಾಗುತ್ತದೆ. ಆದರೆ ಕವಿಸಮಯದಲ್ಲಿ ಕಾವ್ಯಕ್ರಿಯೆಯ ವ್ಯಾಖ್ಯಾನಗಳೆಲ್ಲ ಮಾಯವಾಗಿ ಬಿಡುತ್ತವೆಂಬುದೇ ಸೃಜನಕ್ರಿಯೆಯ ವಿಸ್ಮಯಗಳಲ್ಲಿ ಒಂದು! ಹೀಗಾಗಿಯೇ ಕನ್ನಡಿಯ ಸೂರ್ಯ ಸಂಕಲನದ ಕೆಲವು ಕವನಗಳಾದರೂ ವೆಂಕಟೇಶಮೂರ್ತಿಯವರ ವ್ಯಾಖ್ಯಾನಗಳನ್ನು ನಿರಾಕರಿಸುತ್ತವೆ.

ಈ ಸಂಕಲನದಲ್ಲಿ ನನಗೆ ಮೊದಲು ಎದ್ದು ಕಂಡ ಅಂಶವೆಂದರೆ ವೆಂಕಟೇಶಮೂರ್ತಿಯವರ ಹಿಂದಿನ ಕಾವ್ಯದಲ್ಲಿದ್ದ ಮೃದುತ್ವ ಮಾಯವಾಗಿರುವುದು. ಸಂಧಿ-ಸಮಾಸಗಳನ್ನು ಉದ್ದೇಶಪೂರ್ವಕವೋ ಎಂಬಂತೆ ದೂರವಿಟ್ಟಿದ್ದ ಈ ಕವಿ ಅವುಗಳನ್ನು ಮತ್ತೆ ಬರಮಾಡಿಕೊಂಡಿದ್ದಾರೆ. ಇದು ಸಾಧ್ಯವಾಗಿರುವುದು ಅವರು ಆಯ್ದುಕೊಂಡ ಕಾವ್ಯವಸ್ತುವಿನಿಂದಾಗಿ ಎಷ್ಟು ಅವಶ್ಯವಾಗಿರಬಹುದೋ, ಅದೇ ರೀತಿಯಲ್ಲಿ ತ್ಯಜಿಸಿದ ಮಾರ್ಗದಲ್ಲಿ ನಡೆಯುವುದನ್ನು ಕೈಬಿಟ್ಟು ಅವರು ಬೇರೊಂದು ಮಾರ್ಗದಲ್ಲಿ ನಡೆಯಲು ಯತ್ನಿಸುತ್ತಿರುವುದೂ ಇದಕ್ಕೆ ಕಾರಣವಾಗಿರಬಹುದು. ಈ ಸಂಕಲನದಲ್ಲಿಯ ಹದಿನೇಳನೆಯ ಕವನ ಭಾಷೆಯನ್ನು ಹೇಗೂ ಬಳಸಬಹುದು... ಎಂಬ ಪದ್ಯವು ಈ ದೃಷ್ಟಿಯಿಂದ ನನ್ನ ಗಮನ ಸೆಳೆದಿದೆ. ಪ್ರಾರಂಭದ ಈ ಸಾಲುಗಳನ್ನು ವೆಂಕಟೇಶಮೂರ್ತಿಯವರು ಪ್ರಾರಂಭದಲ್ಲಿ ಭಾಷೆಯನ್ನು ಬಳಸುವ ವಿಚಾರದ ಬಗ್ಗೆ ಹೇಳಿದ ಮಾತುಗಳೊಡನೆ ಹೋಲಿಸಿ ನೋಡಬೇಕು :

ಭಾಷೆಯನ್ನು ಹೇಗೂ ಬಳಸಬಹುದು: ತಿಂಗಳಾನಾಟಿಗೆ ರೈತ
ಪಿಕಾಸಿಯೆತ್ತಿ ಗಮಗುಡುವ ನೆಲವ ಧಸಧಸ ಬಗಿವಂತೆ;
ಅಕ್ಕಸಾಲಿಯು ಮೆತ್ತಿಗೆಯ ಹುಳುಕ ಮುಚ್ಚಲಿಕ್ಕೆ ದೆಂಟಿಸ್ಟ್
ದಟ್ಟವಾಗಿ ಅತ್ತ ಇತ್ತ ಬಣ್ಣ ಬಳಿದಂತೆ ಗೋಡೆಯ ಮೇಲೆ
. . . .
ಹೇಗೂ ಬಳಸಬಹುದು ಭಾಷೆಯನ್ನು; ಮೊದಲ ರಾತ್ರಿಯ ವಧು
ಎಲ್ಲ ಬಿಚ್ಚುವ ಮೊದಲು ಮುಚ್ಚುವಂತೆ ಸೆರಗಿಂದ ಅರೆ ಬರೆ
ಮುಖವ; ಅಧ್ಯಾಪಕರು ತರಗತಿಯುದ್ದಕ್ಕೂ ಒತ್ತಿಯೊತ್ತಿ ಬರೆದ
ಬೀಜವಾಕ್ಯಗಳನ್ನು ತೆರಳುವ ಮುನ್ನ, ಡಸ್ಟರಲ್ಲೊರೆಸಿ ಗಡಿ
ಬಿಡಿಯಿಂದ ಬರೆದದ್ದು ಅಸ್ಪಷ್ಟ ಉಳಿಸಿ ಬೋರ್ಡಿನ ಮೇಲೆ,

ಇಂಗ್ಲಿಷಿನಲ್ಲಿ ಕಾವ್ಯ ವಿಮರ್ಶೆ ಮಾಡುವಾಗ ‘loud word’ ಮತ್ತು ‘mute word’ ಎಂಬ ಪದಗಳನ್ನು ಬಳಸುತ್ತಾರೆ. ಭಾವಕ್ಕೆ ತಕ್ಕಂತೆ loud word ಮತ್ತು mute word ಗಳನ್ನು ಬಳಸಬೇಕೆಂಬುದು ಕಾವ್ಯದ ಪ್ರಾಥಮಿಕ ಅರಿವು. ಆ ಅರಿವು ಈಗ ಮಾಯವಾಗುತ್ತಿರುವುದರಿಂದ ಮತ್ತು ಆ ಪ್ರಶ್ನೆಯು ವೆಂಕಟೇಶಮೂರ್ತಿಯವರನ್ನು ವಿಶೇಷವಾಗಿ ಕಾಡುತ್ತಿರುವುದರಿಂದ ಕಾವ್ಯದೀವಿಗೆಯನ್ನು ಹಿಡಿದು ಕತ್ತಲನ್ನು ಸೀಳಿಕೊಂಡು ಹೊಸದಾರಿ ಹುಡುಕುತ್ತಿರುವ ಸದ್ಯದ ಬೆರಳೆಣಿಕೆಯ ಕವಿಗಳಲ್ಲಿ ಅವರೊಬ್ಬರಾಗಿ ನನಗೆ ಕಾಣುತ್ತಿದ್ದಾರೆ.

ಈ ಕವನದ ಮೊದಲ ಭಾಗದಲ್ಲಿ ಸಪ್ಪಳ ಮಾಡುವ ಚಿತ್ರ ಮತ್ತು ಶಬ್ದಗಳೇ ಹೆಚ್ಚಾಗಿವೆ. ಮೊದಲ ರಾತ್ರಿಯ ವಧುವಿನಲ್ಲಿಯ ಮೌನ ಮತ್ತು ಕಿರುಗುದ್ದಲಿಯಲ್ಲಿ ಪುರಾತನ ವಸ್ತುಗಳನ್ನು ನಿಧಾನಕ್ಕೆ ಹೊರತೆಗೆಯುವ

ಚಿತ್ರವೂ ಇಲ್ಲಿದೆ. ಉಳುವುದು, ಸಪ್ಪಳ, ಮೌನ, ಸೂಕ್ಷ್ಮ ಈ ಎಲ್ಲ ಭಾವಗಳಲ್ಲೂ ಭಾಷೆಯನ್ನು ಬಳಸಬಹುದು, ನಿಜ, ಇವೆಲ್ಲವೂ ಹೊರಗೆ ನಡೆಯುವ ಕ್ರಿಯೆಗಳೆ.

ಎರಡನೆಯ ಭಾಗ ಈ ಪದ್ಯದ ಬಹಳ ಅರ್ಥಗರ್ಭಿತ ಸೂಕ್ಷ್ಮ ಭಾಗ. ಅಯೋಧ್ಯೆಯಿಂದ ನಿರ್ಗಮಿಸುವಾಗ ರಾಮ ಸುಮಂತ್ರನಿಗೆ ಏನೋ ಹೇಳಬೇಕೆಂದು ಬರುತ್ತಾನೆ. ಆದರೆ ಹೇಳದೇ ಹೊರಟು ಹೋಗುತ್ತಾನೆ. 'ಸುಮಂತ್ರನಿಗೆ ಎಲ್ಲವೂ ಅರ್ಥವಾಗುತ್ತದೆ. ಜೀಸು ಹೆಜ್ಜೆ ಯೋಚನೆಯ ತೀವ್ರತೆ ಸೂಚಿಸಬಹುದಿತ್ತು/ ವಿಲಂಬಿತ ನಿಧಾನ ಗತಿ/ ಸೂಚಿಸಬಹುದಿತ್ತು ಅಸಲು ಮನದೊಳಗೇ ಇರದಿದ್ದ ಬೇಸರವನ್ನ!' ಎಂದು ಹೇಳುವಲ್ಲಿ ಮಾತು, ಕ್ರಿಯೆ, ಮೌನಗಳ ನಡುವಿನ ಸೂಕ್ಷ್ಮ ಸಂಬಂಧವನ್ನು ಕವಿ ಬಹು ಎಚ್ಚರದಿಂದ ಚಿತ್ರಿಸುತ್ತಾರೆ. ಮುಂದೆ ಪಾದ ಮತ್ತು ಪದ ಶಬ್ದಗಳನ್ನು ಬಳಸಿರುವ ರೀತಿಯಲ್ಲಿ ಕೂಡ ಅವರು ಕ್ರಿಯೆಯನ್ನು ಭಾಷೆಯ ಮಟ್ಟಕ್ಕೆ ತಂದು ಒಮ್ಮೆಲೇ ಕೇಳುತ್ತಾರೆ: ಎಷ್ಟಿರಬೇಕು ಪದಪದದ ನಡುವಿನ ಅಂತರ? ಪದವಿನ್ಯಾಸವೆಂದರೆ/ ಬರೆಯುವುದಲ್ಲದೆ ಮತ್ತೇನು? ಮೊದಲ ನುಡಿಯ ಸಪ್ಪಳ ಇಲ್ಲಿ ಮೌನವಾಗುತ್ತದೆ. ಆದರೆ ನಿವೇದಿಸಬೇಕಾದುದನ್ನೆಲ್ಲಾ ನಿವೇದಿಸುತ್ತದೆ.

ಸಪ್ಪಳ, ಮೌನದ ನಂತರ ಮೂರನೆಯ ನುಡಿಯಲ್ಲಿ ಪದ್ಯವು ರಾಮಾಯಣದಿಂದ ಮಹಾಭಾರತದ ಗೋಗ್ರಹಣದತ್ತ ಸಾಗುತ್ತದೆ. ಈ ಭಾಗದಲ್ಲಿ ಪ್ರಾಯಶಃ ಮಹಾಭಾರತ ರಾಮಾಯಣದ ಕರ್ತೃಗಳು ಸಮಯಕ್ಕೆ ತಕ್ಕ ಭಾಷೆಯನ್ನು ಬಳಸಿರುವುದನ್ನು ಸೂಚಿಸಲು ಕವಿ ಯತ್ನಿಸಿದ್ದಾರೆ. ಗೋಗ್ರಹಣಕ್ಕೆ ಮೊದಲು ಅರ್ಜುನನು ತಾನು ತೊಟ್ಟಿದ್ದ ಬಳೆಗಳನ್ನು ವೈರಿಗಳ ಗೋಣು ಮುರಿದಂತೆ ಮುರಿಯುತ್ತಾನೆ. ಕೋಪಗೊಂಡ ಮಾರುತಿಗೆ ಅಶೋಕವನದಲ್ಲಿ ಬಿಳಿಯ ಹೂವುಗಳು ಕೆಂಪಾಗಿ ಕಾಣುತ್ತವೆ! ಭೀಮನ ಸಿಟ್ಟಿನಿಂದ ಅವನು ಧರಿಸಿದ ಮುತ್ತಿನ ಸರ ಸೀದು ಕಪ್ಪಾಗಿದೆ, ದುರ್ಯೋಧನ ವೈಶಂಪಾಯನ ಸರೋವರದಲ್ಲಿ ಬೆವರುತ್ತಾನೆ. ಹಿಟ್ಲರ್ ಸಾಯುವುದಕ್ಕೆ ಮೊದಲೇ ಎಷ್ಟೋ ತಿಂಗಳ ಮೊದಲೇ 'ಮುಗ್ಧನಾಗಿದ್ದ'. ಇಲ್ಲಿ ಭಾಷೆಯ ಬಳಕೆಗಿಂತ ಒಂದು ಸನ್ನಿವೇಶವನ್ನು ವರ್ಣಿಸುವಲ್ಲಿ ಉತ್ಪನ್ನವಾಗುವ ನೋಡುವ ದೃಷ್ಟಿಯ ಮೇಲೆಯೇ ಹೆಚ್ಚಿನ ಒತ್ತಿದೆ. ಈ ಉದಾಹರಣೆಗಳೆಲ್ಲ ಸಾಹಿತ್ಯದಲ್ಲಿ ಸಾಕಷ್ಟು ಖ್ಯಾತಿಯನ್ನು ಪಡೆದ ಉದಾಹರಣೆಗಳು. ಆದರೆ ಉಪಮೆಗಳು ಸನ್ನಿವೇಶದ ರಭಸವನ್ನು ತೋರಿಸುತ್ತದೆ. ಇಲ್ಲಿ ಭಾಷೆಯಲ್ಲಿ ಭಾವದ ಸೆರೆ ಹಿಡಿಯುವುದಕ್ಕಿಂತ ವರ್ಣನೆಯಲ್ಲಿ ನೋಟದ ಸೆರೆ ಹಿಡಿಯುವ ಪ್ರಯತ್ನವಿದೆ.

ಸಪ್ಪಳ ಕಿವಿಗೆ, ಮೌನ ಹೃದಯಕ್ಕೆ, ನೋಟ ಕಣ್ಣಿಗೆ- ಹೀಗೆ ಬಳಸಬಹುದು ಭಾಷೆಯನ್ನು!

ನಾಲ್ಕನೆಯ ಭಾಗ ಹೆಚ್ಚು ಸಂಕೀರ್ಣ. ಇಲ್ಲಿಯೂ ಅಭಿವ್ಯಕ್ತಿಯು ಒಂದು ಬಿಂಬವನ್ನೇ ಸೆರೆಹಿಡಿಯುವ ಪ್ರಯತ್ನವಿದೆ. ರಾತ್ರಿಯ ನೀರವತೆ ಸರಿಯುವ ಅಭಿವ್ಯಕ್ತಿಯಲ್ಲಿ ಹಣ್ಣಾದ ದಿನ ಹಾಗು ಮೈ ಮುದುಕ ಕಾಣುವುದು, ಆ ಇರುಳು ಮಣ್ಣಿನ ಮಗಳನ್ನು ತೂಗುವುದು, ನಕ್ಷತ್ರಗಳೆಲ್ಲ ಕರಗಿ ಬೆಳಕು ಮುಂದಾದಾಗ ಮುದುಕ ಅಥವ ಹಣ್ಣಾದ ದಿನದ ಬೆಳಕು ಬೆಚ್ಚಿ ಬೀಳುವುದು, ಭೂತಾಯಿ ಮಗಳಾಗಿ ಆಡಿದ ಆಟಿಕೆಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ ಮತ್ತು ಅವಳು ಪೂರ್ವಕಿರಣದ ರೆಪ್ಪೆ ತೆರೆಯುವವರೆಗೆ ಬೆಚ್ಚಗೆ ಮಲಗಲಿ ಎಂಬುದು ಕವಿಯ ಆಶಯವಾಗಿದೆ. ದಿನದ ಮತ್ತು ಇರುಳಿನ ಈ ರೂಪಕದಲ್ಲಿ ಭಾಷೆಯ ಬಳಕೆಯ ಸೂಕ್ಷ್ಮಗಳಾವವು ವ್ಯಕ್ತವಾಗಿವೆ ಎಂಬುದು ಮೊದಲಿನ ಮೂರು ನುಡಿಗಳನ್ನು ಅವಲೋಕಿಸಿದಾಗಲೇ ಅರ್ಥವಾಗುತ್ತದೆ. ಸಪ್ಪಳ, ಮೌನ, ದೃಷ್ಟಿಯು ಒಂದು ಕೋಲವಾಗಿ ಅದರ ಕಣ್ತೆರೆಸುತ್ತಿರುವ ಬೆರಳು- ಇವು ಇರುಳು ಮತ್ತು ಬೆಳಕಿನ ಚಿತ್ರಕ್ಕೆ ದಾರಿ ಮಾಡಿಕೊಟ್ಟಿವೆ. ಮೊದಲ ನುಡಿಯ ವಸ್ತುಗಳು ಕಣ್ಣಿಗೆ ಕಾಣುತ್ತವೆ. ಎರಡನೆಯ ನುಡಿಯಲ್ಲಿ ಶಬ್ದಗಳಿಲ್ಲದ ಹೃದ್ಯವಾಗುವ ಭಾಷೆಯಿದೆ. ಮೂರನೇ ನುಡಿಯಲ್ಲಿ ನೋಡುವ ದೃಷ್ಟಿಯಲ್ಲಿ ಅಭಿವ್ಯಕ್ತವಾಗುವ ಭಾಷೆಯಿದೆ. ನಾಲ್ಕನೆಯ ನುಡಿಯಲ್ಲಿ ಇವೆಲ್ಲವುಗಳು ಹರಳುಗಟ್ಟಿದ ಜೀವನ ಚಕ್ರದ ರೂಪಕವಿದೆ. ನನಗೆ ಈ

ಪದ್ಯ ಎರಡು ಕಾರಣಗಳಿಗಾಗಿ ಮಹತ್ವದ್ದಾಗಿ ಕಂಡಿದೆ. ಮೊದಲನೆಯದಾಗಿ ಕವಿಯು ತನ್ನ ಅಭಿವ್ಯಕ್ತಿಯಲ್ಲಿ ತಾನೇ ಎದುರಿಸುತ್ತಿರುವ ಭಾಷೆಯ ಸಮಸ್ಯೆಗೆ ರೂಪಕವೊಂದನ್ನು ಹುಡುಕಿದ್ದಾರೆ. ಇನ್ನು ಎರಡನೆಯದಾಗಿ ಭಾಷೆಯ ಉಪಯೋಗದ ತನ್ನ ಆಯ್ಕೆಯ ಬಗ್ಗೆಯೂ ಅವರು ಆಳವಾಗಿ ಯೋಚಿಸುತ್ತಿದ್ದಾರೆ. ಈ ಕವನವನ್ನು ಕೇಂದ್ರದಲ್ಲಿಟ್ಟುಕೊಂಡು ವಿಶ್ಲೇಷಿಸಿದರೆ ವೆಂಕಟೇಶಮೂರ್ತಿಯವರು ಏನು ಹೇಳಲು ಪ್ರಯತ್ನಿಸುತ್ತಿದ್ದಾರೆಂಬುದು ಹೆಚ್ಚು ಸ್ಪಷ್ಟವಾಗಬಹುದು.

ಇಲ್ಲಿಯ ಮೊದಲನೆಯ ಪದ್ಯ ಹಕ್ಕಿ ಮತ್ತು ನಳ ದಲ್ಲಿ ಕವನ ಬರೆಯುವುದೆಂದರೆ ಹೊಂಚು ಹಾಕುವ ಕ್ರಿಯೆ ಎಂಬಂತೆ ಕವಿ ಚಿತ್ರಿಸಿದ್ದಾರೆ. ಆದರೆ ನಳ, ದಮಯಂತಿ ನಳನ ಹೊಂಬಣ್ಣದ ಶರೀರ, ಅರಮನೆಯಲ್ಲಿ ನಿಂತ ದಮಯಂತಿ, ಕಾಮನಬಿಲ್ಲು ಮತ್ತು ಹಕ್ಕಿಗಳು ನೆಲಕ್ಕಿಳಿಯುವ ರೀತಿ, -ಇವುಗಳೆಲ್ಲ ಸೇರಿ ಕವನ ಬರೆಯುವ ಕಷ್ಟಕ್ಕೊ ಕವಿಯು ಒಂದು ಸುಂದರ ರೂಪ ತೊಡಿಸಿದ್ದಾರೆ. ಇಲ್ಲಿ ಹಿಂದೆ ನನಗೂ ಕುರ್ತಕೋಟಿಯವರಿಗೂ ಕಾವ್ಯದ ಬಗ್ಗೆ ನಡೆದ ಒಂದು ಚರ್ಚೆ ನೆನಪಾಗುತ್ತದೆ. ಕುರ್ತಕೋಟಿಯವರು ಪರೋಕ್ಷವಾಗಿ ಅಡಿಗರ ಕಾವ್ಯ ಭಾಷೆಯನ್ನು ಪರಮಂಡಲಗಳನ್ನು ಉದ್ದೇಶಿಸುವ ಕಾವ್ಯಭಾಷೆ ಎಂದು ಕರೆದರು. ಚರ್ಚೆಯ ಕೇಂದ್ರದಲ್ಲಿ ಈ ವಿಷಯವೇ ಇತ್ತು. ಇತ್ತೀಚೆಗೆ ಒಬ್ಬ ಲೇಖಕರು ನಾನು ಅಡಿಗರಂತೆ ಬಿಟ್ಟು ಬೇರೆ ತರಹ ಬರೆಯಲೇಕೂಡದೆಂದು ವಾದಿಸಿದೆ ಎಂದು ಆ ಚರ್ಚೆಯನ್ನು ಕುರಿತು ಬರೆದರು! ಮನಸ್ಸಿಗೆ ಏಕೆ ನೋವಾಯಿತೆಂದರೆ ಆ ಚರ್ಚೆಯ ಕೇಂದ್ರವಸ್ತುವನ್ನೇ ಆ ವ್ಯಕ್ತಿ ಕಡೆಗಣಿಸಿದರಲ್ಲ ಎಂದು. ರಾಮಾನುಜನ್ ಮತ್ತು ಬೇಂದ್ರೆಯವರನ್ನು ಕುರ್ತಕೋಟಿಯವರು ಆ ಚರ್ಚೆಯಲ್ಲಿ ಅನವಶ್ಯಕವಾಗಿ ಎಳೆದು ತಂದಿದ್ದರು. ಆದರೆ ರಾಮಾನುಜನ್ ಕಾವ್ಯದ ಮೇಲೆ ನಾನು ಆಗ ಹೇಳಿದ ಮಾತುಗಳು ನಿಜವೆಂಬುದನ್ನು ತದನಂತರದ ಕನ್ನಡ ಕಾವ್ಯ ಸಿದ್ಧ ಮಾಡಿತು. ಭಾವಕ್ಕೆ ತಕ್ಕಂತೆ ಭಾಷೆಯನ್ನು ಅಡಿಗರು ಬಗ್ಗಿಸಿದರು. ಅದು ಕೇವಲ ಮೆದುಳಿನಿಂದ ಬಂದ ಕಾವ್ಯವಾಗಿರದೆ ಚಿಂತನೆಗೆ ಯೋಗ್ಯ ಭಾಷೆ ತೊಡಿಸಿದ ಕಾವ್ಯವಾಗಿತ್ತು. ವೆಂಕಟೇಶಮೂರ್ತಿಯವರು ನಳನು ಉಬ್ಬು ಬಟ್ಟೆ ಕಳಚಿ ಹಕ್ಕಿ ಹಿಡಿಯುವ ಕಾಯಕದಲ್ಲಿ ನಿರತನಾಗಿರುವ ಒಂದು ಚಿತ್ರ ನೀಡುತ್ತಾರೆ. ಆಕಾಶದಿಂದ ಹಕ್ಕಿಗಳು ರಂಗೋಲಿಯ ಚುಕ್ಕಿಗಳಂತೆ ಇಳಿದು ಬರುತ್ತವೆ. ಒಂದು ಕ್ಷಣ ಈ ಪದ್ಯಕ್ಕೆ ದಮಯಂತಿ ಬೇಕಾಗಿತ್ತೆ ಎಂದೆನಿಸುತ್ತದೆ. ಆದರೆ ಪದ್ಯದ ಪೂರ್ಣ ಅರ್ಥ ಅವಗತವಾದೊಡನೆ ದಮಯಂತಿಯಂಥ ಸ್ಫೂರ್ತಿಯೂ ಕಾವ್ಯಕ್ಕೆ ಅವಶ್ಯಕ ಎಂಬ ಅರಿವು ಬರುತ್ತದೆ. ದಮಯಂತಿಯು ಕವನದಲ್ಲಿ ಹುಟ್ಟುವುದಿಲ್ಲ. ಅವಳು ಸ್ಫೂರ್ತಿಯಾದರೂ ಕವನದ ಇತರ ರೂಪಕಗಳೊಡನೆ ಸಂಪರ್ಕ ಸಾಧಿಸಿಕೊಳ್ಳುವುದಿಲ್ಲ. ಬತ್ತಲಾದರೂ ಕಾವ್ಯ ದಕ್ಕುವ ಗ್ಯಾರಂಟಿ ಇಲ್ಲ ಎಂಬ ಮಾತಿನಲ್ಲಿ ಕವಿಯು ಕೊನೆಗೆ ಹಲವಾರು ಭಾವಗಳನ್ನು ಧ್ವನಿಸುತ್ತಾರೆ. ಚಿಂತನಪರ ಕಾವ್ಯವೂ ಕೂಡ ವಿನಮ್ರವಾಗಿ ಭಾಷೆಯನ್ನೇ ಬಳಸಬೇಕೆಂದು ಬಯಸುವುದು ತಪ್ಪಾಗುತ್ತದೆ. ಇಲ್ಲಿ ಕವಿಯು ಕಾವ್ಯ ಬರೆಯುವ ಕ್ರಿಯೆಗೆ ಮತ್ತು ಅದರ ಸಫಲತೆ ವಿಫಲತೆಗೆ ರೂಪಕ ಹುಡುಕುತ್ತಿದ್ದಾರೆ. ಇದು ಈ ಸಂಕಲನದ ಮೊದಲ ಕವನವೆಂಬುದೂ ನನಗೆ ಕುತೂಹಲದ ವಿಷಯವಾಗಿ ಕಂಡಿದೆ. ಕವನ ಬರೆಯುವ ಕ್ರಿಯೆಯ ಚಿತ್ರದೊಡನೆ ಪ್ರಾರಂಭವಾಗಿ, ಭಾಷೆಯ ಉಪಯೋಗದ ಬಗ್ಗೆ ದೀರ್ಘವಾದ ಚಿಂತನೆ ಇರುವ ಕವನದೊಡನೆ ಕೈ ಜೋಡಿಸುವ ಈ ಸಂಕಲನದ ರೀತಿಯು ವೆಂಕಟೇಶಮೂರ್ತಿಯವರು ತಮ್ಮ ಇಲ್ಲಿಯವರೆಗಿನ ಕಾವ್ಯದ ಬಗ್ಗೆ ತಾವೇ ಮರುಚಿಂತನೆ ನಡೆಸಿದ್ದಾರೆನ್ನಿಸುತ್ತದೆ. ಕಾಲಕಾಲಕ್ಕೆ ಕವಿಯೊಬ್ಬನು ಈ ರೀತಿಯ ಚಿಂತನೆಗೆ ತನ್ನನ್ನೇ ಒಡ್ಡಿಕೊಳ್ಳದಿದ್ದರೆ ಅಂಥ ಕವಿಯ ಕಾವ್ಯದಲ್ಲಿ ಹೆಡಸಿನ ಬದಲು ಪೆಡಸು ಮೂಡುತ್ತದೆ.

ನಿರ್ಗಮನ ಕವನವು ಕನ್ನಡ ಕಾವ್ಯಲೋಕವು ಇತ್ತೀಚೆಗೆ ಕಂಡ ಒಂದು ಉತ್ತಮ ಕವನ. ರಾಮನು ಅಯೋಧ್ಯೆಯಿಂದ ನಿರ್ಗಮಿಸುವುದು, ಕೃಷ್ಣನು ತನ್ನ ಬಾಲ್ಯದಿಂದ ನಿರ್ಗಮಿಸುವುದು ಇವೆರಡೂ ನಿರ್ಗಮನದ ಚಿತ್ರಗಳೇನೋ ನಿಜ. ರಾಮ ಬಿಟ್ಟು ಹೋದದ್ದು ಅರಮನೆಯನ್ನು, ಕೃಷ್ಣ ಬಿಟ್ಟು ಹೋದದ್ದು

ಕಾಡು ಮೇಡುಗಳನ್ನು. ರಾಮ ಬಿಟ್ಟು ಹೋದ ಅಯೋಧ್ಯೆ ಅರಾಜಕತೆಯ ಬೀಡಾಯಿತು. ಕೃಷ್ಣ ಬಿಟ್ಟು ಹೋದ ಸ್ಥಳ ಗೋಪಿಕಾಸ್ತ್ರೀಯರ ವಿರಹದ ಸ್ಥಳವಾಯಿತು. ಆದರೆ ಇಬ್ಬರೂ ಬಿಟ್ಟು ಹೋದದ್ದು ಅಥವ ನಿರ್ಗಮಿಸಿದ್ದು ದುಷ್ಟರನ್ನು ಸದೆಬಡಿಯಲೆಂದೆ. ಬೃಂದಾವನದ ಚಿತ್ರ ಕೊಡುವಾಗ ಕವಿಯು ...... ಕಾಡುಗಳ ಸವರಿ ನಾಡ ವಿಸ್ತರಣೆ ನಡೆದೇ ಇತ್ತು ಹಗಲೂ ಇರುಳು ಎನ್ನುತ್ತಾರೆ. ಈ ಸಾಲು ಒಮ್ಮೆಲೇ ರಾಮ-ಕೃಷ್ಣರ ಕಾಲವನ್ನು ಸಮಕಾಲೀನದೊಡನೆ ಜೋಡಿಸುತ್ತದೆ. ಅರಾಜಕತೆ ಹೆಚ್ಚಾಗಿ ನಿರ್ಗಮನ ದ ನಂತರ ಹಾಳೂರಲ್ಲಿ ನಟ್ಟಿರುಳು ಊಳಿಡುವ ನಾಯಿ/ನರಿ ಗಳಿವೆ, ಅಳುತ್ತಾ ಕೂತಿದ್ದಳು ರಾಧೆ ನಗರದ ಆಚೆ ಏಕಾಂಗಿ ಕವನದ ಮುಂದಿನ ಬೀಸು ನೋಡಿ, ರಾಮಕೃಷ್ಣಪರಮಹಂಸರಿಗೆ ಇದು ಕಾಣುತ್ತದೆ! ಕವಿಯು ಕೇವಲ ರಾಮಕೃಷ್ಣ ಎನ್ನುತ್ತಾರೆ, ಪರಮಹಂಸವನ್ನು ಜೋಡಿಸುವುದಿಲ್ಲ. ದಕ್ಷಿಣೇಶ್ವರದತ್ತ ಎಂದೊಡನೆ ಪರಮಹಂಸರೆಂದೇ ಗೊತ್ತಾಗುತ್ತದೆ. ಅಲ್ಲೇನಿದೆ? ಅಲ್ಲಿ ಸಾತ್ವಿಕರ ಮಾನಸದ/ ಧ್ಯಾನ ಮೌನದ ನಗ್ನ ನೆರಳಿದೆ. ರಾಮ, ಕೃಷ್ಣರಿಗೆ ನಗರವೂ ಒಂದೇ ಕಾಡೂ ಒಂದೇ ಎಂಬಂತಾಯಿತು ಜೀವನ. ಅವರ ಉದ್ದೇಶಗಳೂ ಅಷ್ಟೇ ಶುದ್ಧವಾಗಿದ್ದವು. ಅವರು ಯಾರನ್ನು ಬಿಟ್ಟು ಹೋದರೂ ಅವರಿಗೆ ಆಧ್ಯಾತ್ಮದ ನೆರಳಿನಲ್ಲಿ ಮಾತ್ರ ಸಮಾಧಾನ ಸಾಧ್ಯ. ಇಲ್ಲಿಯೇ ಕವನವು ಸೀತೆ, ರಾಧೆ, ರಾಮ, ಕೃಷ್ಣ ಇವರನ್ನೆಲ್ಲಾ ಕೇವಲ ರೂಪಕಗಳೆಂದು ಉಪಯೋಗಿಸಿಕೊಂಡು ನಿರ್ಗಮನದ ನಂತರ ಉಂಟಾಗುವ ಕ್ಷೋಭೆಗೆ ಆಧ್ಯಾತ್ಮವೊಂದೇ ಉತ್ತರವೆಂಬ ನಿಲುವಿಗೆ ಬರುತ್ತದೆ. ಉತ್ತರಾಯಣದ ಮುಂದಿನ ಭಾಗದಂತೆ ಕಾಣುತ್ತದೆ ಈ ಪದ್ಯ.

ಈ ಸಂಕಲನಕ್ಕೆ ಶಿರೋನಾಮೆಯಾಗಿ ಕವನ ಕನ್ನಡಿಯ ಸೂರ್ಯ ಇಲ್ಲಿಯ ಉಳಿದ ಕವನಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಇಲ್ಲಿ ಸಾಮಾಜಿಕ, ನಿಸರ್ಗ ಮತ್ತು ಅಭಿಲಾಷೆಗಳನ್ನು ಒಂದುಗೂಡಿಸಲು ವೆಂಕಟೇಶಮೂರ್ತಿ ಯವರು ಪ್ರಯತ್ನಿಸುತ್ತಾರೆ. ಪ್ರಾಯಶಃ ಕವಿಯ ಈ ಪ್ರಯತ್ನ ಕವಿಗೇ ವಿಸ್ಮಯವನ್ನುಂಟು ಮಾಡಿದಂತೆ ತೋರುತ್ತದೆ. ಇಲ್ಲಿಯ ಧ್ವನಿ ಪರಂಪರೆ ವೆಂಕಟೇಶಮೂರ್ತಿಯವರ ಇತರ ಕವನಗಳಿಗೆ ಸ್ವಲ್ಪ ಹೊರತಾದದ್ದು. ಮಗ, ತಾಯಿ, ಮಳೆ, ಕುಂಭ ಆಕಾಶ, ಅದರಲ್ಲಿ ಮೂಡುವ ಸೂರ್ಯ ಮತ್ತು ತಾಯಿಯ ಅಭಿಲಾಷೆ ಇವುಗಳು ಹೇಳದಿರುವುದನ್ನೂ ಸೂಕ್ಷ್ಮವಾಗಿ ಹೇಳುತ್ತವೆ. ಹದಿನೆಂಟು ತುಂಬದ ವಿಧವೆ ಮಳೆ ನಿಂತ ಮೇಲೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಾ, ಕನ್ನಡಿಯಲ್ಲಿ ಕಾಣುವ ಸೂರ್ಯನನ್ನೇ ತನ್ನ ಹಣೆಯ ಕುಂಕುಮವಾಗಿ ತೀಡಿಕೊಳ್ಳುವುದರ ಹಿಂದೆ ವ್ಯಾಖ್ಯಾನಿಸಲಾಗದ ವಿಷಾದವಿದೆ. ಅಮ್ಮನ ಬೋಳು ಹಣೆ ನೋಡುವ ಮಗನಲ್ಲಿ ಯಾವ ಭಾವವಿದೆ ಎಂಬುದು ವಾಚ್ಯವಾಗಿ ಎಲ್ಲಿಯೂ ವ್ಯಕ್ತವಾಗುವುದಿಲ್ಲ. ಅದು ಕವನಕ್ಕೆ ಬೇಕಿಲ್ಲ. ಇಲ್ಲಿಯ ಮಳೆ ಜೀವನಕ್ಕೆ ಸಂಕೇತವಾಗುವಂತೆ, ಅಶ್ರುಧಾರೆಗೂ ಸಂಕೇತವಾಗುತ್ತದೆ. ಈ ಕೆಳಗಿನ ಸಾಲುಗಳಲ್ಲಿಯ ಸೂಕ್ಷ್ಮತೆಯನ್ನು ಗಮನಿಸಬೇಕು :

....ಸುಮ್ಮನೆ ನೋಡುತ್ತಾ ಕೂ
ತಿದ್ದಳು ಅಮ್ಮ ತನ್ನ ಮು
ಖವನ್ನ, ನಡುಗುವ ಕೈಯಲ್ಲಿ
ಮೆಲ್ಲಗೆತ್ತಿಕೊಂಡಳು ಕುಂಕುಮದ ಡಬ್ಬಿ

ಇದು ಭಯಕ್ಕೊಳಗಾದ ಅಭಿಲಾಷೆ. ಇದು ಪೂರ್ತಿಯಾಗುವುದು ಕನ್ನಡಿಯಲ್ಲಿ ಮಂದಗೆ ಹೊಳೆಯುವ ಸೂರ್ಯನಿಂದಾಗಿ. ಈ ಕಲ್ಪನೆಯಲ್ಲಿ ಹುದುಗಿರುವ ವಾಚ್ಯವಾಗಲಾರದ ಭಾವಗಳಲ್ಲಿ ಮಗನ ಅನಾಥ ಭಾವನೆ ಮತ್ತು ತಾಯಿಯ ಒಂಟಿತನ ಇವೆರಡೂ ಇವೆ. ನನಗೆ ಗೊತ್ತಿರುವ ಮಟ್ಟಿಗೆ ವೆಂಕಟೇಶಮೂರ್ತಿಯವರು ಇಂಥ ಕವನಗಳನ್ನು ಬರೆದದ್ದು ಕಡಿಮೆ. ಅವರು ಪುರಾಣಗಳೊಡನೆಯ ಅನುಸಂಧಾನದಲ್ಲಿ ಸಂಭ್ರಮವನ್ನು ಕಂಡದ್ದೇ ಹೆಚ್ಚು. 'ಕನ್ನಡಿಯ ಸೂರ್ಯ' ಪದ್ಯದಲ್ಲಿ ಅವರು ಸರಳವಾಗಿದ್ದಾರೆ. ಹೆಚ್ಚು ನೇರವಾಗಿದ್ದಾರೆ

ಮತ್ತು ಕಥಾಂಶವನ್ನು ಕವನದಲ್ಲಿ ತಂದಿದ್ದಾರೆ. ಕವಿಯ ಅಳಲು ಪದ್ಯವು ಕನ್ನಡಿಯ ಸೂರ್ಯ ಪದ್ಯಕ್ಕೆ ಹೆಚ್ಚು ಸಮೀಪವಾಗಿ ಬರುವ ಪದ್ಯ. ತರಗೆಲೆಗಳು ಪದ್ಯ ಅಥವ ಪದ್ಯದ ಅಕ್ಷರಗಳಾಗಿ ಲೀಲಾಜಾಲವಾಗಿ ಮಾರ್ಪಾಡಾಗುವ ಅಂಶವು ನನಗೆ ಈ ಕವನದಲ್ಲಿ ಬಹಳ ಹಿಡಿಸಿತು. ಇಲ್ಲಿಯ ಖಿನ್ನತೆಗೆ ಕಾರಣವೇನು ಎನ್ನುವ ಅಂಶ ಪ್ರಾರಂಭದಲ್ಲಿಯೇ ವ್ಯಕ್ತವಾಗಿದೆ ಮತ್ತು ಕವಿಯ ಅಳಲಿಗೆ ಕಾರಣವೂ ಅಲ್ಲಿಯೇ ವ್ಯಕ್ತವಾಗುತ್ತದೆ.

> ಸಂಜೆಗಣ್ಣಿನ ಓದುಗರೆಲ್ಲಾ ಮಾತೇ ಆಡದೆ ಎದ್ದು
> ಹೋದಮೇಲೆ ಒಬ್ಬೊಬ್ಬರೇ ಒಬ್ಬೊಬ್ಬರೇ, ಯಾರ
> ಮುಂದಿಡಲಿ ಮೈ ತುಂಬ ಗುಸುಗುಸುವೆನ್ನುವೀ ಪತ್ರಗಳ?

ಪ್ರೌಢ ಮನಸ್ಸುಗಳು ಮಾಯವಾದಾಗ ಕವನಗಳನ್ನು ಅರ್ಥಮಾಡಿಕೊಳ್ಳುವವರಾರು ಎಂಬ ಪ್ರಶ್ನೆ ಕವಿಯ ಮನಸ್ಸಿನಲ್ಲಿ ಮೂಡಿದೆ.

> ......ಮಾತೇ ಆಡದ ನಿಮ್ಮ
> ಉಲುಹುಗಳನ್ನೆತ್ತಿ ಆಲಿಸುವ ಕರುಣಾಗಳನ್ನೆಲ್ಲಿಂದ ತರಲಿ
> ಸನ್ನೊಲುಮೆಯ ತರಗೆಲೆಗಳೇ?......

ಕವನ ಈ ಪ್ರಶ್ನೆಗೆ ಬರುವ ಹೊತ್ತಿಗೆ ಕವನದ ಶಬ್ದಗಳನ್ನು ತರಗೆಲೆಗಳಾಗಿ ಮಾರ್ಪಡಿಸಿ ಬಿಡುತ್ತದೆ. ಇನ್ನು ಚಳಿಗಾಲದಲ್ಲಿ ಕಾಯಿಸಿಕೊಳ್ಳಲು ತರಗೆಲೆಗಳನ್ನೆಲ್ಲಾ ಒಟ್ಟುಗೂಡಿಸಿ ಬೆಂಕಿ ಹಾಕುವ ಚಿತ್ರವಿದೆ. ಆ ಬೆಂಕಿಯಿಂದ ಮೇಲೇಳುವ ಉರಿನಾಲಗೆಯಿಂದ ಬಿಡಿಸಿಕೊಂಡು ಕಪ್ಪನಕ್ಷರಗಳು ಮೇಲೇಳುತ್ತಿವೆ. ಕಾಗದದ ಉಂಡೆ, ತರಗೆಲೆಗಳು, ಬೆಂಕಿ, ಅಕ್ಷರಗಳು, ಮಾತೇ ಆಡದೆ ಹೊರಟು ಹೋಗುವ ಸಂಜೆವಯಸ್ಸಿನ ಓದುಗರು ಇವರೆಲ್ಲಾ ಕವಿಯ ಅಳಲನ್ನು ಧ್ವನಿಸಬೇಕಾಗಿದೆ. ಆದರೆ ಕವನ ಅದನ್ನು ಅರುಹುವಲ್ಲಿ ಸಫಲವಾಗುವುದಿಲ್ಲ. ಕಾರಣವಿಷ್ಟೆ, ಭಾವ ಭಾಷೆಗಳ ಸಂಗಮವಾದರೂ ರೂಪಕಗಳ ಮತ್ತು ಅರ್ಥಗಳ ಸಂಯೋಗವಾಗುವುದಿಲ್ಲ.

ಕವಿಯ ಅಳಲಿನೊಡನೆ, ಇನ್ನೊಂದು ರಂಗವಲ್ಲಿ ಎಂಬ ಪದ್ಯವನ್ನು ಹೋಲಿಸಿ ನೋಡಬೇಕು. ರಂಗವಲ್ಲಿ ಹಾಕುತ್ತಿರುವ ತರುಣಿಯು ಇಟ್ಟ ಚುಕ್ಕಿಗಳು ಕವಿಯ ಕಣ್ಣಲ್ಲಿ ಸೇರಿ, ಅಲ್ಲಿಯೇ ಒಂದು ರಂಗವಲ್ಲಿ ಮೂಡಿ ಅವಳೇ ಹೊಸಕವಿತೆ ಯಾಗಿ ಕಾಣುತ್ತಾಳೆ. ಅಂಥ ಅನುಭವವಾದಾಗ ಪ್ರಾಣ ಹಿಂಡುವ ಮಂಡಿನೋವು ಕೂಡ ಮರೆತು ಹೋಗುತ್ತದೆ. ಹೀಗಾಗಿ ಕವಿಯು ಕೊನೆಗೆ ಹೇಳುತ್ತಾರೆ, ಕವಿತೆ ಹೀಗಿರಬೇಕು ಇದ್ದರೂ ಮರೆವಂತೆ ಒಳಗಿರುವ ನೋವು. ರಕ್ಷಣೆಯಿಲ್ಲದ ತರಗೆಲೆಗಳು ಕೊನೆಗೆ ಅಗ್ನಿಗಾಹುತಿಯಾಗುವಂತೆ ಕಂಡ ಕವಿತೆಯು ಇಲ್ಲಿ ಒಳಗಿನ ನೋವನ್ನು ಮರೆಯಿಸುವ ಔಷಧಿಯಂತೆಯೂ ಕೆಲಸಮಾಡುತ್ತದೆ. ಇದು ನಮ್ಮ ಕಾಲದ ಎಲ್ಲ ಕವಿಗಳ ಸಂಕಟವೂ ಇರಬಹುದು. ಅದು ದೊಡ್ಡ ಓದುಗ ಸಮೂಹವನ್ನು ದಕ್ಕಿಸಿಕೊಳ್ಳಲಾರದು ಮತ್ತು ಮನಸ್ಸಿಗೆ ಮುದ ನೀಡುವ ಔಷಧಿ ಗುಣವನ್ನೂ ಬಿಡಲಾರದು. ಗುಬ್ಬಿಯೆಂದರೆ ಪದ್ಯದಲ್ಲಿ ಕೂಡ ಕವಿಯು ಕವನ ನಿರ್ಮಾಣ ವನ್ನು ಕುರಿತು ಸ್ವಲ್ಪ ಹೃದ್ಯವಾಗುವಂತೆ ಯೋಚಿಸುತ್ತಾರೆ. ಇಲ್ಲಿಯ ಒಂದು ಸಾಲು ಬಹಳ ಗಮನ ಸೆಳೆಯುತ್ತದೆ : ಆದರೆ ಅಸಲಿ ರೂಪವನ್ನೇ/ ರೂಪಾಂತರಿಸುವ ರೂಪಕದ ನವೀನ ರೂಪ ಗುರುತಿಸುವುದು/ ಹೇಗೆ ಮಾರಾಯರೆ! ತರಗೆಲೆಗಳಾಗಿ ಕಂಡ ಕವಿತೆಯ ಶಬ್ದಗಳು, ರಂಗವಲ್ಲಿಯ ಚುಕ್ಕೆಗಳು ಕಣ್ಣು ಸೇರಿ ಇಡೀ ರಂಗವಲ್ಲಿ ಬಿಡಿಸಿದವರು ಎದ್ದು ಹೋದ ಮೇಲೆಯೂ ನಮ್ಮಲ್ಲಿ ಬದುಕುವ ರೀತಿ ಮತ್ತು ರೂಪಕಗಳು ವಾಸ್ತವದ ನೆಲೆಯಿಂದ ಎದ್ದು ರೂಪಾಂತರಗೊಳ್ಳುವ ರೀತಿ- ಇವೆಲ್ಲಾ ಒಂದೇ ಕವಿ ಮನಸ್ಸಿನ ವಿವಿಧ ಪಾರ್ಶ್ವಗಳು. ವೆಂಕಟೇಶಮೂರ್ತಿಯವರ ಕವನಗಳಲ್ಲಿ ವೈವಿಧ್ಯತೆಯನ್ನು ಕಾಣುವುದಕ್ಕೆ ಈ ವಿವಿಧ ಪಾರ್ಶ್ವಗಳೇ ಕಾರಣ. ಜೀವಂತ ಕವಿಯೊಬ್ಬ ವಾಸ್ತವವು ರೂಪಕವಾಗಿ ಮಾರ್ಪಾಡಾಗುವ ಬಗ್ಗೆ ಮತ್ತು ಅದು ಜೀರುವ ಅರ್ಥಗಳ ಬಗ್ಗೆ ಸದಾ ಯೋಚಿಸಲೇಬೇಕಾಗುತ್ತದೆ. ಎಷ್ಟೋ ಸಲ ವಾಸ್ತವವು ವಾಸ್ತವವಾಗಿ

ತೋರುವುದೇ ಇಲ್ಲ! ಕಣ್ಣಿಗೆ ಕಟ್ಟುವ, ಶಬ್ದ ಮಾಡುವ, ನಿಶ್ಶಬ್ದವಾಗುವ, ಕೇಳುವ ಕಿವಿ ಮೂಲಕ ಚಿತ್ರ ಮೂಡಿಸುವ ಪ್ರಕ್ರಿಯೆಯ ವಿವಿಧ ಹಂತಗಳನ್ನು ಕುರಿತು ಈ ಸಂಕಲನಮದ್ದಕ್ಕೂ ಈ ಕವಿಯು ಚಿಂತಿಸಿದ್ದಾರೆ. ಈ ಚಿಂತನೆಯೇ ಅವರಲ್ಲಿ ಅಭಿವ್ಯಕ್ತಿ ಕ್ರಮದ ಬಗ್ಗೆ ಹೊಸ ಆಲೋಚನೆಗಳನ್ನು ಮೂಡಿಸಿದೆ.

ಮೂಲಮೂರ್ತಿಗೆ ಮೊರೆ... ಎನ್ನುವ ಪದ್ಯದಲ್ಲಿಯ ರಭಸ ನನ್ನನ್ನು ಹಿಡಿದು ನಿಲ್ಲಿಸಿತು. ಮೇಲ್ನೋಟಕ್ಕೆ ಹಾಳುಹಂಪೆಯ ಮಂದಿರಗಳಿಂದ ಮಾಯವಾದ ಮೂಲಮೂರ್ತಿಗಳಿಗೆ ಕರೆನೀಡುತ್ತಿರುವ ಪದ್ಯ ಇದಾಗಿ ತೋರುತ್ತದೆ. ಆದರೆ ಇಡೀ ಕವನ ಸಂಕಲನದ ಕೇಂದ್ರದಲ್ಲಿರುವ ನಿರ್ಗಮನದ ನಂತರದ ವಾತಾವರಣವೇ ಇಲ್ಲಿಯೂ ಇದೆ. ನಿರ್ಗಮನವು ಕಾವ್ಯ ಸ್ಫೂರ್ತಿಯದಾಗಿದ್ದು ಅದಕ್ಕೆ ಮೊರೆ ಇಟ್ಟು ಮತ್ತೆ ಮತ್ತೆ ಕವಿಯ ಮನಸ್ಸಿನ ಕೇಂದ್ರದಲ್ಲಿ ಸ್ಥಾಪಿತಗೊಳ್ಳುವಂತೆ ಆಹ್ವಾನಿಸುವ ಧ್ವನಿ ಇನ್ನಿತರ ಕೆಲವು ಕವನಗಳಲ್ಲಿ ಇದ್ದಂತೆ ಇಲ್ಲಿಯೂ ಇದೆ. ಆದರೆ ನೇರವಾಗಿ ಈ ವಿಷಯವನ್ನೇ ಕುರಿತಾದ ಪದ್ಯವು ಈ ಸಂಕಲನದಲ್ಲಿ ಇಲ್ಲದಿರುವುದು ಆಶ್ಚರ್ಯವನ್ನು ಹುಟ್ಟಿಸುತ್ತದೆ. ಪ್ರಾಯಶಃ ನಿರ್ಗಮನದ ನಂತರದ ವಿಷಾದದವಡಿಯಲ್ಲಿ ಈ ಮೂಲ ವಿಷಯ ಮುಚ್ಚಿ ಹೋಗಿದೆ. ಈ ಕವನದಲ್ಲಿ ಬರುವ ಈ ಸಾಲುಗಳು ನನ್ನ ಮಾತನ್ನು ಬೆಂಬಲಿಸುತ್ತವೆ :

...ಹಳೆಯ ಗೊಬ್ಬರ ಹೊಸ ಹಸಿರ ಮೂಲಕ್ಕೊದಗಿಸಲಿ
ಜೀವಸತ್ತ್ವ ಹಿಂಜಿದ ಹಾಡ ನೂಲೆತ್ತಿ ಬಿಗಿ ನಿನ್ನ ದಂಡಿಗೆಗೆ
ಹುರಿಗೊಂಡ ಹೊಸ ತಂತಿ...

ಇದರೊಡನೆಯೇ ಹಂಪೆಯ ಸುತ್ತಲೂ ಹರಿಯುವ ತುಂಗಾನದಿ, ಅಲ್ಲಿಯ ತೋಟ-ಪಟ್ಟಿಗಳು ಮತ್ತು ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೆಲಸ ಇವೆಲ್ಲವುಗಳೂ ಮಾರ್ಮಿಕವಾಗಿ, ಹಾಳಾದುದಕ್ಕೆ, ನಿರ್ಗಮಿಸುವಿಕೆಗೆ ಮತ್ತು ಮೂಲವಿಗ್ರಹದ ಅನುಷ್ಠಾನದ ಅವಶ್ಯಕತೆಗೆ ಪೂರಕವಾಗಿ ಮತ್ತು ಸಮಾನಾಂತರವಾಗಿ ಕವನದಲ್ಲಿ ಬೆಳೆದು ಬರುತ್ತವೆ; ಕಣ್ಣಿಗೆ ಕಟ್ಟುವ ಹಾಗೆ.

ಈ ಸಂಕಲನದಲ್ಲಿಯ ಪುರುಷಧ್ವನಿ ಎಂಬ ಕವನ ನನಗೆ ಇಷ್ಟವಾದ ಇನ್ನೊಂದು ಕವನ. ಇದು ಪೈಲ್ವಾನ ಸಂಜಪ್ಪನ ಬದುಕನ್ನು ಧ್ಯಾನಿಸುತ್ತ ಬರೆದ ಕವನವೆಂದು ಕವಿಯು ಹೇಳಿದ್ದಾರೆ. ಈ ಸಂಕಲನದ ಉಳಿದ ಕವನಗಳಿಗಿಂತ ಇದು ಭಿನ್ನವಾಗಿದೆ. ಪೈಲ್ವಾನನೊಬ್ಬ ಈ ಕವನದ ಕೇಂದ್ರದಲ್ಲಿದ್ದಾನೆ, ನಿಜ. ಆದರೆ ಒಂದು ಪುಟ್ಟ ಊರು ಈ ಕವನದಲ್ಲಿ ಮೈದಾಳುವ ರೀತಿ ಅದ್ಭುತವಾಗಿದೆ. ಪೈಲ್ವಾನ ಕಥೆಯೊಡನೆ ಹೆಣೆದುಕೊಂಡ ಒಂದು ಮೌನ ಪ್ರೇಮಕಥೆ ಇದೆ. ಪೈಲ್ವಾನನ ವಿಜಯವನ್ನು ನೋಡಿ ಒಂದು ಬಾರಿ ಸಿಕ್ಕೆ ಹೊಡೆದ ಹುಡುಗಿಯನ್ನು ಕೊನೆಗೂ ಚಿತ್ ಮಾಡಲು ಸಾಧ್ಯವಾಗದ ಪೈಲ್ವಾನ್ ಸಂಜಪ್ಪ ಅದೇ ದುಃಖದಲ್ಲಿ ಸಾಯುತ್ತಾನೆ. ಆದರೆ ಹೃದಯದಲ್ಲಿ ಬಚ್ಚಿಟ್ಟುಕೊಂಡ ಈ ಪ್ರೀತಿಯು ಅವನ ಜೀವನೋತ್ಸಾಹವನ್ನು ಕಿಂಚಿತ್ತೂ ಕಡಿಮೆ ಮಾಡಿರಲಿಲ್ಲ ಎಂಬ ಧ್ವನಿಯು ಕವನದುದ್ದಕ್ಕೂ ಹಬ್ಬಿರುವುದರಿಂದ ಸಂಜಪ್ಪನ ಸಾವು ನಮಗೆ ದುರಂತ ಸಾವಾಗಿ ಕಾಣುವುದಿಲ್ಲ. ಇಂಥ ಕವನಗಳಲ್ಲಿ ಮೂಲ ವಸ್ತುವನ್ನು ದುರಂತದಿಂದ ದೂರವಿಡುವ ರೀತಿಯು ವೆಂಕಟೇಶಮೂರ್ತಿಯವರಿಗೆ ಸಾಧಿಸಿದೆ. ಈ ಕವಿಯಲ್ಲಿ ಈ ಅಂಶವೂ ಇದೆ ಎನ್ನುವುದು ಅವರ ಮುಂದಿನ ಕವನಗಳು ಬೇರೆ ರೀತಿಯಲ್ಲಿ ಮೂಡಬಹುದೆಂಬುದಕ್ಕೆ ಸೂಚನೆಯೂ ಆಗಿದೆ.

ಇನ್ನು ಸಂಸ್ಕೃತ ಮಹಾಕಾವ್ಯಗಳಲ್ಲಿಯ ಸನ್ನಿವೇಶಗಳನ್ನು ಆಧರಿಸಿ ಕೆಲವು ವಿಶಿಷ್ಟ ಭಾವನೆಗಳನ್ನು ವ್ಯಕ್ತ ಪಡಿಸುವ ಮಹತ್ವದ ಕವನಗಳೂ ಇಲ್ಲಿವೆ. ಈ ಅಳವಡಿಕೆಯನ್ನು ನಾವು ಅಡಿಗರ ಕಾವ್ಯದ ವಿಷಯದಲ್ಲಿ ಹೇಳುವಂತೆ- ಪುರಾಣ ಪ್ರತಿಮೆಗಳೆಂದು ಹೇಳಲಾಗುವುದಿಲ್ಲ. ಏಕೆಂದರೆ ವೆಂಕಟೇಶಮೂರ್ತಿಯವರು ಪುರಾಣವನ್ನು ತಾತ್ವಿಕ ಚಿಂತನೆಗಾಗಿ ಬಳಸಿಕೊಳ್ಳದೆ ಭಾವನಾತ್ಮಕ ಅಭಿವ್ಯಕ್ತಿಗಾಗಿಯೇ ಬಳಸಿಕೊಳ್ಳುತ್ತಾರೆ. ಮಹಾಭಾರತ ಮತ್ತು ರಾಮಾಯಣದ ಸನ್ನಿವೇಶಗಳನ್ನು ಈ ಕವಿಯು ಬಳಸುವುದು ಹೊಸದೇನಲ್ಲ. ಆದರೆ

ಇಲ್ಲಿ ನಿರ್ಗಮನದ ನಂತರ ಉಂಟಾಗುವ ಶೂನ್ಯ ಸ್ಥಿತಿಯನ್ನು ಕುರಿತು ಬರೆದ ಹೆಚ್ಚು ಕವನಗಳಿವೆ. ಇವು ಉತ್ತರಾಯಣ ದ ನಂತರ ಬಂದ ಕವನಗಳೆಂಬುದನ್ನು ಗಮನದಲ್ಲಿಟ್ಟುಕೊಂಡು ಓದಿದರೆ ಈ ನಿರ್ಗಮನದ ಕಾವ್ಯ ವಸ್ತುವು ಈ ಕವಿಯನ್ನು ಏಕೆ ಕಾಡುತ್ತಿದೆ ಎಂಬುದು ಅರ್ಥವಾಗಬಹುದು. ಮರಣದ ಮೂಲಕ ಬರುವ ನಿರ್ಗಮನದಷ್ಟೇ ಉಳಿದ ಕೆಲವು ಸನ್ನಿವೇಶದಲ್ಲಿಯ ನಿರ್ಗಮನವೂ ನಮ್ಮನ್ನು ಬಾಧಿಸುತ್ತದೆಂಬ ದೃಷ್ಟಿಕೋನವೇ ಇಲ್ಲಿ ಪ್ರಮುಖವಾಗಿದೆ. ನಾನು ಈ ಮೊದಲು ಚರ್ಚಿಸಿದ ನಿರ್ಗಮನ ಎಂಬ ಇಲ್ಲಿಯ ಕವನವೇ ಈ ಕಾವ್ಯವಸ್ತುವನ್ನು ಬಹಳ ಶಕ್ತಿಯುತವಾಗಿ ಸೆರೆಹಿಡಿಯಲು ಪ್ರಯತ್ನಿಸುತ್ತದೆ. ಆ ಕವನವನ್ನೇ ಇನ್ನಷ್ಟು ವಿವರವಾಗಿ ನೋಡಬಹುದು. ರಾಮ ಮತ್ತು ಕೃಷ್ಣರು ಕಳೆದ ಬಾಲ್ಯದ ವಾತಾವರಣವನ್ನು ಪ್ರಾರಂಭದಲ್ಲಿ ಕವಿಯು ತುಲನಾತ್ಮಕವಾಗಿ ನೋಡುತ್ತಾರೆ. ತಮ್ಮ ತಮ್ಮ ಕೈಂಕರ್ಯ ಮುಗಿಸಲೋಸುಗ ನಿರ್ಗಮಿಸಿದ ಮೇಲೆ:

> ರಾಮ, ಕೃಷ್ಣ ಕಡೆಕಡೆಗೆ ಕಾಡು ನಾಡೆಂಬೆರಡರಲ್ಲುಳಿಯಲೇ
> ಇಲ್ಲ ವರಕು.
> ನಾಡಿನಿಂದ ಕಾಡಿಗೆ ಹೊರಟವ ರಾಮ, ಕಾಡಿನಿಂದ ನಾಡಿಗೆ ಬಂದವ ಕೃಷ್ಣ

ಆದರೆ ಎರಡೂ ಕಡೆ ಸಾಮಾನ್ಯವಾಗಿರುವುದು ನಿರ್ಗಮನ ರಾಮ ನಿರ್ಗಮಿಸಿದ ಮೇಲೆ ಅಯೋಧ್ಯೆಯ ಚಿತ್ರ ಹೀಗಿದೆ.

> ... ಸರಯೂ ನದಿ ರಾಡಿ ಬಗ್ಗಡವಾಗಿ
> ಥೀಡಿಕ್ಕಿ ಮಾಡುತ್ತಿದ್ದವಲ್ಲಿ ಕಾಡೆಮ್ಮೆ ಕೊಬ್ಬಿದ ಕೋಣ
> ಸಾಲು ಪುತ್ಥಳಿಯ ಮೊಲೆ ಮೇಲೀಗ ಆಗಷ್ಟೆ ಕಳಚಿದ್ದ
> ಹಾವಿನ ಪೊರೆ. ಹಾಳೂರಲ್ಲಿ ಸಟ್ಟರುಳು ಊಳಿಡುವ ನಾಯಿ ನರಿ.

ಕೃಷ್ಣನ ನಿರ್ಗಮನದ ನಂತರ ಬೃಂದಾವನದ ಚಿತ್ರ ಹೀಗಿದೆ :

> ... ಎಲೆ ಮನೆಗಳೆಲ್ಲಾ
> ಆಗಿ ನಿರ್ನಾಮ ಮೇಲೆದಿದ್ದವಲ್ಲಿ ಗಾರೆ ಗಚ್ಚಿನ
> ಮುಗಿಲೆತ್ತರದ ಮಹಡಿ. ಕಾಡುಗಳ ಸವರಿ ನಾಡ ವಿಸ್ತರಣೆ
> ನಡೆದೇ ಇತ್ತು ಹಗಲೂ ಇರುಳು...

ಕೃಷ್ಣನ ನಿರ್ಗಮನದ ನಂತರದ ಚಿತ್ರ ವರ್ತಮಾನದತ್ತ ನಿರ್ದೇಶಿಸುತ್ತದೆ. ಆದರೆ ರಾಮನ ನಿರ್ಗಮನದ ನಂತರದ ಚಿತ್ರ ವರ್ತಮಾನದತ್ತ ನಿರ್ದೇಶಿಸುವ ಅಂಶಗಳನ್ನು ಹೆಚ್ಚಾಗಿ ಹೊಂದಿಲ್ಲ. ಕವನವು ಹೀಗೆ ತುಲನಾತ್ಮಕವಾಗಿ ನಿರ್ಗಮನವನ್ನು ವ್ಯಾಖ್ಯಾನಿಸುತ್ತಿರುವಾಗಲೇ, ಈ ಅವನತಿಯನ್ನು ಇನ್ನು ರಾಮಕೃಷ್ಣರು ನೋಡುವುದು ಸಾಕೆಂದು ಸಾಕಿನ್ನು ನಿಮಗೆ ಮಣ್ಣಿನ ಸೆರೆಯೆಂದು ಅವರನ್ನು ದಕ್ಷಿಣೇಶ್ವರದತ್ತ ಸಾತ್ವಿಕರ ಮಾನಸದ/ ಧ್ಯಾನ ಮೌನದ ನಗ್ನ ನೆರಳ ಕಡೆಗೆ... ಕರೆದೊಯ್ಯಲಾಗುತ್ತದೆ. ದಕ್ಷಿಣೇಶ್ವರವೆಂದೊಡನೆ ರಾಮಕೃಷ್ಣರಿಬ್ಬರೂ ಆಧುನಿಕ ಕಾಲದಲ್ಲಿ ರಾಮಕೃಷ್ಣ ಪರಮಹಂಸರಲ್ಲಿ ಐಕ್ಯರಾಗಿದ್ದಾರೆಂಬ ಧ್ವನಿ ಹೊರಡುತ್ತದೆ. ಪಾಳು ಬಿದ್ದ ನಗರಗಳೀಗ ಆಧುನಿಕ ಕಾಲದಲ್ಲಿ ಅವನತಿಗೊಂಡ ಮೌಲ್ಯಗಳಿಗೆ ರೂಪಕಗಳಾಗಿ ಗೋಚರಿಸತೊಡಗುತ್ತವೆ. ವೆಂಕಟೇಶಮೂರ್ತಿಯವರಿಗೆ ಬಹಳ ಇಷ್ಟವಾದ ರಾಮಾಯಣ ಮಹಾಭಾರತದ ಸನ್ನಿವೇಶಗಳನ್ನು ಹೀಗೆ ವರ್ತಮಾನದ ಜಗತ್ತಿನ ಮೇಲೆ ವ್ಯಾಖ್ಯೆ ಬರೆಯಲು ಉಪಯೋಗಿಸುವ ಕಲೆ ಬಹಳ ಉತ್ತಮವಾಗಿ ಸಾಧಿಸಿದೆ. ಇದೇ ಸಂಪ್ರದಾಯದಲ್ಲಿರುವ ಇನ್ನೊಂದು ಕವನ ಘಟು, ಭೀಮನಿಗೆ. ಘಟೋದ್ಗಜನು ತನ್ನ ತಂದೆಯನ್ನು ಕುರಿತು ಹೇಳಿದ ಸ್ವಗತವಿದು. ಮಹಾಭಾರತದ ಈ ಪಾತ್ರಗಳನ್ನು

ಉಪಯೋಗಿಸಿ ಹಳ್ಳಿ ಮತ್ತು ಶಹರಗಳ ಮಧ್ಯದ ವ್ಯತ್ಯಾಸ ಮತ್ತು ಅವೆರಡರಲ್ಲೂ ವಾಸಿಸುತ್ತಿರುವ ದೌರ್ಬಲ್ಯಗಳನ್ನು ಕುರಿತು ಕವಿ ಹೇಳುತ್ತಾರೆ. ಇಂಥ ಪದ್ಯಗಳಲ್ಲಿ ವೆಂಕಟೇಶಮೂರ್ತಿಯವರು ವರ್ತಮಾನದತ್ತ ನಿರ್ದೇಶಿಸುವ ಸೂಚನೆಗಳನ್ನು ಇನ್ನೂ ಹೆಚ್ಚಾಗಿ ಕವನದಲ್ಲಿ ತೊಡಗಿಸಬೇಕೆನ್ನಿಸುತ್ತದೆ. ಇಲ್ಲವಾದರೆ ಇದು ಕೇವಲ ಮಗನೊಬ್ಬ ಬಹಳ ದಿನಗಳ ನಂತರ ಬಂದ ತಂದೆಯನ್ನು ಭೇಟಿಸಲು ಹೇಳುವ ಮಾತುಗಳಾಗಿ ತೋರಿಬಿಡಬಹುದು. ಹಾಗೆಂದು ಕವನವು ಪೂರ್ತಿ ವಾಚ್ಯವಾಗುವ ಅವಶ್ಯಕತೆಯೂ ಇಲ್ಲ. ಕೆಲವೊಂದು ವಿಶಿಷ್ಟ ಸಂದರ್ಭಗಳಿಂದಾಗಿ ಹುಟ್ಟುವ ಭಾವನೆಗಳು ಅಂದಿಗೂ ಇಂದಿಗೂ ಒಂದೇ ಎಂಬ ಭಾವನೆಯು ಈ ಕವನ ಸಂಕಲನದಲ್ಲಿ ಮಹಾಕಾವ್ಯ ಮೂಲವಾಗಿ ಬಂದ ಕವನಗಳಲ್ಲೆಲ್ಲ ಎದ್ದು ಕಾಣುತ್ತದೆ.

ಅಕ್ಷಯ ರಕ್ಷೆ ಎಂಬ ಪದ್ಯದಲ್ಲಿ ಪಾಂಡವರ ಹುಡುಕಾಟದ ಚಿತ್ರವೇನೋ ಇದೆ. ಆದರೆ ಕೆಳಗಿನ ಸಾಲುಗಳು ಬಂದೊಡನೆ ಅದು ಕೇವಲ ಪಾಂಡವರ ವನವಾಸದ ಚಿತ್ರವಲ್ಲವೆಂಬುದು ಸ್ಪಷ್ಟವಾಗುತ್ತದೆ.

... ಐದು ಅತ್ಯ ಗೋತ್ರನತ ಸ್ಥಾಣು
ಲಿಂಗದ ನಡುವೆ ತುಂಬದರಕೆಯ ನಿಸ್ಸಂಗ
ಕಣಿವೆ. ಹುಡುಕಿಕೊಂಡಲೆಯುತ್ತಿದ್ದಾರೆ ಪಂಚ
ವಲ್ಲಭರು ಅಕ್ಷಯ ವಸ್ತ್ರವನ್ನ, ಅಕ್ಷಯ
ಪಾತ್ರೆಯನ್ನ, ಅಕ್ಷಯ ಸೂರನ್ನ- ಹಿಡಿಬಿತ್ತನೆಗೆ
ಖಂಡುಗ ಕೊಡುವ ಬನಶಂಕರಿಯ ಸಮೃದ್ಧ
ಮಡಿಲಲ್ಲಿ...

ಇಲ್ಲಿ ನಿಸ್ಸಂಗ ಕಣಿವೆ ಮತ್ತು ಸ್ಥಾಣು ಲಿಂಗದ ನಡುವೆ ಎನ್ನುವ ಮಾತುಗಳು ಬಂದೊಡನೆ ಇದು ಕೇವಲ ಪಾಂಡವರನ್ನು ಕುರಿತಾದ ಪದ್ಯವಲ್ಲವೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಬರುವ ಸಾಲುಗಳೊಡನೆ ಈ ಸಾಲುಗಳನ್ನು ಹೋಲಿಸಿದಾಗ ಬೇರೊಂದು ಭಾವವೇ ಸ್ಫುರಿಸುತ್ತದೆ.

... ಡಾರ್ಜಿಲಿಂಗಲ್ಲಿ
ಕಾಯುತ್ತಿದೇವೆ ನಾನೂ ಮತ್ತು ನನ್ನಾಕೆ- ಆಗಿ
ವಿಸ್ಫುರಿತ ಲಿಂಗ, ಪಸೆಯುಕ್ಕುವಾರ್ದ್ರ ಯೋನಿ

ತೀರ ವೈಯಕ್ತಿಕವಾದ ಲೈಂಗಿಕ ಭಾವವನ್ನು ಪಾಂಡವರ ಅರಸುವಿಕೆಯನ್ನು ರೂಪಕವಾಗಿಟ್ಟುಕೊಂಡು ನಿರೂಪಿಸುವ ಬಗೆ ವಿಸ್ಮಯವನ್ನು ಹುಟ್ಟಿಸುತ್ತದೆ. ಮಹಾಕಾವ್ಯದ ಸನ್ನಿವೇಶಗಳು ಉಳಿದ ಪದ್ಯಗಳಲ್ಲಿ ಉಪಯೋಗವಾದ ರೀತಿಗೂ, ಇಲ್ಲಿ ಅದು ಉಪಯೋಗವಾಗುತ್ತಿರುವ ರೀತಿಗೂ ವ್ಯತ್ಯಾಸವಿದೆ. ಈ ಕವಿಗೆ ಪ್ರಾಯಶಃ ಮಹಾಕಾವ್ಯಗಳ ಸನ್ನಿವೇಶ ಮತ್ತು ಪಾತ್ರಗಳು ದೈನಂದಿನ ಜೀವದಲ್ಲಿ ದಕ್ಕುವ ರೂಪಕಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿ ಕಾಣುತ್ತವೆ. ಜನಮಾನಸದಲ್ಲಿ ನೆಲೆ ನಿಂತ ರಾಮಾಯಣ, ಮಹಾಭಾರತಗಳ ಸನ್ನಿವೇಶಗಳು ದಿನನಿತ್ಯದ ಸನ್ನಿವೇಶಗಳಿಗಿಂತ ಹೆಚ್ಚಿನದನ್ನು ಸ್ಫುರಿಸುತ್ತವೆಂಬ ಭಾವನೆ ಅವರದಾಗಿದೆ. ಕಲ್ಲು ಮೋಹನೆಯ ನೀರು ಎಂಬ ಪದ್ಯದಲ್ಲಿಯೂ ಇಂಥದೇ ಪ್ರಯತ್ನವಿದೆ.

ಹಕ್ಕಿ ಹಿಡಿಯುವ ಕಾಯಕ ದಲ್ಲಿ ಕವಿಯು ಧ್ಯಾನಸ್ಥ ಸ್ಥಿತಿಯಲ್ಲಿದ್ದಾಗಲೂ ಕೆಲವೊಮ್ಮೆ ಉತ್ತಮ ಕವಿತೆಗಳು ದಕ್ಕುವುದಿಲ್ಲವೆಂದು ಹೇಳುತ್ತಾರೆ. ವೆಂಕಟೇಶಮೂರ್ತಿಯವರ ವಿಷಯದಲ್ಲಿ ಈ ಮಾತನ್ನು ಒಪ್ಪುವುದು ಕಷ್ಟ! ಹರಿಯುವ ನೀರು ಶಿವನ ಜಡೆಯಂತೆ- ಕಾಣುವ ಈ ಕವಿಗೆ ಯಾವ ಸನ್ನಿವೇಶವನ್ನಾದರೂ ಒಳ್ಳೆಯ ಪದ್ಯವನ್ನಾಗಿ ಮಾರ್ಪಡಿಸುವ ಶಕ್ತಿ ಇದೆ. ಜೀವದನ ಸಂಕೀರ್ಣತೆಯ ಎಲ್ಲ ಹೊಳಹುಗಳನ್ನು ಸೆರೆ ಹಿಡಿಯುವಲ್ಲಿ ರಾಮಾಯಣ ಮತ್ತು ಮಹಾಭಾರತದ ಸನ್ನಿವೇಶಗಳೇ ಬಂದು ಮಿತಿಯನ್ನು ತಂದೊಡ್ಡ

ಬಹುದು. ಅತ್ಯಂತ ವಿಶಾಲ ಹರಹಿನಲ್ಲಿ ಚಿತ್ರಿಸಿದ ಪಾತ್ರಗಳು ಮತ್ತು ಸನ್ನಿವೇಶಗಳು ಆಧುನಿಕ ಸಂವೇದನೆಗೆ ರೂಪಕಗಳಾಗತೊಡಗಿದೊಡನೆಸಂವೇದನೆಗೆಕಡಿವಾಣಹಾಕಿದಂತಾಗಬಹುದು.ಸಂವೇದನೆಗೆರೂಪಕಗಳನ್ನು ಹುಡುಕುವುದೋ ಅಥವ ಸನ್ನಿವೇಶಗಳನ್ನು ಕಂಡೊಡನೆ ಸಂವೇದನೆಯನ್ನು ನಿರ್ಮಿಸಿಕೊಳ್ಳುವುದೋ ಎಂಬ ಜಟಿಲ ಪ್ರಶ್ನೆಯನ್ನು ಇಲ್ಲಿಯ ಕವನಗಳು ಎದುರಿಸುತ್ತವೆ.

ಕಂಬಾರ ಮತ್ತು ರಾಘವೇಂದ್ರ ಪಾಟೀಲರನ್ನು ಕುರಿತಾಗಿ ಬರೆದ ಕವನಗಳು ಒಳ್ಳೆಯ ವ್ಯಕ್ತಿಚಿತ್ರಗಳನ್ನು ಕಟ್ಟಿಕೊಡುತ್ತವೆ. ವೆಂಕಟೇಶಮೂರ್ತಿಯವರೆ ಹೇಳುವಂತೆ ಹಿಮಾಲಯದಲ್ಲಿ ಹಾದಿಗಳಿಲ್ಲ ನಿಜ. ಕವಿಯಾದವನು ತನ್ನ ದಾರಿಯನ್ನು ತಾನೇ ಹುಡುಕಿಕೊಳ್ಳಬೇಕು. ಹಿಮಾಲಯದ ಎತ್ತರವನ್ನು ಮನಸ್ಸಿನಲ್ಲಿಟ್ಟುಕೊಂಡೇ ಅವರು ನಾನೇರುವೆತ್ತರಕೆ ನೀನೇರಬಲ್ಲೆಯಾ ಎಂಬ ಪ್ರಶ್ನೆಯ ಅರ್ಥಹೀನತೆಯನ್ನು ಕೂಡ ಒಂದು ಪದ್ಯದಲ್ಲಿ ಚೋದಿಸಿದ್ದಾರೆ.

ಕಾವ್ಯದಲ್ಲಿ ಭಾಷೆಯ ಪ್ರಯೋಗ, ತನ್ನ ಕಾವ್ಯ ಹಿಡಿಯಬೇಕಾದ ಹೊಸದಾರಿಯ ಚಿಂತನೆ, ಸನ್ನಿವೇಶಗಳಿಂದ ಆವಿರ್ಭವಿಸುವ ಭಾವಗಳಿಗೆ ಅಭಿವ್ಯಕ್ತಿ ನೀಡುವ ತವಕ ಮತ್ತು ಇತರ ಮಹತ್ವಾಕಾಂಕ್ಷೆಯನ್ನು ಹೊಂದಿದ ಹಲವಾರು ಕವನಗಳನ್ನು ಹೊಂದಿರುವ ಕನ್ನಡಿಯ ಸೂರ್ಯ ಕವನ ಸಂಕಲನ ನಮ್ಮ ಕಾಲದ ಶ್ರೇಷ್ಠ ಕವನ ಸಂಕಲನಗಳಲ್ಲಿ ಒಂದೆಂದು ನನಗನ್ನಿಸಿದೆ.

■

EWS- 155, ೯ನೇ ಮುಖ್ಯರಸ್ತೆ, ಹೆಬ್ಬಾಳ್,
ಮೇಟಗಳ್ಳಿ ಅಂಚೆ, ಮೈಸೂರು-೫೬೦ ೦೧೭
ಸ್ಥಿರ ದೂರವಾಣಿ: ೦೮೨೧-೨೩೦೧೨೯೮
ಮೊಬೈಲ್ : ೯೨೪೩೫ ೦೨೮೬೨



ಜೀನ್ ಪಾಲ್ ಸಾರ್ತ್ರ್

ಕನ್ನಡಕ್ಕೆ : ಕೇಶವಮಳಗಿ

ಬರೆಯುವುದು ಯಾರಿಗಾಗಿ?

ಯಾವುದೇ ಅನುಮಾನವೂ ಬೇಡ: ಮೊದಲ ನೋಟಕ್ಕೆ ಕಾಣುವಂತೆ ಬರಹಗಾರನಾದವನು ಬರೆಯುವುದು ವಿಶ್ವ ಓದುಗನಿಗಾಗಿ. ಅದೂ ಒಂದು ವ್ರತದಂತೆ, ವಿಕೋಚಿಯುಂತಿರುವ ಆತನ ಬಳತುಚಿತ ಹೇಳುವುದು ಕೂಡ ಇದನ್ನೇ, ಆದರೆ ಇದೊಂದು ಆದರ್ಶಮಯ ಹೇಳಿಕೆ. ವಾಸ್ತವದಲ್ಲಿ, ಕಳೆದುಕೊಂಡಿರುವ ಸ್ವಾತಂತ್ರ್ಯದ ಕುರಿತು ತಾನು ಮಾತನಾಡುತ್ತಿದ್ದೇನೆಂದು ಬರಹಗಾರನಿಗೆ ತಿಳಿದಿದೆ. ತನ್ನ ಸ್ವಾತಂತ್ರ್ಯ ಕೂಡ ಅಷ್ಟೇನೂ ಶುದ್ಧವಾಗಿಲ್ಲದಿರುವುದರಿಂದ ಶುಚಿಗೊಳಿಸುವ ಅಗತ್ಯವಿದೆ ಎಂಬ ಅರಿವೂ ಆತನಿಗಿದೆ. ನಿರ್ಜೀವ ಶಾಶ್ವತ ಮೌಲ್ಯಗಳ ಕುರಿತು ಮಾತನಾಡುವುದು ಅಪಾಯಕಾರಿ ಸರಳ ದಾರಿ. ಶಾಶ್ವತ ಸತ್ಯದ ಪರಿಕಲ್ಪನೆಯೇ ಕೊನೆಯಿರದ ಸಮುದ್ರದಂತೆ. ಸ್ವಾತಂತ್ರ್ಯವನ್ನು ಯಾರೂ ನೀಡುವುದಿಲ್ಲ. ಬೇರು ಸಹಿತ ಕಿತ್ತು, ತನ್ನನ್ನೇ ಮುಕ್ತನನ್ನಾಗಿಸಿಕೊಳ್ಳುವುದೊಂದು ನಿರಂತರ ಕೆಲಸವಾಗಿದೆ. ಹಾಗೆಂದೇ, ಪ್ರತಿಯೊಬ್ಬರೂ ರಾಗದ್ವೇಷಗಳು, ಜನಾಂಗ, ವರ್ಗ, ರಾಷ್ಟ್ರ ಹೀಗೆ ಎಲ್ಲವನ್ನೂ ಅಂತರಂಗದಲ್ಲಿ ಜಯಿಸಬೇಕಿದೆ. ಆತ ತನ್ನೊಂದಿಗೆ ಇತರರನ್ನೂ ಗೆಲ್ಲಬೇಕು. ಇಲ್ಲಿ ಮುಖ್ಯವಾದ ಸಂಗತಿಯೆಂದರೆ, ನಿರ್ದಿಷ್ಟ ಸ್ವರೂಪದ ಅಡೆತಡೆಗಳನ್ನು ದಾಟಬೇಕಿದೆ; ಪ್ರತಿರೋಧವನ್ನು ನಿವಾರಿಸಬೇಕಿದೆ. ಇದೇ ಪ್ರತಿ ಸಂದರ್ಭದಲ್ಲೂ ಸ್ವಾತಂತ್ರ್ಯಕ್ಕೆ ಸ್ವರೂಪವೊಂದನ್ನು ಒದಗಿಸುತ್ತದೆ.

ಮನಸ್ಸಿನಿಂದ ಮೂಡಿದ ಕೃತಿಯೊಂದು ಸ್ವಭಾವದ ಧ್ವನಿ-ಅರ್ಥಗಳನ್ನು ಹೊಮ್ಮಿಸುತ್ತದೆ, ಎನ್ನುವ ಕುರಿತು ಸಾಕಷ್ಟು ಚಿಂತನೆ ನಡೆದಿಲ್ಲವೆಂದೇ ಅನ್ನಿಸುತ್ತದೆ. ವಿಷಯವೊಂದನ್ನು ಅದರ ಪರಿಪೂರ್ಣ ನೆಲೆಯಲ್ಲಿ ನೀಡಬೇಕೆಂಬ ಆಶಯವನ್ನು ಲೇಖಕ ಹೊಂದಿದ್ದರೂ ಎಲ್ಲವನ್ನೂ ಹೇಳಲು

ಸಂಕಥನ
(ಫ್ರೆಂಚ್ ವಿಚಾರಧಾರೆ, ಸಮಾಜ, ಸಂಸ್ಕೃತಿ, ಸಾಹಿತ್ಯ ಕುರಿತ ವಾಚಿಕೆ)
ಕೇಶವಮಳಗಿ

ಪ್ರಕಾಶನ:
ಕಥನ ಪ್ರಕಾಶನ
ಬೆಂಗಳೂರು -೨೨

ಮೊದಲ ಮುದ್ರಣ:
೨೦೧೧

ಪುಟಗಳು: ೨೦೬

ಬೆಲೆ: **ರೂ. ೧೨೦/-**

ಸಾಧ್ಯವಿಲ್ಲ. ಆತ ಹೇಳುತ್ತಿರುವುದಕ್ಕಿಂತ ಹೆಚ್ಚಿನದನ್ನು ಆತ ಬಲ್ಲ. ಇದಕ್ಕೆ ಕಾರಣವೆಂದರೆ ಭಾಷೆಯ ಸ್ವರೂಪ ಸಂದಿಗ್ಧವಾಗಿರುವುದೇ ಆಗಿದೆ. ನೆರೆಮನೆಯವನಿಗೆ ನಮ್ಮ ಮನೆ ಕಿಟಕಿ ಬಳಿಯ ಜೇನ್ನೊಣವನ್ನು ವಿವರಿಸಲು ಹೆಚ್ಚಿನ ಮಾತುಗಳೇನೂ ಬೇಕಿಲ್ಲ. ಹೇ! ನೋಡಿ, ಅಲ್ಲಿ, ಎಂಬ ಸಂಜ್ಞೆ ಸಾಕು. ಅವರು ಅತ್ತ ನೋಡಿದ್ದೇ ಎಲ್ಲವೂ ಸ್ಪಷ್ಟವಾಗುತ್ತದೆ. ಓದುವ ಪ್ರಕ್ರಿಯೆಯನ್ನು ನೋಡೋಣ. ಒಂದೇ ಕಾಲದಲ್ಲಿ ಬದುಕಿ, ಒಂದೇ ಬಗೆಯ ಅನುಭವವನ್ನು ಹೊಂದಿರುವ, ಒಂದೇ ಬಗೆಯ ಪತ್ರಗಳನ್ನು ಕೇಳಿದ, ಪಕ್ಕಕ್ಕೆ ಸರಿಸಿದ ವ್ಯಕ್ತಿಗಳು, ಸಮುದಾಯಗಳು ಏಕರೀತಿಯ ಬಾಯಿ ಚಪಲ, ಪಾಪಪ್ರಜ್ಞೆ ಇತ್ಯಾದಿಗಳನ್ನು ಹೊಂದಿರುತ್ತಾರೆ. ಆದ್ದರಿಂದಲೇ ಅನುಭವಗಳನ್ನು ಹೇಳಲು ಅತಿಯಾದ ಭಾಷೆಯ ಬಳಕೆಯ ಅಗತ್ಯವಿರುವುದಿಲ್ಲ. ಕೆಲವು ಸಾಂಕೇತಿಕ ಪದಗಳಷ್ಟೇ ಸಾಕು. ಆತನಿಗೆ ಈಗಾಗಲೇ ತಿಳಿದಿರುವ ಪ್ರಯೋಜನವನ್ನು ಪಡೆದು, ಅವನಿಗರಿವಿಲ್ಲದಿರುವ ಸಂಗತಿಗಳ ಕುರಿತು ಬರೆದರೆ ಲೇಖಕನ ಉದ್ದೇಶ ಈಡೇರಿದಂತೆಯೇ. ಕ್ಷಣದಿಂದ ಕ್ಷಣಕ್ಕೆ ಬದಲಾಗುವ, ಸಂಪೂರ್ಣತೆಯ ನಡುವಿನ ಅಂದವು ಆತನಿಗೆ ಅಗತ್ಯವಾದ ಐತಿಹಾಸಿಕ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ವಾಸ್ತವದಲ್ಲಿ ಆತನೇನೂ, ಕಾಲಾತೀತವಾದ ಶುದ್ಧ ಸ್ವಾತಂತ್ರ್ಯವನ್ನು ತಂದೀಯಬಲ್ಲ ತಕ್ಷಣ ಪ್ರಜ್ಞೆಯನ್ನು ಹೊಂದಿದವನೇನಲ್ಲ. ಅಥವಾ ಇತಿಹಾಸದ ಕುರಿತು ಕಿವಿ ತುಂಬಿಕೊಂಡವನೂ ಅಲ್ಲ; ಬದಲಿಗೆ ಇತಿಹಾಸದಲ್ಲಿ ತೊಡಗಿಕೊಂಡವನು.

ಅಂತೆಯೇ, ಬರಹಗಾರ ಕೂಡ ಐತಿಹಾಸಿಕನೇ. ಈ ಕಾರಣದಿಂದಾಗಿಯೇ ಕೆಲವು ಲೇಖಕರು ಇತಿಹಾಸದಿಂದ ತಪ್ಪಿಸಿಕೊಂಡು ಚಿರಂತನತೆಯ ಕಡೆ ಜಿಮ್ಮಲು ನೋಡುತ್ತಾರೆ. ಇತಿಹಾಸದ ಭಾಗವಾಗಿ, ಅದರ ಸೃಷ್ಟಿಗೆ ಕಾರಣಕರ್ತರಾಗುವವರು ಮತ್ತು ಲೇಖಕರ ನಡುವೆ ಪುಸ್ತಕಗಳು ಕೊಂಡಿಯಂತಿವೆ. ಬರೆಯುವುದು ಮತ್ತು ಓದುವುದು ಈ ಇತಿಹಾಸದ ಎರಡು ಮುಖಗಳಾಗಿವೆ. ಮಾತ್ರವಲ್ಲ, ಬರಹಗಾರ ನಮ್ಮನ್ನು ಆಹ್ವಾನಿಸುವ ಸ್ವಾತಂತ್ರ್ಯ ಲೋಕವು ಮುಕ್ತಗೊಂಡ ಶುದ್ಧ ಭಾವುಕ ಸ್ವಾತಂತ್ರ್ಯವೇನೂ ಆಗಿರುವುದಿಲ್ಲ. ಖಚಿತವಾಗಿ ಹೇಳಬೇಕೆಂದರೆ, ಅದು ಐತಿಹಾಸಿಕ ಸನ್ನಿವೇಶವೊಂದನ್ನು ಬಯಸುತ್ತದೆ. ಪ್ರತಿ ಪುಸ್ತಕವೂ ಸಾಂಸ್ಕೃತಿಕ, ಸಾಂಪ್ರದಾಯಿಕ, ಶೋಷಣೆಯ ಸ್ವರೂಪಗಳು, ಬಿಕ್ಕಟ್ಟು, ದರ್ಶನಕ್ಕೆ ಸಂಬಂಧಿಸಿದಂತೆ ಸಮಕಾಲೀನ ಮೂರ್ಖತೆಗಳು, ಬದಲಾಗದ ಭಾವನೆಗಳು, ಜಿಗುಟುತನ, ಅಂಧಶ್ರದ್ಧೆ, ಸಾಮಾನ್ಯ ಜ್ಞಾನ ಸಾಧಿಸಿದ ಇತ್ತೀಚಿನ ಯಶಸ್ಸು, ಮೂರ್ಖತನ, ಸಾಕ್ಷಿಪ್ರಜ್ಞೆ, ಎಲ್ಲ ರಂಗಗಳಿಗೂ ಅನ್ವಯಿಸಬಲ್ಲ, ವಿಜ್ಞಾನ ಶೋಧ ಮಾಡಿರುವ, ನಿರ್ದಿಷ್ಟ ರೀತಿಯ ವಿಚಾರ ಲಹರಿ, ಧಾರಣೆ, ಭಯ, ಸೂಕ್ಷ್ಮ ಅಭ್ಯಾಸ, ಕಲ್ಪನೆ, ಪಾರಂಪರಿಕವಾಗಿ ಬಂದ ಆಚರಣೆ, ಅಂತಿಮವಾಗಿ ಲೇಖಕ-ಓದುಗರಿಬ್ಬರಿಗೂ ಪರಿಚಿತವಾದ ಲೋಕದ ಸಂಕೀರ್ಣ ವಿಷಯಗಳನ್ನು ಒಳಗೊಂಡಿರುತ್ತದೆ. ಲೇಖಕನಾದವನು ತನ್ನ ಸ್ವಾತಂತ್ರ್ಯದ ಮೂಲಕ ಈ ಪರಿಚಿತ ಲೋಕವನ್ನು ಒಳಹೊಕ್ಕು ಅನಾವರಣಗೊಳಿಸುತ್ತಾನೆ.

ಓದುಗನಾದವನು ಈ ಲೋಕವನ್ನೇ ಸೃಷ್ಟಿಯೇ, ಅದರ ಪರಾಧೀನತೆ, ಸನ್ನಿವೇಶ ಮತ್ತು ಇತಿಹಾಸಗಳಿಗೆ ನಿಶ್ಚಿತ ಸ್ವಾತಂತ್ರ್ಯವನ್ನು ತರಬೇಕಾಗುತ್ತದೆ. ನಾನು ಬದಲಿಸಬೇಕಿರುವುದು ಅಥವಾ ನನಗಾಗಿ ಮತ್ತು ಉಳಿದವರಿಗಾಗಿ ಕಾಪಾಡಬೇಕಾದುದು ಈ ಲೋಕವೇ ಆಗಿದೆ. ಲೇಖಕ ಹಾಗೂ ಓದುಗ-ಈ ಇಬ್ಬರ ಸ್ವಾತಂತ್ರ್ಯವೂ ಲೋಕದ ಮೂಲಕ ಕೊಡುಕೊಳೆ ಮಾಡುತ್ತ ಇಬ್ಬರ ಮೇಲೂ ಪರಿಣಾಮ ಬೀರುತ್ತದೆ. ಲೇಖಕ ಆಯ್ದುಕೊಳ್ಳುವ ವಿಷಯ ಓದುಗನ ಮೇಲೆ ಪ್ರಭಾವ ಬೀರುತ್ತದೆ. ಅಂತೆಯೇ, ಲೇಖಕ ಮೊದಲು ತನ್ನ ಓದುಗನನ್ನು ಆಯುತ್ತಾನೆ. ಬಳಿಕ ವಿಷಯವನ್ನು. ಅಂದರೆ, ಪ್ರತಿ ಕ್ರಿಯಾಶೀಲ ಕೃತಿಗಳು ತಾವು ಅಪೇಕ್ಷಿಸುವ ಓದುಗರನ್ನು ತಮ್ಮೊಳಗೇ ಅಡಕವಾಗಿಸಿಕೊಂಡಿವೆ.

ಲೇಖಕನೊಬ್ಬ ತನ್ನನ್ನು ತಾನು ಸಂಪೂರ್ಣ ಅರಿವನ್ನು ಸಾಧಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾನೆಂದರೆ ಬದ್ಧತೆಯನ್ನು ಸಾಧಿಸಿದ್ದಾನೆಂದೇ ಅರ್ಥ. ಅಂದರೆ, ತನ್ನ ತಕ್ಷಣದ ಬದ್ಧತೆಯನ್ನು, ತನ್ನನ್ನು

ಮೀರಿ ಇತರರಿಗೆ ವಿಮರ್ಶಾತ್ಮಕವಾಗಿರುವುದಕ್ಕೆ ವಿಸ್ತರಿಸುವುದು. ಲೇಖಕ ಅತ್ಯುತ್ತಮ ಮಧ್ಯವರ್ತಿಯಾಗಿದ್ದು, ಅದನ್ನು ಪೂರೈಸುವುದೇ ಆತನ ಕ್ರಿಯೆಯಾಗಿದೆ. ಬರಹಗಾರನ ಸನ್ನಿವೇಶವನ್ನು ಆಧರಿಸಿ ಕೃತಿಯನ್ನು ಸ್ವೀಕರಿಸಬೇಕು. ಏಂದಾದರೆ, ಆತನ ಸ್ಥಿತಿ ಕೇವಲ ಸಾಮಾನ್ಯ ವ್ಯಕ್ತಿಯದ್ದಾಗಿರದೇ ಲೇಖಕನ ಸ್ಥಿತಿಯಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು. ಲೇಖಕನ ವಿಚಾರದಲ್ಲಿ ಆಯ್ಕೆ ಅತ್ಯಂತ ಸಂಕೀರ್ಣವಾಗಿದ್ದು, ತಾನೊಬ್ಬ ಲೇಖಕನಾಗಬೇಕು ಎಂಬ ಆಯ್ಕೆಯನ್ನು ಯಾರೂ ಮಾಡಿಕೊಳ್ಳಲಾರರು. ಏಕೆಂದರೆ ಸ್ವಾತಂತ್ರ್ಯ ಬೇರಿನಲ್ಲಿಯೇ ಅಡಕವಾಗಿದೆ. ನಾನೊಬ್ಬ ಲೇಖಕನಾಗಿರುವುದು ನನ್ನ ಮುಕ್ತ ವಿಚಾರಗಳನ್ನು ಬರೆಯಲು, ಮಿಕ್ಕವರು ನನ್ನನ್ನು ಬರಹಗಾರರ ಎಂದು ಗುರುತಿಸಲು ಆರಂಭಿಸಿ, ನಿರೀಕ್ಷೆಗಳನ್ನು ವ್ಯಕ್ತಪಡಿಸತೊಡಗಿದಂತೆ ಬೇಕಿರಲಿ, ಇಲ್ಲದಿರಲಿ ನಾನು ಎನ್ನುವುದು ಸಾಮಾಜಿಕ ಕ್ರಿಯೆಯಾಗಿಬಿಡುತ್ತದೆ. ಆತ ಯಾವ ಆಟವನ್ನೇ ಆಡಲಿ ಉಳಿದವರು ತನ್ನ ಕುರಿತು ಇಟ್ಟುಕೊಂಡಿರುವ ನಿರೀಕ್ಷೆಗಳನ್ನು ಗಮನಿಸಿ ಆಡಬೇಕು. ತಮ್ಮ ಆಚರಣೆ, ಬದುಕಿನ ಕುರಿತು ಧೋರಣೆ, ಸಮಾಜದ ಕುರಿತು ತಮ್ಮ ದೃಷ್ಟಿಕೋನ ಮತ್ತು ಸಮಾಜದ ಭಾಗವಾಗಿರುವ ಸಾಹಿತ್ಯದ ಬಗೆಗಿನ ಅಭಿಪ್ರಾಯಗಳನ್ನು ಜತೆಯಾಗಿ ಇಟ್ಟುಕೊಂಡು ಜನ ಮಧ್ಯ ಪ್ರವೇಶಿಸುತ್ತಾರೆ. ಇವೆಲ್ಲ ಲೇಖಕನನ್ನು ಸುತ್ತುವರೆದು ಜಗ್ಗುತ್ತವೆ. ಘನತೆ, ಜಾಣಾಕ್ಷತನ, ನಿರಾಕರಣೆ, ಮನ್ನಣೆ ಇತ್ಯಾದಿಗಳು ಅವು ನೀಡುವ ವಸ್ತುಗಳಾಗಿದ್ದು, ಅವುಗಳ ಆಧಾರದ ಮೇಲೆ ಕೃತಿಯನ್ನು ರಚಿಸಬೇಕಿರುತ್ತದೆ.

ಪ್ರಸಿದ್ಧ ಕಪ್ಪು ಲೇಖಕ ರಿಚರ್ಡ್ ರೈಟ್ ಅವರನ್ನು ದೃಷ್ಟಾಂತವಾಗಿ ತೆಗೆದುಕೊಳ್ಳೋಣ. ಅವರನ್ನು, ಗುಲಾಮಗಿರಿ ಆಚರಣೆಯಲ್ಲಿದ್ದ ಅಮೆರಿಕದ ದಕ್ಷಿಣ ಭಾಗದಿಂದ, ಉತ್ತರ ಭಾಗಕ್ಕೆ ಬಂದ ಕಪ್ಪು ಮನುಷ್ಯ ಎಂಬಂತೆ ಮಾತ್ರ ನೋಡಿದರೆ, ಅವರು ಕಪ್ಪು ಜನರ ಬಗ್ಗೆ ಮಾತ್ರ, ಅಥವಾ ಅವರು ಗುಣಿಸಿದ ಬಿಳಿಯ ಜನಾಂಗದ ಬಗ್ಗೆ ಮಾತ್ರ ಬರೆಯಬಲ್ಲರು ಎಂಬ ನಿಲುವಿಗೆ ಬರಬೇಕಾಗುತ್ತದೆ. ಅಮೆರಿಕದ ದಕ್ಷಿಣ ಭಾಗದ ಕಪ್ಪು ಜನಾಂಗದ ಶೇಕಡ ತೊಂಭತ್ತರಷ್ಟು ಜನ ಮತದಾನದ ಹಕ್ಕು ಕೂಡ ಹೊಂದಿಲ್ಲವೆಂಬುದು ಕಟುಸತ್ಯವಾಗಿರುವಾಗ, ರಿಚರ್ಡ್ ಅವರನ್ನು ಅಮರತೇ ಜೀವನ ದೇವತಾಧ್ಯಾನ, ಒಳಿತು-ಕೆಡುಕುಗಳ ಬಗ್ಗೆ ಯೋಚಿಸುತ್ತ ಕಳೆಯಿರಿ ಎಂದು ಹೇಳಿದರೆ ಅವರು ಒಪ್ಪಬಹುದೇ ಎಂದು ಯೋಚಿಸಿ. ಇಲ್ಲಿ ಯಾರಾದರೂ ದ್ರೋಹಿ ಕಾರಕೂನರ ಕುರಿತು ಮಾತೆತ್ತಿದರೆ, ನಾನು ಹೇಳುತ್ತೇನೆ- ಹೋಲಿಕೆಯಲ್ಲಿ ಯಾರೂ ಕಾರಕೂನರಲ್ಲ. ಕಾರಕೂನರ ಅಗತ್ಯವಿರುವುದು ಶೋಷಕ ವರ್ಗ ಮತ್ತು ಜನಾಂಗಗಳಿಗೆ ಮಾತ್ರ ಅದ್ದರಿಂದಲೇ, ಆಫ್ರಿಕನ್ -ಅಮೆರಿಕನ್ ಒಬ್ಬ ನಾನು ಬರಹಗಾರನಾಗಬೇಕು ಎಂದು ನಿರ್ಧರಿಸಿದಾಕ್ಷಣವೇ ತನ್ನ ವಿಷಯವನ್ನೂ ಆಯ್ಕೆ ಮಾಡಿಕೊಂಡಿರುತ್ತಾನೆ.

ಈ ಕಪ್ಪು ಲೇಖಕ ಹೊರಗಿನಿಂದ ಬಿಳಿವರ್ಣೀಯರನ್ನು; ಅವರ ಸಂಸ್ಕೃತಿಯನ್ನೂ ಅರಿಯುತ್ತಾನೆ. ಮತ್ತು ಆತ ಬರೆಯುವ ಪ್ರತಿ ಪುಸ್ತಕವೂ ಅಮೆರಿಕನ್ ಸಮಾಜವು ಕಪ್ಪು ಜನಾಂಗವನ್ನು ಹೇಗೆ ಹೊರಗಿಟ್ಟಿದೆ ಎಂಬುದನ್ನು ತಿಳಿಸುತ್ತದೆ. ವಾಸ್ತವವಾದಿಗಳಂತೆ ವಸ್ತುನಿಷ್ಠವಾಗಿಲ್ಲ. ಬದಲಿಗೆ, ಭಾವುಕವಾಗಿ, ಓದುಗರು ಅದರೊಂದಿಗೆ ತಲ್ಲೀನರಾಗುವಂತೆ. ಆದರೆ, ಈ ಬಗೆಯ ವಿಶ್ಲೇಷಣೆ -ಆತನೊಬ್ಬ ಕರಾವತ ಲೇಖಕನೇ ಆಗಿರಲಿ, ಗೀತರಚನಾಕಾರನೇ ಆಗಿರಲಿ ಅಥವಾ ದಕ್ಷಿಣದ ಕಪ್ಪು ಜನಾಂಗದ ಪ್ರವಾದಿಯೇ ಆಗಿರಲಿ, ಆತನ ಕೃತಿಯನ್ನು ಕುಗ್ಗಿಸುತ್ತದೆ.

ಇನ್ನೂ ಮುಂದುವರೆದು ಹೇಳಬೇಕೆಂದರೆ ಆ ಲೇಖಕನನ್ನು ನಾವು ಸಾರ್ವಜನಿಕವಾಗಿ ಗಮನಿಸಬೇಕು. ರಿಚರ್ಡ್ ರೈಟ್ ಯಾರನ್ನು ಗಮನದಲ್ಲಿಟ್ಟುಕೊಂಡು ಬರೆಯುತ್ತಿದ್ದಾರೆ? ವಿಶ್ವ ಓದುಗನನ್ನು ಉದ್ದೇಶಿಸಿ ಖಂಡಿತ ಅಲ್ಲ. ವಿಶ್ವ ಓದುಗ ವಿಶ್ವ ಮೌಲ್ಯಗಳ ಕುರಿತು ಯೋಚಿಸಬಲ್ಲ. ಆದರೆ, ರಿಚರ್ಡ್ ಅವರ ಕೃತಿಗಳನ್ನು ತಮ್ಮನ್ನು ತಾವು ಸಂಪೂರ್ಣ ಮುಚ್ಚಿಕೊಂಡ ವರ್ಜೀನಿಯಾ ಅಥವಾ ದಕ್ಷಿಣ ಕ್ಯಾಲಿಫೋರ್ನಿಯಾದ ಬಿಳಿಯರಿಗೆ ಬರೆಯಲು ಸಾಧ್ಯವೇ? ಓದು-ಬರಹ ತಿಳಿದಿಲ್ಲದ ಕಪ್ಪು ವರ್ಣೀಯರಿಗಾಗಿ ಬರೆಯಲು ಸಾಧ್ಯವೇ?

ಯೂರೋಪಿನಲ್ಲಿ ಅವರ ಪುಸ್ತಕಕ್ಕೆ ದೊರೆತ ಮಾನ್ಯತೆಯಿಂದ ಅದನ್ನು ಬರೆದದ್ದು ಅವರಿಗಾಗಿಯೇ ಎಂದು ರಿಚರ್ಡ್ ತಿಳಿದರೆ, ಆ ಜನರ ಅಪೇಕ್ಷೆ ಏನೂ ಎಂದೇ ಅವರಿಗೆ ತಿಳಿದಿಲ್ಲ. ಅನ್ನಬೇಕಾಗುತ್ತದೆ. ಈ ವಿಚಾರಗಳು ಅವರ ಓದುಗರು ಯಾರೂ ಎಂಬುದನ್ನು ತಿಳಿಸುತ್ತವೆ. ರಿಚರ್ಡ್ ತಮ್ಮನ್ನು ತಾವೇ ಉದ್ದೇಶಿಸಿಕೊಳ್ಳುತ್ತಿದ್ದಾರೆ. ಜತೆಗೆ, ಉತ್ತರದಲ್ಲಿರುವ ಕೆಲ ಕಪ್ಪು ಬುದ್ಧಿಜೀವಿಗಳು, ಕಪ್ಪು ಜನಾಂಗದ ಕುರಿತು ಸಹಾನುಭೂತಿಯಿರುವ ಬಿಳಿವರ್ಣದವರು ಅವರ ಪ್ರಾಥಮಿಕ ಓದುಗರಾಗಿದ್ದಾರೆ.

ಅವರ ಮೂಲಕ ಉಳಿದ ಓದುಗರನ್ನು ಅವರು ಅಪೇಕ್ಷಿಸುತ್ತಿಲ್ಲವೆ? ಎಂದರೆ, ಹೌದು, ಆದರೆ, ಅವರ ಮೂಲಕ ಎಂಬುದು ಸಮಾಧಾನವಾಗಿದೆ. ಆದರೆ, ನಿಜವಾದ ಸಾರ್ವಜನಿಕರು ಎಂಬ ಕಲ್ಪನೆಗೆ ಅಲ್ಲಿ ಕೊಂಚ ಪೆಟ್ಟಾಗಿದೆ. ರೈಟ್ ಅವರ ಕೃತಿಯಲ್ಲಿ ಕಪ್ಪು ಜನ ವಸ್ತುಗಳಾಗಿದ್ದಾರೆ. ಅದೇ ಬಾಳ್ವೆ, ಅದೇ ಸಂಕಷ್ಟಗಳು, ಅವೇ ಸಂಕೀರ್ಣತೆಗಳು: ಕೃತಿಯೊಂದಿಗೆ ಗುರುತಿಸಿಕೊಳ್ಳಲು ಕೆಲವು ಸಂಕೇತಗಳಷ್ಟೇ ಸಾಕು. ಕೃತಿ ಹೃದಯಕ್ಕಿಳಿದು ಬಿಡುತ್ತದೆ. ತಮ್ಮ ವೈಯಕ್ತಿಕ ಸ್ಥಿತಿಯನ್ನು ಅರಿತುಕೊಳ್ಳುತ್ತಲೇ ಅವರು ಕಪ್ಪು ಜನರ ಸ್ಥಿತಿಯನ್ನು ಅವರಿಗೆ ತಿಳಿಸುತ್ತಿದ್ದಾರೆ. ಅವರು ದಿನನಿತ್ಯ ನೂಕುತ್ತಿರುವ ತಕ್ಷಣದ ಬದುಕಿನ ಬವಣೆಗಳಿಗೆ ರಿಚರ್ಡ್ ಹೆಸರು ನೀಡಿ, ಮುಚ್ಚಿಟ್ಟ ವಿಷಯ ಎಲ್ಲವನ್ನೂ ತೆರೆದಿಡುತ್ತಿದ್ದಾರೆ. ಜನರ ಯಾತನೆಗಳಿಗೆ ಶಬ್ದಗಳಿಲ್ಲ. ರಿಚರ್ಡ್ ಕಪ್ಪು ಜನರ ವಕ್ತಾರರಾಗಿದ್ದಾರೆ. ತಮ್ಮನ್ನು ತಮ್ಮ ತಕ್ಷಣದ ಸ್ಥಿತಿಯಿಂದ ವಿಮರ್ಶಾತ್ಮಕ ಸ್ಥಿತಿಯೆಡೆ ಪಲ್ಲಟಿಸುತ್ತಾರೋ ಆಗ ಅದು ಇಡೀ ಜನಾಂಗದ ಧ್ವನಿಯಾಗುತ್ತದೆ. ಬಿಳಿವರ್ಣೀಯ ಓದುಗರು ತೋರಿಸುವ ಅನುಕಂಪ, ಇತರ ಓದುಗ ತೋರುವ ಭಾವನೆ. ಏಕೆಂದರೆ, ಬಿಳಿವರ್ಣೀಯ ರಿಚರ್ಡ್‌ರ ಜೀವನವನ್ನು ಬದುಕಿಲ್ಲ, ಅವರು ತಮ್ಮ ಕಲ್ಪನೆಯ ಮೂಲಕ ಕಪ್ಪು ಜನರ ಬದುಕನ್ನು ಗ್ರಹಿಸಿಕೊಳ್ಳಬಲ್ಲರಷ್ಟೇ. ರಿಚರ್ಡ್ ಅವರ ಕೃತಿಗಳನ್ನು ಜೋಯಿಲೆರ್ ಬಹುಶಃ ಏಕಕಾಲಕ್ಕೆ ಎರಡು ಸ್ವಯಂವೇದ್ಯ ವಿಶ್ವಗಳು ಎಂದು ಕರೆಯುತ್ತಿದ್ದನೇನೋ. ಪ್ರತಿ ಶಬ್ದವು ಎರಡು ಸನ್ನಿವೇಶವನ್ನು ಏಕಕಾಲಕ್ಕೆ ಹೊಂದಿದೆ. ಅವರು ಬಿಳಿವರ್ಣದವರನ್ನು ಮಾತ್ರ ಉದ್ದೇಶಿಸಿದ್ದರೆ, ಕಟುವಾಗಿ, ಗಡುಸಾಗಿ ಬರೆಯುವ ಸಾಧ್ಯತೆ ಇತ್ತು. ಕಪ್ಪು ವರ್ಣೀಯರಿಗಷ್ಟೇ ಆಗಿದ್ದರೆ ಇನ್ನಷ್ಟು ಸಾಂದ್ರವಾಗಿ ಬರೆಯುತ್ತಿದ್ದರೇನೋ.


ಬರಹದ ಮೂಲಕ ತನ್ನ ಸಮುದಾಯದ ಹಿತವನ್ನು ಸಾಧಿಸುತ್ತೇನೆ ಎಂದು ನಿರ್ಧರಿಸಿದ್ದರೂ ಕೂಡ ಎಲ್ಲವನ್ನೂ ನೆಲೆಸಿರುವ ಲೇಖಕ, ಎಲ್ಲವನ್ನೂ ಹೊರಹಾಕುವುದಿಲ್ಲ. ಅದ್ದರಿಂದಲೇ ಆತನ ಕೃತಿ ಮೌಲ್ಯಾತೀತವಾಗಿ ಬದಲಾಗುತ್ತದೆ.

ಸ್ವಾತಂತ್ರ್ಯದ ಅತ್ಯಂತ ಮುಖ್ಯವಾದ ಲಕ್ಷಣವೆಂದರೆ - ಒಂದು ಸನ್ನಿವೇಶದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದೇ ಆಗಿದೆ. ಸ್ವಾತಂತ್ರ್ಯದ ಮೇಲೆ ಆಕೋತ್ತರಗಳ ಒತ್ತಡವನ್ನು ಹೇರದಿರುವುದೇ ಸನ್ನಿವೇಶವಾಗಿದೆ. ಒಂದು ಕಾಲಮಾನದ ಸಾಹಿತ್ಯವು ಎಲ್ಲದರಿಂದ ಮುಕ್ತಗೊಂಡ ಸ್ಥಿರ ಪ್ರಜ್ಞೆಯನ್ನು ಪಡೆಯಲು ಸಾಧ್ಯವಾಗದಾಗ; ತಾತ್ಕಾಲಿಕ ಒತ್ತಡ ಅಥವಾ ಸಿದ್ಧಾಂತಗಳಿಗೆ ಸಿಲುಕಿದಾಗ, ತನ್ನ ಮೇಲೆಯೂ ಶರತ್ತುಗಳಿವೆ, ತಾನೇ ಅಂತಿಮವಲ್ಲ, ಎಂದು ತಿಳಿದುಕೊಳ್ಳುವ ಬದಲು, ತಾನೇ ಅಂತಿಮ ವಿಧಾನವೆಂದು ತಿಳಿದಾಗ ಅನ್ಯವಸ್ತುವಾಗಿ ಉಳಿದುಬಿಡುತ್ತದೆ.

ಬರಹಗಾರನಾದವನು, ಒಂದು ವೃತ್ತದಂತೆ, ವಿಶ್ವ ಓದುಗನಿಗಾಗಿ ಬರೆಯುತ್ತಾನೆ ಎಂದು ನಾವು ಹೇಳಿದೆವು. ಆದಾದ ಮೇಲೆ, ಆತನನ್ನು ಕೆಲವರು ಮಾತ್ರ ಓದುತ್ತಾರೆ ಎಂಬುದನ್ನೂ ನೋಡಿದೆವು. ಈ ಹಂತದಲ್ಲೇ, ವಾಸ್ತವದಲ್ಲಿ ಸಾರ್ವಜನಿಕರು ಯಾರು, ಆದರ್ಶ ಸಾರ್ವಜನಿಕರು ಯಾರು ಎಂಬ ಮಾತುಗಳು ಬಂದವು. ಲೇಖಕನಿಗೆ ಈಗ ಪ್ರಾಪ್ತವಾಗಿರುವಂತೆಯೇ, ನಾವು ತಿಳಿದಿರದ ಭವಿಷ್ಯದಲ್ಲಿಯೂ ಕೂಡ ಹಿಡಿತುಂಬ ಓದುಗರು ದೊರಕುತ್ತಾರೆ. ಸಾಹಿತ್ಯದ ಈ ಹಿರಿಮೆಯ ನೀಷೆ ಹೇಳುವ ಚಿರಂತನತೆಯ ಪುನರಾವರ್ತನೆಯನ್ನು

ಹೋಲುತ್ತದೆ. ಇದು ಇತಿಹಾಸ, ಇಲ್ಲಿ ಮತ್ತು ಅಲ್ಲಿಗಳ ವಿರುದ್ಧದ ಹೋರಾಟವಾಗಿದ್ದು, ಅವಕಾಶದಲ್ಲಿ ಘಟಿಸಿದ ವಿಫಲತೆಗಳನ್ನು ಕಾಲದ ಅನಂತತೆಯಲ್ಲಿ ಮರುಕಳಿಸಿ ಸರಿದೂಗಿಸುತ್ತದೆ.

ವರ್ಗ, ಸರ್ವಾಧಿಕಾರ, ಅಸ್ಥಿರತೆಗಳಿಲ್ಲದ ಸಮಾಜದಲ್ಲಿ ಸಾಹಿತ್ಯವು ತನ್ನಷ್ಟಕ್ಕೆ ಪ್ರಜ್ಞಾಪೂರ್ವಕವಾಗಿರುತ್ತದೆ. ತನ್ನ ಸ್ವರೂಪ, ವಿಷಯ, ಸಮುದಾಯಗಳು ಅನನ್ಯವಾಗಿವೆ ಎಂಬುದು ಅರಿತುಕೊಳ್ಳುತ್ತದೆ. ವ್ಯಕ್ತಿ ಆಶೋತ್ತರಗಳನ್ನು ಪ್ರಕಟಿಸುವಾಗ ಆಳದ ಸಾಮುದಾಯಿಕ ಭಾವನೆಗಳನ್ನು ಒಳಗೊಳ್ಳುವಂತೆ ಔಪಚಾರಿಕ ವಾಕ್‌ಸ್ವಾತಂತ್ರ್ಯ ಮತ್ತು ಕ್ರಿಯಾ ಸ್ವಾತಂತ್ರ್ಯಗಳು ಒಂದಕ್ಕೊಂದು ಬೆಸೆದು-ಪಡೆಯುತ್ತ ಪರಿಪೂರ್ಣವಾಗಿರುತ್ತವೆ. ಖಂಡಿತ ಇದೊಂದು ಅತ್ಯಂತ ಆದರ್ಶಮಯ ಅಪೇಕ್ಷೆ. ಈ ಬಗೆಯ ಸಮಾಜವನ್ನು ಕನಸುವುದು ಸಾಧ್ಯ. ಆದರೆ, ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಯಾವುದೇ ವಾಸ್ತವಿಕ ವಿಧಾನಗಳಿಲ್ಲ. ಯಾವ ಸನ್ನಿವೇಶದಲ್ಲಿ ಸಾಹಿತ್ಯವು ತನ್ನ ಪರಿಶುದ್ಧತೆಯಲ್ಲಿ ಸಂಪೂರ್ಣವಾಗಿ ಪ್ರಕಟಗೊಳ್ಳಬಹುದೆಂದು ನಮಗದು ತಿಳಿಸಿದೆಯಷ್ಟೇ. ಈ ಅಪೇಕ್ಷೆಗಳು ಇಂದು ನೆರವೇರಿಲ್ಲ ಎಂಬುದರ ಕುರಿತು ಅನುಮಾನ ಬೇಡ. ಆದ್ದರಿಂದಲೇ ನಾವಿಂದು ಬರೆಯುವುದು ಅವಶ್ಯಕವಾಗಿದೆ. ಅಂತೆಯೇ, ನಮ್ಮೆದುರಿನ ತುರ್ತು ಯಾವುದು; ಬರಹಗಾರನೊಬ್ಬನ ಸಮುದಾಯ ಯಾವುದು; ಆತನ ಐತಿಹ್ಯಗಳು ಯಾವುವು; ಆತ ಯಾವುದರ ಕುರಿತು ಬರೆಯಲು ಬಯಸುತ್ತಾನೆ; ಆತ ಏನನ್ನು ಬರೆಯಬಹುದು ಮತ್ತು ಏನನ್ನು ಬರೆಯಲೇಬೇಕಿದೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಕೂಡ.



ಪುಸ್ತಕ ವಿಮರ್ಶೆ

ಹಚ್ಚಿಟ್ಟ ಹಣತೆಯ ಬೆಳಕಿನೆಡೆಗೆ

ಕವಿತೆಗಳಿಗೆ ಬಹಳ ದೊಡ್ಡದಾದ ಒಂದು ಕ್ಯಾನ್ವಾಸ್ ಇರುವುದರಿಂದ ಅವುಗಳನ್ನು ವಾಚಿಸುವಾಗ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯದಾದ ಅರ್ಥವನ್ನು ಕೊಡುತ್ತವೆ. ಒಂದು ಕವಿತೆಯನ್ನು ಬಿಚ್ಚಿಕೊಂಡರೆ ಅವುಗಳ ಒಳ ಹೂರಣ ಒಂದು ನೀಳ್ಗತೆಯೋ ಅಥವಾ ಮಹಾನ್ ಕಾದಂಬರಿಯೋ ಆಗಬಲ್ಲುದು. ಹಾಗಾಗಿ ಕವಿತೆಗಳಿಗೆ ಚೌಕಟ್ಟನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವು ತೆರೆದಿಡುವ ಅರ್ಥವ್ಯಾಪ್ತಿ ವಿಸ್ತೃತವಾದದ್ದು. ಇವುಗಳ ಜೊತೆಗೇನೆ ಕವಿತೆ ಸ್ಫುರಿಸುವ ಮಾಧುರ್ಯತೆ ಓದುಗನ ಮನದಾಳಕ್ಕೆ ಇಳಿದು ಅಲ್ಲಿಯೇ ರಿಂಗಣಿಸಿ ಇನ್ನಷ್ಟು ಭಾವಲೋಕಕ್ಕೊಯ್ಯುವ ಶಕ್ತಿ ಕೂಡ ಕವಿತೆಗಳಿಗಿದೆ. ಹಾಗಾಗಿ ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು' ಕೆ. ಎಸ್. ನರಸಿಂಹಸ್ವಾಮಿ ಅವರ 'ಶಿರಿಗೆರೆಯ ನೀರಿನಲಿ ಅರಳು ತಾವರೆಯಲಿ' ಎಚ್. ಎಸ್. ಶಿವಪ್ರಕಾಶರ 'ನನ್ನ ಚೆಲ್ವಾಟದ ಮಲ್ಲಿಗೆ ತೋಟದ ಹಕ್ಕಿ ಈ ಸಿಟಿಯಡೆ ಹಾರಿ ಬಂತು' ಕವಿತೆಗಳಾಗಲಿ, ಕುವೆಂಪುರವರ ಕವಿತೆಗಳಾಗಲಿ ಇಂದಿಗೂ ಕೂಡ ನಮಗೆ ಶ್ರೇಷ್ಠವೆನಿಸುತ್ತವೆ. ಈ ಕವಿತೆಗಳ ಮರು ಓದು ಮತ್ತು ಹೊಸ ಪೀಳಿಗೆಯ ಓದು ಮುಖ್ಯವಾಗುತ್ತಲೇ ಅವುಗಳಲ್ಲಿಯೂ ನವ್ಯೋತ್ತರದ ಕವಿತೆಗಳು ಹುಟ್ಟು ಹಾಕುವ ಬೆರಗು ಪ್ರಸ್ತುತ ಮುಖ್ಯವೆನಿಸುತ್ತದೆ. ಅಂತಹ ಹೊಸ ಪೀಳಿಗೆಯ ಕವಿತೆಗಳಲ್ಲಿ ಧನಂಜಯ ಕುಂಬ್ಳೆ ಅವರ 'ಹಣತೆ ಹಾಡು' ಕೂಡ ಗುರುತಿಸಿಕೊಳ್ಳುತ್ತದೆ.

ಧನಂಜಯ ಕುಂಬ್ಳೆಯವರ ಈ ಕವನ ಸಂಕಲನ ಎರಡು ರೀತಿಯಲ್ಲಿ ಬಹಳ ಮುಖ್ಯವೆನಿಸುತ್ತದೆ. ಒಂದು ೨೦೧೧ ರ ಮುದ್ದಣ ಕಾವ್ಯ ಪ್ರಶಸ್ತಿ ಪುರಸ್ಕೃತ ಕೃತಿ ಎನ್ನುವುದಕ್ಕೆ, ಮತ್ತೊಂದು ಇದು ಗಡಿನಾಡಿನ ಕನ್ನಡಿಗನೊಬ್ಬನ ಕವಿತೆಗಳೆನ್ನುವುದಕ್ಕೆ. ಅದಲ್ಲದೆ 'ಹಣತೆ ಹಾಡು' ನವಿರಾದ ಕಾವ್ಯಗಳ ಗುಚ್ಛ ಮತ್ತು ಕೆಎಸ್‌ಎನ್ ಅವರ ಕವನಗಳನ್ನು ನೆನಪಿಸುವ ಪ್ರೇಮಕಾವ್ಯದಿಂದ ಹಿಡಿದು ದೇಶಪ್ರೇಮವನ್ನು ಸೂಸುವ ಕವನಗಳವರೆಗೂ ಇವು ಕಂಪ ಬೀರುತ್ತವೆ.

ಪ್ರೀತಿ, ಪ್ರೇಮ ಭಾಷೆಗಳಿಗೆ ಹೇಗೆ ಅಂತ್ಯವೆನ್ನುವುದಿಲ್ಲವೋ ಹಾಗೆಯೇ ಕಾವ್ಯದ ಪರಿಭಾಷೆಯಲ್ಲಿ ಬಳಕೆಯಾಗುವ



ಹಣತೆ ಹಾಡು

ಲೇಖಕರು : **ಧನಂಜಯ ಕುಂಬ್ಳೆ**

ಪ್ರಕಾಶಕರು: **ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ,**

ಬೆಂಗಳೂರು - ೪; ಬೆಲೆ : ರೂ. ೩೫/-

ಕೊಳಲು, ಗಿರಿಕಂದರದಂತಹ ಪದಗಳು ಮತ್ತೆ ಮತ್ತೆ ಉದಯಿಸಿ ಜೀವನ್ಮುಖಿ ಉಲ್ಲಾಸವನ್ನ ಪ್ರಸ್ತುತಪಡಿಸುವುದರಿಂದ ಇಲ್ಲಿಯ ನಾಲ್ಕು ಕವಿತೆಗಳಲ್ಲಿ ಬರುವ ಕೊಳಲು, ಒಂದೊಂದು ಕವಿತೆಯಲ್ಲೂ ಬೇರೆಯದೇ ಆದ ಮಾದುರ್ಯತೆಯನ್ನು ಹೊರಡಿಸುತ್ತದೆ. ಕನ್ನಡದ ಕಾವ್ಯ ಪದಗಳಿಗೆ 'ಔಟ್ ಡೇಟೆಡ್' ಅನ್ನುವಂತದ್ದು ಇಲ್ಲ. ಇದು ಗದ್ಯ ಪ್ರಕಾರದಲ್ಲಿ ಬಳಸಬಹುದಾದ ಪದವಾದರೂ ಕಾವ್ಯದಲ್ಲಿ ಎಷ್ಟು ಕವಿಗಳು ಬರೆದರೂ ಬತ್ತದ ಚಿಲುಮೆಯ ಪದಗಳೇ ಪ್ರೀತಿ, ಪ್ರೇಮ, ಕೊಳಲು, ಕೊರಳು... ಇವು ಸವಕಲಾಗಿ ಕಾಣುವುದು ಪ್ರೀತಿ ಕಳೆದುಕೊಂಡ ಮನಸ್ಸುಗಳಲ್ಲಿ ಮಾತ್ರ! ಹಾಗಾಗಿ ಮೈಸೂರು ಮಲ್ಲಿಗೆಯ ಕವಿತೆಗಳಲ್ಲಿ ಕಂಡಿರುವಂತೆ ಹಣತೆಯಲ್ಲಿ ಆರಲಾರದ ಬೆಳಕು ಪಸರಿಸಿರುವುದನ್ನು ಕಾಣಬಹುದು.

ಈ ಸಂಕಲನದ ಎಲ್ಲಾ ಕವಿತೆಗಳು ಗುನುಗುನಿಸುವಂತಿದೆ. ಭಾವದೀಪ್ತಿಯ ಈ ಕವಿತೆಗಳೆಲ್ಲವೂ ಗಾಯನವಾಗಿಯೂ ಮಾಧುರ್ಯ ತುಂಬಬಲ್ಲವು. ಹಾಗಾಗಿ ಇಲ್ಲಿ ಬರುವ ಕೊಳಲು ಕವಿತೆಯ 'ಚೈತನ್ಯ ತುಂಬಿದ ಕೊಳಲು'; ಮೊನಾಲಿಸಾದ 'ಹಾವಸ್ಸಿ ಕುಂಚದ ಎಳೆಯ ಜೀವ ತಂತು'; ದಿವ್ಯಾರ್ಪಣೆಯ 'ಬಳುಕು ಸೊಗಸಿನ ತಂಪು ಗಾಳಿಯಲಿ'; ಜೀವಚೈತನ್ಯದ ಬೇರು ಕವಿತೆಯ 'ಮೊಗ್ಗು ಚಿಗುರಾಗಿ ಎಲೆ ಹಸುರಾಗಿ'; ಒಂಟಿ ಮನಸು ಅರಳುವ ಸಮಯದ 'ಸುರಿವ ಪರಿಮಳಕೆ ಮುಖವೊಡ್ಡಿ ನಿಂತಾಗ'; ಶಿಲ್ಪದ 'ತನ್ಮಯತೆಯ ಪೆಟ್ಟುಗುದುರುವ ಶಬ್ದಕ್ಕೂ ಅರ್ಥವಿದೆ ಲಯವಿದೆ ಪ್ರಾಸವಿದೆ'; 'ಕಾಡಿದ ಕೊಳಲು'ವಿನ 'ಅರಳಿದ ಹೂಗಳ ಮಡಿಲಲಿ ಕುಳಿತು ಕಂಬನಿ ನೀರನು'; 'ಕನಸ ಹಕ್ಕಿಗಳು ಹಾಡುತಿವೆ'ಯ 'ಜೇನನು ಹೀರಲು ಹಾರುವ ದುಂಬಿ ಹೂವಿನ ಕರೆಗೆ'; 'ಸ್ಪಂದನ'ದ 'ಕರೆಯ ಕಂಪಿನಲಿ ಕರಗಿ ನೀನಾಗಬಲ್ಲೆ'; 'ಹಣತೆಯ ಹಾಡು'ವಿನ 'ಹೃದಯ ಹೃದಯಗಳ ತಳದಲ್ಲಿ ಕನಸಿಹುದು' ಈ ಕವಿತೆಗಳಲ್ಲಾ ತೆರೆದಿಡುವಂತಹುದು ಜೀವನ್ಮುಖಿಯ ಆಶಯಗಳನ್ನ, ಪ್ರೀತಿ ಪ್ರೇಮಗಳನ್ನ. ಇವೆಲ್ಲವೂ ಪಲುಕು ಪಲುಕು ಒಲವನ್ನ ಬಿಡಿಯುವಂತದ್ದು. ಬದುಕು ಇಲ್ಲವೆಂದುಕೊಂಡು ನೆನಪು ಕಾಡುವಾಗ ತ್ಯಾಗದ ಬೆಲೆ ಅರಿತು ಮನಸ್ಸು ಮಿಡಿದು ಅರ್ಪಣೆಯ ಭಾವವನ್ನುದಯಿಸುವ 'ಪ್ರತಿಧ್ವನಿ' ತನ್ನ ತಾನು ಸುರುಟಿಕೊಳ್ಳುತ್ತಾ ಬದುಕನ್ನೂ ಸುರುಟಿಕೊಳ್ಳುವ ಸ್ವಾಭಿಮಾನದ 'ಬೀಡಿ ಕಟ್ಟುವ ಹುಡುಗಿಗೆ' ಯಾರಿಗೂ ಬೇಡವಾದ ಅಬ್ಬಲಿಗೆ ಅಮೂರ್ತತೆಯ ಪಿಷಬಟ್ಟಲು. ಗೊತ್ತಿದ್ದು ಗೊತ್ತಿಲ್ಲದೆ ಮಾಡಿದ 'ಮೊದಲ ಪಾಪ' ನಿಸ್ಪೃಹ್ಯದ ರೌದ್ರತೆಯ ನಡುವೆಯೂ, ದೇಶಭಿಮಾನದ ಕಾರ್ಗಿಲ್ ಗೆಳೆಯನಿಗೆ...

'ಹೇ ಗೆಳೆಯ ನಿನಗಿದೋ ನಮ್ಮ ಹೂವ ತೊಡುಗೆ
ಹೂಗಳಿಗೆ ಪರಿಮಳ ಅದು ನಿನ್ನ ಕೊಡುಗೆ'

ಹೀಗೆ ಇಲ್ಲಿಯ ಎಲ್ಲಾ ಕವನಗಳಲ್ಲಿಯೂ ಒಂದು ಆಸೆ, ಅದಕ್ಕೆ ವ್ಯತಿರಿಕ್ತವಾಗಿ ನಿರಾಸೆ ಮತ್ತೆ ನಿರಾಸೆಯನ್ನು ಮೆಟ್ಟಿ ನಿಲ್ಲುವ ಮತ್ತೊಂದು ಆಶಾಭಾವನೆಯಿರುವುದು ಕವಿಯ ಕನಸುಗಳು.

'ಗೊತ್ತೇನ್ರಿ ನಿಮಗ' ಕವಿತೆಯ ರಾಜನ ಮುಗ್ಧತೆ 'ನಾನು' ಕವಿತೆಯ 'ಧನು'ವಿನ ಮುಗ್ಧತೆ ಕಾವ್ಯದೋದುಗನ ತುಟಿಯನ್ನು ಬಿರಿಯುವ ಕವಿತೆಗಳು. ಹಾಗಾಗಿ ಈ ಸಂಕಲನದ ಕವಿತೆಗಳಲ್ಲಿ ನವರಸಗಳು ತುಂಬಿರುವುದರಿಂದಲೇ ಒಂದು ಸುಂದರವಾದ ಕಾವ್ಯಾನಂದವನ್ನು ಇವು ಹರಿಯಬಿಡುತ್ತವೆ. ಇದು ಧನಂಜಯ ಕುಂಬ್ಳೆಯವರ ಮೂರನೆಯ ಕವನ ಸಂಕಲನವೂ ಹೌದು. ವೈದೇಹಿಯವರ ಮುನ್ನುಡಿಯಿರುವ ಈ ಕವನಸಂಕಲನ ಓದುಗರ ಪ್ರೀತಿಯನ್ನು ಗಳಿಸುವುದರಲ್ಲಿ ಎರಡು ಮಾತಿಲ್ಲ.

ಹಕ್ಕಿ ಚೆಲ್ಲಿದ ಬೀಜದ ಮೊಳಕೆ

'ಹಕ್ಕಿ ಚೆಲ್ಲಿದ ಬೀಜ' ಶೀರ್ಷಿಕೆಯೆ ಅಮೂರ್ತತೆಯನ್ನು ಸೂಚಿಸುವ ಸಿ ಎನ್ ರಾಮಚಂದ್ರ ಅವರ ಮೂರನೆಯ ಕಥಾಸಂಕಲನ. ಹಕ್ಕಿ ಎಲ್ಲಿ ಬೇಕಾದರೂ ಬೀಜವನ್ನು ಚೆಲ್ಲಬಹುದು. ಇದು ಅಮೂರ್ತತೆ. ಆದರೆ ಆ ಬೀಜ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವುದು ಅದು ಬೆಳೆಯೊಡೆಯುವಲ್ಲಿಂದ. ಆ ಪ್ರಕ್ರಿಯೆ ನೆಲದ ಮೇಲೆಯೇ ಆಗಬೇಕೆಂದೇನಿಲ್ಲ. ಮರದ ಮೇಲೂ ಬೀಜ ಮೊಳಕೆಯೊಡೆಯಬಹುದು. ಇದು ಅದ್ಭುತವೂ ಅಲ್ಲ, ಅಗೋಚರವೂ ಅಲ್ಲ. ಎಲ್ಲಿ ಮೊಳಕೆಯೊಡೆಯುವುದಕ್ಕೆ ಅವಕಾಶವಿದೆಯೋ ಅಲ್ಲಿಯೇ ಗಿಡವಾಗಬಹುದು. ಆದರೆ ಅದರ ಮೂಲವನ್ನು ಶೋಧಿಸುವುದು ಬಹಳ ಕಷ್ಟ. ಅದು ಯಾವ ಮರದ ಬೀಜ? ಆ ಬೀಜ ಅಲ್ಲಿಯೇ ಗಿಡವಾಗಿ ಬೆಳೆಯುವುದೆ? ಆ ಬೀಜಕ್ಕೆ ಆಸರೆಯಾಗುವ ಮರ ಕೊನೆಯವರೆಗೂ ಗಿಡವನ್ನು ತಾಳಿಕೊಳ್ಳುವುದೆ? ಇದು ಅಸ್ಪಷ್ಟ. ಹಾಗೆಯೇ ಇಲ್ಲಿಯ ಕಥೆಗಳ ಸಕ್ರೂಲಂಸಂ. ಹುಟ್ಟುವುದು ಎಲ್ಲಿಯೋ ಬೆಳೆಯುವುದು ಇನ್ನೆಲ್ಲಿಯೋ? ಆದರೆ ಅವೆರಡರ ನಡುವೆ ಹುಟ್ಟಿಕೊಳ್ಳುವ ಕುತೂಹಲವೇ ಹುಡುಕಾಟವಾಗಿ ಇಲ್ಲಿಯ ಕಥೆಗಳಲ್ಲಿ ಗೋಚರಿಸುತ್ತದೆ. ಅದು ಕಳೆದುಕೊಂಡ ಸಂಬಂಧಗಳ ಹುಡುಕಾಟವಿರಬಹುದು, ಬಾಲ್ಯದ ಹುಡುಕಾಟವಿರಬಹುದು. ಒಟ್ಟು ಅಸ್ಮಿತೆಯನ್ನು ಉಳಿಸಿಕೊಳ್ಳುವ ಹೋರಾಟ ಸಾಧಾರಣ ಎಲ್ಲಾ ಕಥೆಗಳಲ್ಲಿಯು ಕಾಣಸಿಗುತ್ತದೆ.

ಕಥೆಗಳನ್ನು ಓದುತ್ತಲೇ ಒಳ್ಳೆಕ್ಕೆ ಬಿಟ್ಟು ಹೋಗುವಂತಹ ತವಕಗಳು ಇಲ್ಲಿಯ ಪಾತ್ರಗಳಲ್ಲಿ ಕಾಣುತ್ತವಾದರೂ. ಪಾತ್ರಗಳಲ್ಲಿ ಜಾತೀಯತೆಯನ್ನು ಗುರುತಿಸಿಕೊಂಡು ಜಾತ್ಯಾತೀತವನ್ನು ಮೀರುವ ಪ್ರಯತ್ನ ಇಲ್ಲಿಯದಾಗಿದೆ. ಹಾಗಾಗಿ ರಾಬರ್ಟ್ ಪದ್ಮರಾಜನಾಗಲಿ, ಭಾರತಿಪುತ್ರನ್, ಇಳಾಪ್ಯೆ, ಪಾತ್ರಗಳಿಗೆಲ್ಲಾ ಜಾತೀಯತೆ ಮುಖ್ಯವೆನಿಸುವುದಿಲ್ಲ. ಇವು ಬದುಕನ್ನು ಕಟ್ಟಿಕೊಳ್ಳುವಲ್ಲಿ, ಸಂಬಂಧಗಳನ್ನು ಉಳಿಸಿಕೊಳ್ಳುವಲ್ಲಿ ತುಡಿತಕ್ಕೊಳಗಾಗುತ್ತಲೇ ಇರುತ್ತವೆ.

'ಹಕ್ಕಿ ಚೆಲ್ಲಿದ ಬೀಜ', 'ಥೀಯೋಯಸ' ಕಥೆಗಳನ್ನು ಓದುವಾಗ ಜನಪ್ರಿಯ ಶೈಲಿಯ ಒಂದು ಅಂಚಿನಲ್ಲಿ ನಿರೂಪಣೆ ಸಾಗುತ್ತದಾದರೂ, ಅವಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ 'ಸಂಥಿಂಗ್' ಇದೆ ಅನಿಸದಿರದು. ಥೀಯೋಯೊನ ಕಥೆಯ



ಹಕ್ಕಿ ಚೆಲ್ಲಿದ ಬೀಜ

ಲೇಖಕರು : ಸಿ ಎನ್ ರಾಮಚಂದ್ರ

ಪ್ರಕಾಶಕರು: ಸುಮುಖ ಪ್ರಕಾಶನ, ಮಾಗಡಿ ರಸ್ತೆ, ಬೆಂಗಳೂರು

ಬೆಲೆ : ರೂ. ೭೦/-

ಹುಡುಕಾಟದಲ್ಲಿ ಕೊನೆಗೆ ಸಿಗುವುದು ನಿರಾಶೆಯಾದರೂ ಆ ನಿರಾಶೆಯೆನ್ನುವುದು ಸಾಯಿಸುವವರೆಗೂ ಕಾಡುವ ಮತ್ತು ಅನ್ಯ ದಾರಿಯಲ್ಲಿ ಸಾಗಿದ ಪರಿಗೆ ಶಾಪವೇನೋ ಅನ್ನುವ ರೀತಿಯಲ್ಲಿ ಭಾರತಿಯನ್ನು ಅಂತರ್ಮುಖಿಯನ್ನಾಗಿಸುವ ಹಾಗಿದೆ. ಅವಳ ಪ್ರೀತಿಯ ಸಾಕ್ಷ್ಯವೊಂದು ಶೋಚನೀಯ ಸ್ಥಿತಿಯಲ್ಲಿರುವುದು ಎಂತಹ ಓದುಗನ ಮನಸ್ಸನ್ನಾದರೂ ಸ್ವಲ್ಪ ಮಟ್ಟಿಗೆ ಅಲ್ಲಾಡಿಸಿ ಬಿಡುತ್ತದೆ. ಹಾಗೆಯೇ ಈ ಕಥೆ ಗಂಭೀರವಾಗಿ ಓದಿಸಿಕೊಳ್ಳುತ್ತಲೇ ತಟ್ಟನೆ ಸಿನಿಮೀಯತೆಗೆ ವಾಲುವುದರಿಂದ ಕೊಂಚ ಇತರೆ ಕಥೆಗಳ ಜೊತೆಗೆ ತುಲನಾತ್ಮಕವಾಗಿ ನೋಡುವುದಕ್ಕೆ ಅಸಾಧ್ಯವೆನಿಸುತ್ತದೆ. ಈ ಕಥೆಯಲ್ಲಿ ಭಾರತಿ ಅವಳ ಕ್ಲಾಸ್‌ಮೇಟ್ ಉನ್ನತ ಸ್ಥಾನದಲ್ಲಿರುವ ಶಂಕರನ ಕ್ವಾರ್ಟರ್ಸ್‌ಗೆ ಅವನ ಅನುಮತಿಯಿಲ್ಲದೆ ಬಂದು ಅವನನ್ನೇ ಅತಿಥಿಯ ರೂಪದಲ್ಲಿ ಕ್ಯಾರ್ ತೆಗೆದುಕೊಳ್ಳುವುದು. ಇದು ತೀರ ಸಿನಿಮೀಯವಾಗಿ ತೋರುತ್ತದೆ. ಆದರೂ ಇದೊಂದು ನೀಳ್ಗತೆಯಾಗಿ ಮತ್ತು ಕಥನ ಶೈಲಿಯಲ್ಲಿ ವಿಭಿನ್ನತೆಯಿರುವುದರಿಂದ ಕಥೆಯ ಉತ್ತರಾರ್ಧ ಪರಿಣಾಮಕಾರಿಯಾಗಿ ಮೂಡಿಬಂದಿರುವುದರಿಂದ ಮಗುವಿನಂತಹ ಮಗನ ಪಾತ್ರ ಓದುಗನ ಮನದಲ್ಲಿಯೇ ಉಳಿದು ಬಿಡುತ್ತದೆ.

ಸಿ.ಎನ್. ರಾಮಚಂದ್ರ ಅವರ ಕಥೆಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ, ಕಥೆಯು ಬೆಳೆಯುತ್ತಾ ಹೋದ ಹಾಗೆ ಕಥೆಯಲ್ಲಿ ಯಾವುದು ಮುಖ್ಯ ಅನಿಸುವುದಿಲ್ಲವೋ, ಅದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಹಾಗಾಗಿ 'ನಿಕ್ಷೇಪ' ಕಥೆ ತುಸು ವಿಭಿನ್ನವಾಗಿ ನಿಲ್ಲುತ್ತದೆ. ಇದಕ್ಕೆ ಆ ಕಥೆ ನಡೆಯುವ ಕಾಲಘಟ್ಟವೂ ಕಾರಣವಾಗಿರಬಹುದು. ಇಲ್ಲಿಯೂ ಮನುಷ್ಯ ಸದಾ ತನ್ನ ನಿಕ್ಷೇಪವನ್ನು ಕಂಡುಕೊಳ್ಳುವಲ್ಲಿ ಮಾತ್ರ ತೊಡಗಿರುತ್ತಾನೆಯೆನ್ನುವುದಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಗೊಡ್ಡಾರ್ಡ್‌ನ ಹೆಸರು ಪ್ರತೀ ವಾಕ್ಯದಲ್ಲಿಯೂ ಪುನರಾವರ್ತನೆಯಾಗಿ ಇಂಗ್ಲಿಷ್ ಕಥಾ ಶೈಲಿಯನ್ನು ನೆನಪಿಸುತ್ತದೆ.

ಅತಂತ್ರವಾಗಿ ಬಿಡುವ ಮನುಷ್ಯನೊಬ್ಬನ ಚಿತ್ರಣವನ್ನು ನೀಡುವ 'ಸಮಾಧಿಯ ಮೇಲೊಂದು ಹೂವು' ಸಂಬಂಧವಿರದ ವ್ಯಕ್ತಿಯೊಬ್ಬನಿಗೆ ಜವಾಬ್ದಾರಿಯನ್ನು ಹೊರುವ ಕಾಮುಕದ ನಡುವೆ ಎಲ್ಲವನ್ನೂ ಕಳೆದುಕೊಳ್ಳುವ ನಿರಾಕತೆಯಾದರೆ, 'ಮೊತ್ತ' ಲಘು ಧಾಟಿಯಲ್ಲಿ ಸಾಗುವ ಗಂಭೀರ ವಾಸ್ತವದ ಚಿತ್ರಣವಾಗಿದೆ. ರಾಮಚಂದ್ರ ಅವರ ಕಥೆಗಳಲ್ಲಿಯ ಪಾತ್ರಗಳೆಲ್ಲವೂ ವಾಸ್ತವದಲ್ಲಿ ಕಾಣಸಿಗುವ ಪಾತ್ರಗಳಂತೆ ಕಂಡರೂ ಇಲ್ಲಿ ಕಥೆಗಾರ ಆ ಪಾತ್ರಗಳ ಒಳಕ್ಕಿಳಿದು ಪ್ರತಿಯೊಂದು ಪಾತ್ರಕ್ಕೂ ನ್ಯಾಯ ಒದಗಿಸುವಲ್ಲಿ ಸಫಲತೆಯನ್ನು ಸಾಧಿಸಿದ್ದಾರೆ. ಹಾಗಾಗಿಯೇ 'ಹುತ್ತಗಟ್ಟಿತು ಚಿತ್ತ'ದ ನಾಗವೇಣಿಯಾಗಲಿ, 'ಇಳೆ ನಿಮ್ಮ ಧ್ಯಾನ' ಕಥೆಯ ಇಕಾಫಟ್ ಪಾತ್ರವಾಗಲಿ ಮನೋಜ್ಞವಾಗಿ ಮೂಡಿ ಬರುವುದಕ್ಕೆ ಸಾಧ್ಯವಾಗಿದೆ. ಹೆಣ್ಣಿನ ಒಳ ಮನಸ್ಸು, ಆಕೆಯ ಅಸಹಾಯಕತೆ, ಹತಾಶೆ, ನೋವು, ನೆನಪುಗಳನ್ನ ಬಹಳ ಮಾರ್ಮಿಕವಾಗಿ ಚಿತ್ರಿಸಿರುವುದರಿಂದ ಕಥೆಗಳು ಮೆಲುಕು ಹಾಕುವಂತಿದೆ.


ಕೆಲವೊಮ್ಮೆ ಸಿನಿಮಾಗಳಲ್ಲಿ ಹಾಡುಗಳು ಕಥೆಯ ಬೆಳವಣಿಗೆಗೆ ಪೂರಕವಾದಂತೆ ಈ ಸಂಕಲನದ ಕೆಲವು ಕಥೆಗಳಲ್ಲಿ ಬಳಸಿದ ಉಪಮೆಗಳು ಕಥೆಯ ಮುಂದುವರಿದ ಭಾಗದಂತೆ ಕಾಣುತ್ತವೆ. ಇದು ಕಥನ ಶೈಲಿಯ ತಂತ್ರವಾಗಿ ಬಹಳ ಪರಿಣಾಮಕಾರಿಯಾಗಿದೆ. ಉದಾಹರಣೆಗೆ 'ಧೀಯೋಯೋನ' ಕಥೆಯ ಭಾರತಿ ಉಲ್ಲಾಳದಲ್ಲಿದ್ದಾಗಿನ ನೆನಪುಗಳನ್ನು ಮಾಡಿಕೊಂಡು, ಈ ಕಡಲಲ್ಲಿ ಅದೆಷ್ಟು ಉಬ್ಬರ... ಅದೆಷ್ಟು ಇಳಿತ... ನೇತ್ರಾವತಿಯಲ್ಲಿ ಅದೆಷ್ಟು ಬಾರಿ ನೆರೆ... ಧಾರಾಕಾರ ಮಳೆ... ಅನ್ನುವ ಮಾತುಗಳು ಅವಳ ಬದುಕಿನೊಂದಿಗಿನ ಹೋಲಿಕೆ. ಈ

ಸಾಲುಗಳು ಅಲ್ಲಿಯ ಆಗಿನ ಖುಷಿಯನ್ನ ನಿರೂಪಿಸುತ್ತವೆ. 'ಆತನನ್ನು ಕೊಂಡಾಡಿರಿ' ಮತ್ತು 'ಏನಿದೇನು ಪ್ರಭುವೇ...?' ಕಥೆಗಳು ಆಧ್ಯಾತ್ಮದತ್ತ ಹೊರಳುವ ಕಥೆಗಳಾಗಿ ಕಾಣುತ್ತವೆ. 'ಏನಿದೇನು ಪ್ರಭುವೇ...?' ಕಥೆಯಲ್ಲಿ ಬದುಕು ಸುಳ್ಳು ಸತ್ಯಗಳ ಪ್ರಪಂಚವನ್ನು ಮಲ್ಲಿಷ್ಟನಿಗೆ ತೋರಿಸುತ್ತದೆ. ಇದೂ ವಾಸ್ತವದಲ್ಲಿ ನಡೆಯುವ ಘಟನೆಯೇ ಅನ್ನುವ ಹಾಗಿದೆ.

ಹಲವು ರಂಗಗಳ 'ವೇಷ'

ಪ್ರಾದೇಶಿಕ ಕಥಾ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಕೃತಿಗಳನ್ನು ರಚಿಸುವ ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಸಚಿವರಾದ ಪ್ರಭಾಕರ ನೀರ್‌ಮಾರ್ಗ ಅವರ ಹದಿನೇಳನೆಯ ಕೃತಿ 'ವೇಷ'. ದಕ್ಷಿಣ ಕನ್ನಡದ ಸಾಂಸ್ಕೃತಿಕ, ಸಾಮಾಜಿಕ ಜನಜೀವನವನ್ನ ಬಹಳ ಮಾರ್ಮಿಕವಾಗಿ ಚಿತ್ರಿಸುವ ಇವರ ಕೃತಿಗಳಲ್ಲಿ ದಾಯಿತ್ರ, ಶಿಲ್ಪಾಸ, ಧಿಂಗಿಣ, ಮಂಗಳೂರು ಕ್ರಾಂತಿ, ಶಿಶಿರ, ಪ್ರತಿರೋಧ, ಜಾತ್ರೆ ಮತ್ತು ತಂದಲಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಾದೇಶಿಕ ಹಿನ್ನಲೆಯಲ್ಲಿಯೇ ಮೂಡಿ ಬಂದವುಗಳು. ಆದರೆ 'ವೇಷ' ಕಾದಂಬರಿ ಇವುಗಳ ನಡುವೆ ತುಸು ವಿಭಿನ್ನವಾಗಿ ರಚಿಸಿದ ಕಾದಂಬರಿಯಂತೆ ಕಂಡರೂ, ಇಲ್ಲಿಯ ಪಾತ್ರಗಳಿಗೆ ಯಾವುದೇ ಪ್ರಾಮುಖ್ಯತೆಯಿಲ್ಲದೆ ಕೇವಲ ಬಣ್ಣದ 'ವೇಷ' ಮತ್ತು ಬದುಕಿನ ವೇಷದ ಸುತ್ತಾ ಕಥೆ ಹೆಣೆದುಕೊಂಡಿದೆಯೇನೋ ಅನಿಸುತ್ತದೆ.

ಕಥೆಯ ಆರಂಭದಲ್ಲಿ ನವರಾತ್ರಿಯ ಸಮಯದಲ್ಲಿ ವಿಶೇಷವಾಗಿ ಕಾಣಸಿಕೊಳ್ಳುವ ವೇಷದ ಬಗ್ಗೆ 'ಪಿಪಿಲೋಗ್'ನ ಹಾಗೆ ಪ್ರಸ್ತಾಪಿಸುತ್ತಾ ದಕ್ಷಿಣ ಕನ್ನಡದಲ್ಲಿ ನವರಾತ್ರಿಯಲ್ಲಿ ಕಾಣಸುವ ವೇಷಗಳ ಬಗ್ಗೆ ವಿವರಗಳನ್ನು ನೀಡುತ್ತಾ ಕೃತಿಕಾರರು ಕಥೆಯೊಳಗೆ ಇಳಿಯುತ್ತಾರೆ. ಇಲ್ಲಿ ಆ ಬಣ್ಣದ ವೇಷಗಳ ಬಗ್ಗೆ ಕುತೂಹಲ ಬೆಳೆಸಿಕೊಳ್ಳುವ ಓದುಗನ ನಿರೀಕ್ಷೆಯನ್ನು ಹುಸಿಯಾಗಿಸುತ್ತಾ ಕರಾವಳಿಯ ಸಂಸ್ಕೃತಿಯನ್ನು ಬಿಂಬಿಸುವ ಉಳಿದ ಬಣ್ಣದ ಲೋಕಗಳಾದ



ವೇಷ

ಲೇಖಕರು : **ಪ್ರಭಾಕರ ನೀರ್‌ಮಾರ್ಗ**

ಪ್ರಕಾಶಕರು: **ಹೇಮಾವತಿ ಪ್ರಕಾಶನ,**

ನೀರ್‌ಮಾರ್ಗ, ಮಂಗಳೂರು - 575029; ಬೆಲೆ : **ರೂ. ೧೩೦/-**

ಯಕ್ಷಗಾನ, ನಾಟಕರಂಗಗಳಿಗೂ ಪಾತ್ರಗಳ ಮೂಲಕ ಇಳಿಯುತ್ತಾ ಹೊಸದೇನೋ ಹೇಳುತ್ತಾ ಕಥೆ ಸಾಗುತ್ತದೆ. ಇಲ್ಲಿ ಮಾರ್ನಮಿಯ ಹುಲಿವೇಷದ ವಿವರಣೆಗಳನ್ನು ಬಿಟ್ಟರೆ ಮತ್ತೆಲ್ಲವೂ ನಾಟಕ ಮತ್ತು ಯಕ್ಷಗಾನದ ಬಗೆಯೇ ಹೆಚ್ಚು ಒತ್ತುಕೊಟ್ಟು ಬರೆದಂತೆ ಕಾಣಿಸುತ್ತದೆ. 'ಧೀಂಗಿಣ' ಯಕ್ಷಗಾನದ ಒಳಹೊರಗನ್ನು ತಿಳಿಸುವ ಸಮಾಜಮುಖಿಯಾದ ಕಾದಂಬರಿಯಾದರೂ ಅಲ್ಲಿ ನೀರ್‌ಮಾರ್ಗ ಅವರ 'ಪೇಪರ್ ವರ್ಕ್' ಎದ್ದು ಕಾಣಿಸುತ್ತದೆ. 'ತಿಲ್ಲಾನ' ಕಾದಂಬರಿಯಲ್ಲಿ ಭೂತದಕೋಲದ ವಿವರಗಳಿರುವಂತೆ 'ವೇಷ'ದಲ್ಲಿಯೂ ಅಂತಹುದೊಂದನ್ನು ಹುಡುಕಿದರೆ ಸಿಗಲಾರದೆನ್ನುವುದು ನನ್ನ ಅನಿಸಿಕೆ. ಹಾಗಂತ ಕಾದಂಬರಿ ಏನನ್ನೂ ಹೇಳದೆ ಸುಮ್ಮನಿರುವುದಿಲ್ಲ.

'ವೇಷ' ಕಾದಂಬರಿಯ ಪ್ಲಸ್ ಪಾಯಿಂಟ್ ಇಲ್ಲಿ ಚಿತ್ರಿತವಾಗಿರುವ ನಾಲ್ವರು ಯುವಕರ ಚಿತ್ರಣ. ಸೆಲೂನಿನ ವೆಂಕಣ್ಣ, ಹೊಟೇಲ್‌ನ ಕೆಲಸ ಮಾಡಿಕೊಂಡಿರುವ ಗಿರಿಯಪ್ಪ, ಟೈಲರ್ ವೃತ್ತಿಯ ರಮೇಶ, ವೆಂಕಪ್ಪನಿಗೆ ಪ್ರತಿಸ್ಪರ್ಧಿಯಂತಿದ್ದ ಶಾಮಣ್ಣ ಇವರೆಲ್ಲ ಯೌವನ ಸಹಜವಾದ ಕನಸುಗಳನ್ನು ಕಾಣುತ್ತಾ ತಂದೆ, ತಾಯಿ, ಹಿರಿಯರನ್ನು ಮೀರಿ ತಮ್ಮ ತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ತುದಿಗಾಲಲ್ಲಿ ನಿಂತವರು. ಇವರೆಲ್ಲರ ಗುರಿಯೂ ಸಂಸ್ಕೃತಿಯತ್ತ ಚಾಚಿರುವುದು, ಕಳಚಬಹುದಾದ ಒಂದು ಕೊಂಡಿಯನ್ನು ಮತ್ತೆ ಬೆಸೆಯುವಲ್ಲಿ ಅಥವಾ ಅದನ್ನು ಮುಂದುವರಿಸಿಕೊಂಡು ಹೋಗಬಹುದಾದ ಪಾತ್ರಗಳಾಗಿ ಬಹು ಮುಖ್ಯವೆನಿಸುತ್ತವೆ. ಇಂದಿನ ರಾಕೇಟ್ ಯುಗದಲ್ಲಿ ನಮ್ಮ ಸಂಸ್ಕೃತಿ, ಸಂಸ್ಕಾರಗಳನ್ನು ದೂರೀಕರಿಸುತ್ತಾ ಹೊಸ ಸಂಸ್ಕೃತಿಯ ಹುಡುಕಾಟದಲ್ಲಿ ಕಳೆದು ಹೋಗುತ್ತಿರುವ ವೆಂಕಣ್ಣ, ಗಿರಿಯಪ್ಪ, ಶಾಮ ಮತ್ತು ರಮೇಶರು ಅಳಿಯುತ್ತಿರುವ ಸಂಸ್ಕೃತಿಯ ಅವಿಭಾಜ್ಯ ಅಂಗದಂತಿರುವ ಯಕ್ಷಗಾನ, ನಾಟಕಗಳತ್ತ ಹೊರಳುತ್ತಾ, ಆ ಸಾಂಸ್ಕೃತಿಯ ಮುಂದಿನ ಪೀಳಿಗೆಯವರಂತೆ ಕಾಣುತ್ತಾರೆಂದರೆ ಅತಿಶಯವಲ್ಲ. 'ಹಳೆ ಬೇರು ಹೊಸ ಚಿಗುರು ಸೇರಿದರೆ ಮರ ಸೊಬಗು' ಅನ್ನುವಂತೆ ಹಳೆಯದನ್ನು ಬಿಡದೆ ಹೊಸ ಪೀಳಿಗೆ ಅಂತಹ ಸಂಸ್ಕೃತಿಯನ್ನು ಮುಂದುವರೆಸಿಕೊಂಡರೆ ಆ ಸಂಸ್ಕೃತಿಯನ್ನು ಸಂಗ್ರಹಾಲದಲ್ಲಿಯ ವಸ್ತುಗಳಂತೆ ನೋಡಬೇಕಾಗಿಲ್ಲ ಅಥವಾ ದಾಖಲೆಗಳಿಂದ ನೋಡಿ ತಿಳಿದುಕೊಳ್ಳುವ ಅನಿವಾರ್ಯತೆಯೂ ಬರಲಾರದು.

ಆದರೆ ಈ ಕೃತಿಯಲ್ಲಿ ಹಿರಿಯರು ಯಾರೂ ಯುವಕರ ಮನಸ್ಸನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. ಎಲ್ಲರೂ ಅವರ ಆಸೆ, ಆಕಾಂಕ್ಷೆಗಳಿಗೆ ಅಡ್ಡಿಯಾಗುವವರೆ. ಮಕ್ಕಳು ಹೊಸ ದಾರಿ ಹಿಡಿದರೆ ಸಂಸ್ಕೃತಿಯ ನಾಶವಾಗುವುದು ಹೌದಾದರೂ ಅಲ್ಲಿ ಹೊಸ ಸಂಸ್ಕೃತಿಯೊಂದು ಯಾಕೆ ಹುಟ್ಟಿಕೊಳ್ಳಬಾರದು? ಸಮಾಜಮುಖಿಯಾದರೆ ಎಲ್ಲರೂ ಕೆಟ್ಟು ಹೋಗುತ್ತಾರೆನ್ನುವ ಆತಂಕ ಪೋಷಕರಲ್ಲಿದ್ದರೂ, ತಾವು ಬಣ್ಣದ ಬದುಕನ್ನು ಕಂಡು ಆನಂದ ಪಡುವವರೆ. ಇಲ್ಲಿ ಮನೆಯವರ ವಿರೋಧವಿದ್ದರೂ ಯುವಕರೇನೂ ಸುಮ್ಮನಿರುವುದಿಲ್ಲ, ತಮ್ಮ ಸದಭಿರುಚಿಗೆ ತಕ್ಕಂತೆ ಅವರು ಬಣ್ಣದ ಬದುಕಿನತ್ತ ಮುಖ ಮಾಡುತ್ತಾರೆ. ಆದರೆ ಬಣ್ಣದ ಬದುಕು ಅವರನ್ನು ನಿರಾಕರಿಸುವುದಿಲ್ಲ. ಆದರೆ ಈ ಕೃತಿಯಲ್ಲಿ ಈ ನಾಲ್ಕು ಪಾತ್ರಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಸೊರಗುತ್ತವೆ. ಸಮಾಜಮುಖಿಯಾದ ಯಾವ ಕಳಕಳಿಯೂ ಇಲ್ಲಿರದಿದ್ದರೂ ಸಾಂಸ್ಕೃತಿಕ ತಲ್ಲಣ ಮಾತ್ರ ಲೇಖಕನಲ್ಲಿ ಜಾಗೃತವಾಗಿರುವುದನ್ನು ಕಾಣುತ್ತೇವೆ. ಇದೇ ಜಾಗೃತಿ ಪಾತ್ರಗಳಲ್ಲಿಯೇ ಮೂಡಿ ಬರುತ್ತಿದ್ದರೆ 'ವೇಷ' ಇನ್ನಷ್ಟು ವಿಜೃಂಭಣೆಯಿಂದ ಕೂಡಿರುತ್ತಿತ್ತು.

ಸ್ತ್ರೀ ಪಾತ್ರಗಳಿಗೆ ಇಲ್ಲಿ ಪ್ರಾಮುಖ್ಯತೆ ಇಲ್ಲವೆನಿಸಿದರೂ ಇಲ್ಲಿ ಬರುವ ಶೈಲಶ್ರೀಯ ಪಾತ್ರ ಮಾತ್ರಾ ಮೆಚ್ಚುವಂತೆ ಇದೆ. ಸಿನಿಮಾದಂತಹ ಬಣ್ಣದ ಲೋಕಕ್ಕೆ ಇಳಿದರೂ ತನ್ನನ್ನು ತಾನು ಎಕ್ಸ್‌ಪೋಸ್ ಮಾಡಿಕೊಳ್ಳುವಲ್ಲಿ ಅವಳದ್ದು ಗಟ್ಟಿ ನಿರ್ಧಾರ. ಆ ಬಣ್ಣದಲೋಕದಲ್ಲಿದ್ದರೂ ರಂಗಭೂಮಿ ಕೈ ಬೀಸಿ ಕರೆದಾಗ ನಾಟಕದಲ್ಲಿ ಪಾತ್ರ ಮಾಡಲು ಒಪ್ಪಿಕೊಳ್ಳುವ ಅವಳ ಪಾತ್ರ ಒಂದು ನೈಜ ಕಲಾವಿದೆಯೊಬ್ಬಳಿಗಿರುವ ಕಾಳಜಿಯನ್ನು ತೋರಿಸುತ್ತದೆ. ಇದು ಇಂದಿನ ಯುವ ಪೀಳಿಗೆಯ ನಟಿಯರಿಗೆ ರೋಲ್ ಮಾಡೆಲ್ ಆಗಿರುವುದು ಮೆಚ್ಚತಕ್ಕದ್ದು. ಇನ್ನುಳಿದಂತೆ ಇಲ್ಲಿ ಬರುವ ರಾಜೀವಿಯಾಗಲಿ, ಶ್ರೀಜಾಳಾಗಲಿ, ಕಾಮಿನಿಯಾಗಲಿ ಗಟ್ಟಿ ಪಾತ್ರಗಳಾಗಿ ಉಳಿಯುವುದಿಲ್ಲ. ವೆಂಕಣ್ಣನಂತಹ ಯುವಕ ಹೀರೋನೆನಿಸಿಕೊಂಡರೂ ಎರಡು ಪ್ರೇಮ ಪ್ರಕರಣಗಳಲ್ಲಿಯೂ ಸೋಲುಣ್ಣುವವನು. ಆದರೂ ಕೊನೆಯಲ್ಲಿ ಆದರ್ಶತೆಯನ್ನು ತೋರಿಸುವ ಅವನು ವಿವಾಹ ಬಂಧನಕ್ಕೆ ಸಿಲುಕುವುದು 'ವೇಷ'ದ ನಾಟಕೀಯ ತಿರುವು ಆಗಿಬಿಡುತ್ತದೆ.


ಈ ಕಾದಂಬರಿಯಲ್ಲಿ ಗಮನಿಸಬಹುದಾದ ಮತ್ತೊಂದು ಮುಖ್ಯ ಅಂಶವೆಂದರೆ ಈ ಯುವಕರು ಪ್ರೀತಿಯಲ್ಲಿ ಬಿದ್ದರೂ ಯಾರೊಬ್ಬನೂ ಅದರಲ್ಲಿ ಗೆಲುವು ಕಾಣದಿರುವುದು ಕಾದಂಬರಿ ನಾಟಕೀಯತೆಯಿಂದ ಹೊರಗೆ ಬಂದಂತೆ ಕಾಣಿಸುತ್ತದೆ. ಇದು ಸಮಾಜದಲ್ಲಿ ಸಾಮಾನ್ಯವಾಗಿ ನಡೆಯುವ ಘಟನೆಗಳೆ. ಪ್ರೀತಿಸಿದ ಮೇಲೆ ಪರ್ಯವಸಾನ ಮದುವೆಯಲ್ಲೇ ಮುಗಿಯಬೇಕೆಂದೇನಿಲ್ಲವಲ್ಲ! ಗಿರಿಯಪ್ಪನನ್ನು ಹೊರತು ಪಡಿಸಿ ಮತ್ತೆಲ್ಲವೂ ಸೋಲುವ ಪ್ರೀತಿಗಳೆ ಇಲ್ಲಿ ಕಾಣಿಸುತ್ತವೆ.

ಕಾದಂಬರಿ ಮೊದಲಿನಿಂದ ಕೊನೆಯ ತನಕವೂ ಲವಲವಿಕೆಯಿಂದ ಓದಿಸಿಕೊಂಡು ಹೋಗುವುದಲ್ಲದೆ ಪ್ರಾದೇಶಿಕ ಭಾಷೆಯಿಂದಾಗಿ ಆಪ್ತವೆನಿಸುತ್ತದೆ. ಇಲ್ಲಿ ಪ್ರಯೋಗಿಸಿದ ಪ್ರಾದೇಶಿಕ ಪದಗಳ ಅನಿವಾರ್ಯತೆ ಕಥೆಗಿಲ್ಲವಾದರೂ ಕನ್ನಡಕ್ಕೆ ಅವುಗಳನ್ನು ಪರಿಚಯಿಸಿಕೊಟ್ಟಿರುವುದು ಶ್ಲಾಘನೀಯ. ಇಲ್ಲಿಯ ಕಥಾಹಂದರವು ಮೂರು ವಿಭಿನ್ನ ಕೋನಗಳಲ್ಲಿ ಹೊರಟು ಒಂದಕ್ಕೊಂದು ಕೊಂಡಿಯಿಲ್ಲದಂತಾಗಿ ಮೂರು ಭಾಗಗಳಲ್ಲಿ ಕಥೆಯನ್ನು ಓದಿದ ಅನುಭವವಾಗುತ್ತದೆ. ಎಲ್ಲಾ ಪಾತ್ರಗಳೂ ಕಥಾವಸ್ತುವಿನ ಜೊತೆಗೆ ಬೆಸೆದಿದ್ದರೆ ಕೃತಿ ಇನ್ನೂ ಪರಿಣಾಮಕಾರಿಯಾಗಿ ಮೂಡಿಬರುತ್ತಿತ್ತೇನೋ.

ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳ ವಸ್ತು ವೈವಿಧ್ಯತೆಯಿಂದ ಸಂಗ್ರಹಯೋಗ್ಯ ಮತ್ತು ಉಲ್ಲೇಖ ಪುಸ್ತಕವಾಗಿಯೂ ಉಪಯೋಗವಾಗಿರುವುದರಿಂದ ಒಮ್ಮೆಯಾದರೂ ಇವರ ಕೃತಿಗಳನ್ನು ಓದಲೇಬೇಕು.

ಅನು ಬೆಳ್ಳೆ (ರಾಘವೇಂದ್ರ ಬಿ ರಾವ್)
ಕೇರಾಫ್ ಶ್ರೀಮತಿ ಮೋಹಿನಿ ರಾವ್
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಹತ್ತಿರ
ಬೆಳ್ಮಣ್ಣು - ೫೭೪ ೧೧೧, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ
ಮೊ. ಸಂ. ೯೮೮೦ ೨೫೮೯೩೩ / ೯೪೮೧ ೭೫೪೭೧೩
ಇ-ಮೇಲ್: anubelle@rediffmail.com / anubellebrrao@gmail.

ಸಂಚಯ
ಗ್ಯಾ|ಲ|ರಿ|



SANCHAYA (Bi-Monthly), MAG(2) PRB-DECL : 309/94-95



ಕೊಟ್ಟಿಗೆಯ ಕಂದು ಹಸು ಬೆಳ್ಳಿಗರುವಿನ ಮೇಲೆ
ತಾಯಿ-ನಾಲಗೆ ಸುಳಿಸಿ ಬೆಳಗಾಯಿತು
ಬೆಳ್ಳಗೆಷ್ಟೋ ಹೂವು ಬಳ್ಳಿಬಳ್ಳಿಯ ಮೇಲೆ
ಪರಿಮಳನಿಟ್ಟಾಡಿ ಬೆಳಗಾಯಿತು.

• ಕೆ.ಎಸ್.ನರಸಿಂಹಸ್ವಾಮಿ

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925